
ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 13-14 ಏಪ್ರಿಲ್ 03, 2005 ಬೆಲೆ ರೂ. 3.00



ಉಡುಪಿಯಲ್ಲಿ ಫ್ಯಾಸಿಸ್ಟರ ಪ್ರೋಗ್ರಾಂ



ಬೆಳ್ತಂಗಡಿ : ದಲಿತ ಯುವತಿ ಮೇಲೆ ಭಜರಂಗಿಗಳ ಅತ್ಯಾಚಾರ



ಲೋಕಸಭಾಧ್ಯಕ್ಷರ ಸಂಸ್ಥೆ ಮೇಲೆ ಬಿಜೆಪಿ ಧಾಳಿ

ಪೇಟೆಂಟ್ ದಾಳಿಗೆ ಒಂದು ತಡೆ ಕದನ ಮುಂದುವರಿಕೆ


- ಬಲ ಪ್ರಯೋಗ ಮತ್ತು ನಕ್ಸಲ್‌ವಾದ
- ತೈಲ ಸಮಾನತೆಯ ಸಾಧನ - ಚವೇಝ್

18ನೇ ಮಹಾಧಿವೇಶನ
ಸಿಪಿಐ(ಎಂ)

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಮೋಘ ಜನಸ್ಪಂದನ

ಬಲಪ್ರಯೋಗ ಹಾಗೂ ನಕ್ಸಲ್‌ವಾದ

ಒಂದು ವಿಶ್ಲೇಷಣೆ



- ಇ.ಎಂ.ಎಸ್ ನಂಬೂದರಿಪಾಡ್

ಕ್ರಾಂತಿ ಎಂದರೇನು? ಕ್ರಾಂತಿಕಾರಿಗಳು ಯಾರು? ಜಗತ್ತಿನ ವಿವಿಧ ದೇಶಗಳ, ಘಟ್ಟಗಳ ಕ್ರಾಂತಿಕಾರಿ ಅನುಭವ ಕುರಿತು ಆಳವಾಗಿ ವಿಶ್ಲೇಷಿಸಿದ್ದಾರೆ ಕಾಮ್ರೇಡ್ ಇ.ಎಂ.ಎಸ್. ಮಾರ್ಚ್ 19 ಕ್ಕೆ ಅವರು ಅಗಲಿ......... ವರ್ಷಗಳಾದ ನೆನಪಿನಲ್ಲಿ ಈ ಲೇಖನ

ಭಾರತೀಯ ಸನ್ನಿವೇಶದಲ್ಲಿ ನಕ್ಸಲೀಯ ಸಂಘಟನೆಯ ಭವಿಷ್ಯವೇನು? ಹಳೆಯ ಸಮಾಜದ ಗರ್ಭದಿಂದಲೇ ಹುಟ್ಟುವ ಹೊಸ ಸಮಾಜದ ಆಗಮನಕ್ಕೆ 'ಬಲಪ್ರಯೋಗ' ಯಾವ ರೀತಿ ಸೂಲಗಿತ್ತಿಯಂತೆ ಕೆಲಸ ಮಾಡುತ್ತದೆ ಎಂಬುದನ್ನು ಮಾರ್ಕ್ಸ್‌ವಾದ ಸಿದ್ಧಾಂತದ ಮೂಲಕ ಹೇಗೆ ನಿರೂಪಿಸುತ್ತೀರಿ?

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವೂ ಸೇರಿದಂತೆ ಎಲ್ಲಾ ಎಡಪಕ್ಷಗಳಿಗಿಂತಲೂ 'ಎಡಕ್ಕೆ' ಚಾಚಿಕೊಂಡಿರುವ 'ಕ್ರಾಂತಿಕಾರಿ'ಗಳು ನಕ್ಸಲ್‌ವಾದಿಗಳೆಂದು ತೀರ್ಮಾನಿಸಲಾಗಿದೆ. ಇದು ನಕ್ಸಲ್‌ವಾದಿಗಳು ಹೇಳುವುದನ್ನು ಮಾತ್ರ ಗಮನಿಸಿದರೆ ಸರಿಯೆಂದೂ ತೋರಬಹುದು. ಆದರೆ ಒಂದು ರಾಜಕೀಯ ಪಕ್ಷದ ಕ್ರಾಂತಿಕಾರಿ ಸ್ವಭಾವವನ್ನು ಅದು ಏನು ಹೇಳುತ್ತದೆ ಎಂಬುದನ್ನು ಕುರಿತೇ ವಿಮರ್ಶಿಸಲಾಗುವುದಿಲ್ಲ. ಅದರ ಬದಲು ಅದು ಏನು ಮಾಡುತ್ತಿದೆ ಎಂಬದನ್ನು ಕುರಿತೇ ವಿಮರ್ಶಿಸಬೇಕಾಗುತ್ತದೆ. ಕ್ರಾಂತಿಕಾರಿಗಳು ಎಂದು ಕರೆದುಕೊಳ್ಳುವವರು ಜನರನ್ನು ಕ್ರಾಂತಿಯತ್ತ ಕೊಂಡೊಯ್ಯುತ್ತಿದ್ದಾರೆಯೇ ಅಥವಾ ಕ್ರಾಂತಿಯಿಂದ ದೂರ ತೆಗೆದುಕೊಂಡು ಹೋಗುತ್ತಿದ್ದಾರೆಯೇ ಎಂಬುದನ್ನು ಆದರಿಸಿಯೇ ಕ್ರಾಂತಿಕಾರಿ ಸ್ವಭಾವವನ್ನು ಅಳೆಯಬೇಕಾಗುತ್ತದೆ.

ಕ್ರಾಂತಿ ಆಗುವುದು ಕೆಲವು ಪ್ರತಿಭಾಶಾಲಿ ವ್ಯಕ್ತಿಗಳಿಂದ ಮಾತ್ರ ಅಲ್ಲ, ಅಥವಾ ಕೆಲವೇ ಧೀರ ಸಾಹಸಿಗಳ ಗುಂಪುಗಳಿಂದಲೂ ಅಲ್ಲ. ಅದು ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಿ ಹೊಸತೊಂದು ಸಾಮಾಜಿಕ ವ್ಯವಸ್ಥೆಗೆ ರೂಪ ನೀಡಲು ನಿಲುವುಳ್ಳ ವರ್ಗಗಳನ್ನು ಆಧರಿಸಿದೆ. ಹೀಗೆ ಪ್ರಸ್ತುತ ಸಾಮಾಜಿಕ ವ್ಯವಸ್ಥೆಗೆ ಎದುರಾಗಿ ಅದನ್ನು ಬದಲಿಸಿ ಹೊಸ ಸಮಾಜಸೃಷ್ಟಿಗೆ ಕಾರಣವಾಗಲು ಅಣಿಯಾಗಿ ನಿಂತಿರುವ ವರ್ಗಗಳು ಯಾವುವೆಂಬುದನ್ನು ಗುರುತಿಸಿ ಅವು ಆ ಕ್ರಿಯೆಯಲ್ಲಿ ಹೇಗೆ ಭಾಗವಹಿಸುವಂತೆ ಮಾಡಬೇಕು ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂಥ ಕಾರ್ಯಕ್ರಮಗಳನ್ನು ಯೋಜಿಸಿಕೊಳ್ಳಲು ಸಮರ್ಥವಾದ ಸಂಘಟನೆ ಮಾತ್ರ ಕ್ರಾಂತಿಯನ್ನು ಕಾರ್ಯಗತಗೊಳಿಸಬಲ್ಲದಾಗಿರುತ್ತದೆ.

ಮಾನವಸಮಾಜದ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ನಡೆದ ವಿವಿಧ ಕ್ರಾಂತಿಗಳು ಆಯಾಯ ಘಟ್ಟದಲ್ಲಿದ್ದ ವಿವಿಧ ವರ್ಗಗಳನ್ನು ಆಧರಿಸಿಯೇ ನಡೆದಿದೆ. ಉದಾಹರಣೆಗೆ, ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನದ ಯುರೋಪಿನಲ್ಲಿ ನಡೆದ ಕ್ರಾಂತಿಯ ನಾಯಕತ್ವವನ್ನು ಭೂರ್ಷ್ವಾಗಳ ವಿರುದ್ಧ ರೈತರನ್ನೂ ಸಣ್ಣಪುಟ್ಟ ಆಸ್ತಿವಂತ ಜನರನ್ನೂ ಸಂಘಟಿಸಿ, ಆ ಸಮಾಜ ವ್ಯವಸ್ಥೆಯೊಂದಿಗೆ ಅತೃಪ್ತಿ ಹೊಂದಿದ್ದ ಉಳಿದೆಲ್ಲಾ ವಿಭಾಗಗಳ ಜನರನ್ನು ಸೇರಿಸಿ ಒಂದು ಶಕ್ತ ಕ್ರಾಂತಿಸೇನೆಯನ್ನು ಬೆಳೆಸಲು ಸಾಧ್ಯಲ ವಾಯಿತು. ಆದ್ದ ರಿಂದಲೇ ಊಳಿಗ ಮಾನ್ಯ ಪ್ರಭುಗಳ ವರ್ಗದಲ್ಲೇ ಇದ್ದ ಸಾಮ್ರಾಜ್ಯಶಾಹಿ ಗುಂಪುಗಳನ್ನು ಸಮಾಜದಿಂದ ಒಂದು ರೀತಿಯಲ್ಲಿ ಮೂಲೆ ಗುಂಪು ಮಾಡಿ ಆ ಮೂಲಕ ಊಳಿಗ ಮಾನ್ಯ ಪ್ರಭುಗಳ ಸರ್ಕಾರವನ್ನು ಪರಾಜಯಗೊಳಿಸಿ ಬೂರ್ಷ್ವಾ ಸರಕಾರವನ್ನು ಸ್ಥಾಪಿಸಲು ಸಾಧ್ಯವಾಯಿತು.

ಕ್ರಾಂತಿಕಾರಿಗಳು ಎಂದು ಕರೆದುಕೊಳ್ಳುವವರು ಜನರನ್ನು ಕ್ರಾಂತಿಯತ್ತ ಕೊಂಡೊಯ್ಯುತ್ತಿದ್ದಾರೆಯೇ ಅಥವಾ ಕ್ರಾಂತಿಯಿಂದ ದೂರ ತೆಗೆದುಕೊಂಡು ಹೋಗುತ್ತಿದ್ದಾರೆಯೇ ಎಂಬುದನ್ನು ಆದರಿಸಿಯೇ ಕ್ರಾಂತಿಕಾರಿ ಸ್ವಭಾವವನ್ನು ಅಳೆಯಬೇಕಾಗುತ್ತದೆ.

ಆದರೆ ಬೂರ್ಷ್ವಾ ಸಾಮಾಜಿಕ ವ್ಯವಸ್ಥೆ ಬೆಳೆದು ಬರಲಾರಂಭಿಸಿದಂದಿನಿಂದ ಇನ್ನೊಂದು ವರ್ಗ ಸಾಮಾಜಿಕ ಬದಲಾವಣೆಗೆ ಪ್ರಯತ್ನಪಡುವ ವರ್ಗವಾಗಿ ರೂಪುಗೊಳ್ಳುತ್ತಾ ಬಂತು. ಇದೇ ಶ್ರಮಿಕವರ್ಗ. ಹಿಂದೆ ಸಾಮಾಜಿಕ ಬದಲಾವಣೆಗೆ ಶ್ರಮಿಸಿದ್ದ ಬೂರ್ಷ್ವಾ ವರ್ಗ ಪ್ರಸ್ತುತ ಸಾಮಾಜಿಕ ವ್ಯವಸ್ಥೆ (ಶ್ರೀಮಂತ ಪ್ರಭುತ್ವ)ಯನ್ನು ಕಟ್ಟಲು ಆಸಕ್ತಿ ತಳೆದ ವರ್ಗವಾಗಿ ಮಾರ್ಪಡುತ್ತಾ ಹೋಯಿತು. ಇದರಿಂದ ಅದು ತನ್ನ ಹಿಂದಿನ ಕ್ರಾಂತಿಕಾರಿ (ಬದಲಾವಣೆ ಬಯಸಿದ) ಸ್ವಭಾವವನ್ನು ಕಳೆದುಕೊಂಡಿತು. ಶ್ರೀಮಂತ ಪ್ರಭುತ್ವ ಕೊನೆಗೊಂಡಿತು. ಈ ಪ್ರಕ್ರಿಯೆಯು ರೈತರು, ಸಣ್ಣಪುಟ್ಟ ಭೂಆಸ್ತಿಯ ಜನರು, ಸಣ್ಣಪುಟ್ಟ ಬಂಡವಾಳಗಾರರು ಮತ್ತು ಶೋಷಣೆಗೆ ಒಳಗಾಗಿರುವ ಉಳಿದ ಜನಸಮುದಾಯಗಳನ್ನೆಲ್ಲಾ ಒಂದು ಹೋರಾಟಕ್ಕೆ ಅಣಿಮಾಡಲು ಸಹಾಯ ಮಾಡಿತು. ಈ ವರ್ಗವೇ ರಾಷ್ಟ್ರೀಯ ಸ್ವಾತಂತ್ರ್ಯಕ್ಕೂ, ದೇಶದ ಸಾರ್ವಭೌಮತ್ವಕ್ಕೂ, ಪ್ರಜಾಪ್ರಭುತ್ವಕ್ಕೂ ಮತ್ತು



ಸಾಮಾಜಿಕ ಏಳಿಗೆಗೂ ಹೋರಾಡಲು ಶಕ್ತವಾಗಿರುವ ವರ್ಗವಾಗಿ ರೂಪಿತಗೊಂಡಿತು.

ಇದನ್ನು ಗಮನಿಸಿಯೇ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಕೃಷಿಕರನ್ನೂ ಹಾಗೂ ಶ್ರಮಿಕವರ್ಗದ ಎಲ್ಲಾ ಗುಂಪುಗಳನ್ನೂ ಸಂಘಟಿಸಿ ಒಡೆದು ಕ್ರಾಂತಿಕಾರಿ ಬದಲಾವಣೆಯನ್ನು ತರಬಹುದೆಂದು ರೂಪಿಸಿದುದೇ ಮಾರ್ಕ್ಸ್, ಏಂಗೆಲ್ಸ್, ಲೆನಿನ್ ಮುಂತಾದ ಕ್ರಾಂತಿಕಾರಿ ಸಿದ್ಧಾಂತಿಗಳು ತಿಳಿಯಹೇಳಿದ್ದು. ಇದೇ 1917 ರ ವಿಜಯೀ ರಷ್ಯಾ ಕ್ರಾಂತಿಗೂ ನಂತರದ ಇತರ ಕ್ರಾಂತಿಗಳಿಗೂ ದಾರಿ ಮಾಡಿಕೊಟ್ಟಿತು. ಮಾರ್ಕ್ಸ್‌ವಾದಿ - ಲೆನಿನ್‌ವಾದಿ ಕ್ರಾಂತಿಕಾರಿ ಹೋರಾಟದ ವಿಶ್ಲೇಷಣೆಯನ್ನು ಆಧರಿಸಿ ತಮ್ಮ ತಮ್ಮ ದೇಶಗಳ ಸ್ಥಿತಿಗಳಿಗಳಿಗೆ ಹೊಂದಿಕೊಳ್ಳುವಂಥ ಪ್ರಯೋಗಗಳನ್ನು ಮಾಡಿದುದರಿಂದಲೇ ಮೊದಲು ಚೈನಾ ಹಾಗೂ ಕೋರಿಯಾದಲ್ಲಿ, ಇತ್ತೀಚಿಗೆ ವಿಯಟ್ನಾಂದಲ್ಲಿ ನಡೆದು ಕ್ರಾಂತಿ ಜಯಪ್ರದವಾಗಿ ಮುಂದುವರಿಯಲು ಅನುಕೂಲವಾಯಿತು.

ವಿಯಟ್ನಾಂ ಕ್ರಾಂತಿ ತಂತ್ರಗಳು ಹಾಗೂ ಗುರಿಗಳು ಏನಾಗಿತ್ತೆಂಬುದನ್ನೂ ಅವುಗಳನ್ನು ಹೇಗೆ ಪ್ರಯೋಗಿಸಿದರೆಂಬುದನ್ನೂ ಅಲ್ಲಿನ ಹಿರಿಯ ನೇತಾರರಲ್ಲೊಬ್ಬರಾದ ಟೂವಾನ್ ಚಿನ್ (ವಿಯಟ್ನಾಂ ಪಕ್ಷದ ಪೊಲಿಟಬ್ಯೂರೊ ಸದಸ್ಯರು) ಹೀಗೆ ವಿವರಿಸಿದ್ದಾರೆ.

"ಕ್ರಾಂತಿಯ ಒಂದು ನಿಶ್ಚಿತ ಘಟ್ಟದಲ್ಲಿ ಶಕ್ತಿಯನ್ನು ಕೇಂದ್ರೀಕರಿಸಿ, ಸೋಲಿಸಬೇಕಾದ ಮುಖ್ಯ ಶತ್ರು ಯಾರೆಂಬುದನ್ನು ನಿರ್ಣಯಿಸಬೇಕು (ಅಂದರೆ ಕ್ರಾಂತಿಶಕ್ತಿಗಳ ಧಾಳಿ ಯಾವ ಧಿಕ್ಕಿನತ್ತ ಸಾಗಬೇಕೆಂಬುದನ್ನು ನಿರ್ಣಯಿಸಬೇಕು). ಪ್ರತಿ ಘಟ್ಟದಲ್ಲೂ ಕಾರ್ಮಿಕ ವರ್ಗಗಳ ಸಖ್ಯಶಕ್ತಿಗಳು ಯಾವ್ಯಾವುದೆಂಬುದನ್ನು ಎಚ್ಚರಿಕೆಯಿಂದ ಗುರುತಿಸುವುದು, ನಂತರ ಕ್ರಾಂತಿಶಕ್ತಿಗಳನ್ನು ಒಂದುಗೂಡಿಸಲು, ಸಖ್ಯ ಶಕ್ತಿಗಳನ್ನು ಭದ್ರಗೊಳಿಸಲು ಪ್ರತ್ಯಕ್ಷವೂ ಆದ ಮುನ್ನೆಚ್ಚರಿಕೆ ಕ್ರಮಗಳನ್ನು ಸರಿಯಾದ ಕಾಲದಲ್ಲಿ ತೆಗೆದುಕೊಳ್ಳಬೇಕು. ಶತ್ರುವನ್ನು ಸಂಪೂರ್ಣವಾಗಿ ಅವರೆಲ್ಲಾ ಸಖ್ಯ ಗುಂಪಿನಿಂದ ಬೇರ್ಪಡಿಸಲು, ಬಹಳ ಹತ್ತಿರವಿರುವ ಮುಖ್ಯ ಶತ್ರುವಿಗೆ ಪೆಟ್ಟು ಹಾಕಲು, ಕ್ರಾಂತಿಯು ಪ್ರಸ್ತುತ ಘಟ್ಟದಲ್ಲಿ ಯಶಸ್ವಿಯಾಗಿ ಪ್ರಯೋಗವಾಗಲು ಹೋರಾಡುವುದು- ಮುಂತಾದುವೇ ಕ್ರಾಂತಿಯ ತಂತ್ರಗಳು.

ಕ್ರಾಂತಿಯ ಉಬ್ಬರವಿಳಿತದ ಎಲ್ಲಾ ಕಾಲಗಳಲ್ಲೂ ಕಾರ್ಮಿಕವರ್ಗ ತಳೆಯಬೇಕಾದ ನಿಲುವನ್ನು ನಿರ್ದೇಶಿಸುವುದು. ಪ್ರತಿ ಘಟ್ಟದಲ್ಲೂ ಸರಿಹೊಂದುವ ಕ್ರಾಂತಿ ಕಾರ್ಯಕ್ರಮಗಳನ್ನು ಸಂಘಟನೆಗಳನ್ನು ಪ್ರಚಾರ ಘೋಷಣೆಗಳನ್ನು ತಯಾರು ಮಾಡುವುದು, ಕ್ರಾಂತಿಯ ಪ್ರತಿ ಮುನ್ನಡೆಯಲ್ಲೂ ಹಳೆಯ ಘೋಷಣೆಗಳನ್ನು ರೂಪಿಸುವುದು ಅಥವಾ ಹಳೆ ಮತ್ತು ಹೊಸ ಘೋಷಣೆಗಳನ್ನು ಸ್ವೀಕರಿಸುವುದು- ಇವು ಕ್ರಾಂತಿಯ ಮುಖ್ಯೋಪಾಯಗಳು.

ಕ್ರಾಂತಿ ತಂತ್ರವನ್ನು ಕುರಿತು ಹೇಳುವಾಗ ದೇಶದ ಪ್ರತಿಯೊಂದು ಮುಖ್ಯ ಪರಿಸ್ಥಿತಿಯನ್ನೂ ಸ್ಪಷ್ಟವಾಗಿ ವಿಮರ್ಶಿಸಲಾಗಿದೆ. ಸೋಲಿಸಬೇಕಾದ ಶತ್ರು ಯಾರು? ಕೇಂದ್ರ ಶತ್ರು ಯಾರು? ಅದಕ್ಕೆ ಪ್ರೇರಕವಾದ ಶಕ್ತಿ ಯಾವುದು? ಶ್ರಮಜೀವಿ ವರ್ಗದ ಸಖ್ಯ ಶಕ್ತಿಗಳು ಯಾವುವು? ಅವುಗಳಲ್ಲಿ ತುಂಬಾ ಹತ್ತಿರವಾದವು, ದೂರವಿರುವವು, ನಂಬಲರ್ಹವಾದುವು ತಾತ್ಕಾಲಿಕವಾದವು, ಚಂಚಲದವು, ಸುಲಭವಾಗಿ ಸಂಘಟಿಸಲಾಗುವಂತವು ಮುಂತಾದವನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಹೀಗೆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಾಗ ಮಾತ್ರ ಶ್ರಮಜೀವಿ ವರ್ಗದ ನಾಯಕತ್ವದಲ್ಲಿ ಅನೇಕ ಶಕ್ತಿಗಳನ್ನು ಅಣಿಗೊಳಿಸಿದರೆ ಶತ್ರುವಿನ ಭದ್ರಕೋಟೆಯನ್ನು ಒಡೆದು ಕ್ರಾಂತಿಯನ್ನು ಜಯಪ್ರದದೆಡೆಗೆ ಕೊಂಡೊಯ್ಯಲು ಸಾಧ್ಯ.

ಇದು ಕ್ರಾಂತಿಯ ಜಯಪ್ರದ ಮುನ್ನಡೆಗೆ ಇರುವ ಸಾಮಾನ್ಯ ತತ್ವ ಮಾತ್ರ. ಇದನ್ನು ನಕ್ಸಲ್‌ವಾದಿಗಳು ಇದೇ ರೂಪದಲ್ಲಿ ಒಂದು ಪಕ್ಷದಲ್ಲಿ ಒಪ್ಪಿಕೊಳ್ಳಬಹುದು. ಆದರೆ ವಿಯಟ್ನಾಮಿನ ಕಮ್ಯೂನಿಸ್ಟ್ ಪಕ್ಷ ಇಷ್ಟಕ್ಕೆ ನಿಲ್ಲಿಸಲಿಲ್ಲ. ಶತ್ರು ಯಾರೆಂದು ಒಂದು ಸಾಮಾನ್ಯ ತೀರ್ಮಾನಕ್ಕೆ ಬಂದರೆ ಸಾಲದು. ಕ್ರಾಂತಿ ಮುನ್ನಡೆಯ ಪ್ರತಿ ಘಟ್ಟದಲ್ಲೂ ಶತ್ರು ಗುಂಪಿನಲ್ಲಿರುವ ಯಾವ ಭಾಗವನ್ನು ಅಗಚಿ ಹಾಕಬೇಕು ಎಂದು ತೀರ್ಮಾನಿಸುವುದು ಮುಖ್ಯವಾಗುತ್ತದೆ."

ಟೂವಾನ್ ಮುಂದುವರಿದು "ಕ್ರಾಂತಿಯ ಪ್ರತಿ ಘಟ್ಟದಲ್ಲೂ ಆಯಾಯ ಕಾಲದಲ್ಲಿ ಸೋಲಿಸಬೇಕಾದ ಮುಖ್ಯಶತ್ರು ಯಾರೆಂದು ಪಕ್ಷ ಮೊದಲು ಕಂಡುಹಿಡಿಯಬೇಕು. ಸಾಮಾನ್ಯ ಶತ್ರುವಿಗಿಂತಲೂ ಆಯಾಯ ಕಾಲಘಟ್ಟದಲ್ಲಿ ಎದ್ದು ಕಾಣುವ ಶತ್ರು ಯಾರೆಂಬುದನ್ನು ತಿಳಿಯಲು ಸದಾ ಎಚ್ಚರಿದಿಂದಿರಬೇಕು. ಮುಖ್ಯ ಶತ್ರುವನ್ನು ಗುಂಪಿನಿಂದ ಅಗಚಿಹಾಕಿ ಸದೆಬಡಿಯಬೇಕು. ಹೀಗೆ ಎದುರಾಳಿಗಳಲ್ಲಿರುವ ವೈರುಧ್ಯಗಳನ್ನು ಬಹಿರಂಗಪಡಿಸಿ ದೊಡ್ಡದು ಮಾಡಿ ಅವರು ಸಂಪೂರ್ಣ ಬೇರೆ ಬೇರೆಯಾಗುವಂತೆ ನೋಡಿಕೊಳ್ಳಬೇಕು. ಕ್ರಾಂತಿಸಮರದ ಈಟಿಮೊನೆಯನ್ನು ಮುಖ್ಯಶತ್ರುವಿನತ್ತ ತಿವಿಯಬೇಕು."

ವಿಯಟ್ನಾಮಿನ ಕ್ರಾಂತಿ ಸಮರದ ಮುನ್ನಡೆಯ ವಿವಿಧ ಘಟ್ಟಗಳಲ್ಲಿ, ಅದರ ಎರಡು ಶತ್ರುಗಳಾದ ಸಾಮ್ರಾಜ್ಯಶಾಹಿ ಹಾಗೂ ಊಳಿಗಮಾನ್ಯ ಪದ್ಧತಿಯನ್ನು ಕುರಿತು ಪಕ್ಷದ ನಿಲುವು ಹೇಗೆ ಬದಲಾಯಿತೆಂಬುದನ್ನು ಟೂವೊನ್‌ರು- ಹೀಗೆ ವಿವರಿಸುತ್ತಾರೆ. "ವಿಯಟ್ನಾಂ ದೇಶದಲ್ಲಿ ಕಮ್ಯೂನಿಸ್ಟ್‌ಪಕ್ಷ ಅಧಿಕಾರಕ್ಕೆ ಬಂದ ತರುವಾಯ 1940 ರವರೆಗೆ ಫ್ರಾನ್ಸಿನ ವಸಾಹತುಶಾಹಿಯೇ ನಮಗೆ ಸಾಮ್ರಾಜ್ಯಶಾಹಿ ಶತ್ರುವಾಗಿತ್ತು.

1936-39ರ ಅವಧಿಯಲ್ಲಿ ಪ್ರಜಾಪ್ರಭುತ್ವ ಮುನ್ನಡೆಯ ಘಟ್ಟದಲ್ಲಿ ಫ್ರೆಂಚ್ ಫ್ಯಾಸಿಸ್ಟರೂ ಹಾಗೂ ಫ್ರೆಂಚ್ ವಸಾಹತಿನ ಸಾಮ್ರಾಜ್ಯಶಾಹಿಗಳೂ ಇಂಡೋ-ಚೈನಾದ ಮುಖ್ಯ ಶತ್ರುವೆಂದು ಪಕ್ಷ ಗುರುತಿಸಿತು. 1940 ರ ಆಗಸ್ಟ್‌ನಿಂದ 1945ರ ಮಾರ್ಚ್‌ವರೆಗೆ ಜಪಾನಿನ ಫ್ಯಾಸಿಸ್ಟ್ ಯುದ್ಧಾಕಾಂಕ್ಷಿಗಳು ಇಂಡೋ-ಚೈನಾದಲ್ಲಿ ಸೈನ್ಯವನ್ನು ಸ್ಥಾಪಿಸಿ ಫ್ರೆಂಚರೊಂದಿಗೆ ಸೇರಿ

ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಮಾರ್ಚ್ 31,2005**
  ಜೀವವಿಮಾ ನೌಕರರ 1 ದಿನದ ಮುಷ್ಕರ 2 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ವೇತನ ಹೆಚ್ಚಳಕ್ಕೆ ಒತ್ತಾಯಿಸಿ
- **ಏಪ್ರಿಲ್ 3,2005**
  ಡಿವೈಎಫ್ಐ ಬೆಳ್ಳಿಹಬ್ಬದ ಪ್ರಯುಕ್ತ ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಲ್ಲಿ ರಕ್ತದಾನ ಶಿಬಿರ
- **ಏಪ್ರಿಲ್ 6 ರಿಂದ 11, 2005**
  ಸಿಪಿಐ(ಎಂ) ಅಖಿಲ ಭಾರತ ಅಧಿವೇಶನ ನವ ದೆಹಲಿ. 11 ರಂದು ಬೃಹತ್‌ರ್‍ಯಾಲಿ

ಕೋಮುವಾದಿಗಳ ಅಟ್ಟಹಾಸಕ್ಕೆ ಎಳೆಬಾಲೆ ಬಲಿ

ಬೆಳ್ತಂಗಡಿ ತಾಲೂಕು ನಿಡ್ಲೆ ಗ್ರಾಮವೊಂದರ ಬಡ ದಲಿತ ಮಹಿಳೆ ಚಂದ್ರಾವತಿ ಎಂಬ 19 ವರ್ಷ ವಯಸ್ಸಿನ ಎಳೆಬಾಲೆಯೊಬ್ಬಳು ದಿನಾಂಕ 14.03.2005 ರಂದು ತನ್ನ ಮಾವನ ಮನೆಯಿರುವ ಬೂಡುಜಾಲು ಹಳ್ಳಿಗೆ ಹೋಗಿ ವಾಪಸ್ಸು ಬರುವಾಗ ಕಾಡುದಾರಿಯ ನಿರ್ಜನ ಸ್ಥಳದಲ್ಲಿ ಹಠಾತ್ತನೆ ವಕ್ಕರಿಸಿದ ಡೀಕಯ್ಯಗೌಡ(30) ಮತ್ತು ವಿಠಲಗೌಡ ಎಂಬುವ ಇಬ್ಬರು ಪಾತಕಿಗಳು ನಿರ್ದಯವಾಗಿ ಆಕೆಯ ಮೇಲೆ ಎರಗಿ ಅತ್ಯಾಚಾರ ಎಸಗಿದ್ದಾರೆ. ಬೆಳಗಿನ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಹುಡುಗಿಯನ್ನು ವಶದಲ್ಲಿಟ್ಟುಕೊಂಡು ಸರದಿ ಅತ್ಯಾಚಾರವೆಸಗಿ ಅತ್ಯಾಚಾರ. ದಿಕ್ಕುತೋಚದ ಲಕ್ಷ್ಮಿ ಘಟನೆಯ ಗಂಭೀರತೆಯನ್ನು ಅಂತು ಅರಿತುಕೊಂಡು ಮಗಳು ಚಂದ್ರಾವತಿಯೊಂದಿಗೆ ತಕ್ಷಣ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾಳೆ. ಪ್ರಾಥಮಿಕ ಪರೀಕ್ಷೆಯಿಂದ ಅತ್ಯಾಚಾರವೆಸಗಿದ್ದು ದೃಢಪಟ್ಟು ಸರ್ಟಿಫಿಕೇಟು ಪಡೆದುಕೊಂಡು ಪೊಲೀಸ್ ಕೇಸು ದಾಖಲಿಸಿದ್ದಾಳೆ. ಚಂದ್ರಾವತಿಯ ಹೇಳಿಕೆಪಡೆದ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗಕ್ಕೆ ಹಾಜರು ಪಡಿಸಿದ್ದಾರೆ. ಅಲ್ಲಿ ಆರೋಪಿಗಳು ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದಾರೆ.

ಇಡೀ ಪ್ರಕರಣವನ್ನು ಕೈಗೆತ್ತಿಕೊಂಡ ಜನವಾದಿ ಮಹಿಳಾ ಸಂಘಟನೆ, ಬೆಳ್ತಂಗಡಿ ಘಟಕ, ಡಿವೈಎಫ್ಐ ಬೆಳ್ತಂಗಡಿ ಸಮಿತಿ, ಸಿಐಟಿಯು ಸಂಘಟನೆಗಳು ಲಕ್ಷ್ಮಿಯ ಕುಟುಂಬದವರಿಗೆ ಬೆನ್ನೆಲುಬಾಗಿ ನಿಂತು ಧೈರ್ಯ ತುಂಬಿದ್ದಾರೆ. ಕಾನೂನು ರೀತ್ಯಾ ನ್ಯಾಯ ದೊರಕಿಸಿಕೊಡಲು ಹೋರಾಟ ನಡೆಸಿದ್ದಾರೆ. ಬಂಧನಕ್ಕೆ ಒಳಗಾದ ಡೀಕಯ್ಯ ಗೌಡ ಮತ್ತು ವಿಠಲಗೌಡರೆಂಬ ಉಭಯ ದುಷ್ಟರು ಸಂಘ ಪರಿವಾರದ ಭಜರಂಗದಳದ ಸಕ್ರಿಯ ಕಾರ್ಯಕರ್ತರಾಗಿದ್ದು ಕಾಕತಾಳೀಯವೇನಲ್ಲ - ಏಕೆಂದರೆ ಇದೇ ಮಹಾಶಯರು ಕೆಲವು ದಿನ ಮುಂಚೆ ಆದಿ ಉಡುಪಿಯಲ್ಲಿ ದನಗಳ ಖರೀದಿ ವಿಕ್ರಿ ಸಂದರ್ಭದಲ್ಲಿ ಇಬ್ಬರು ಮುಸ್ಲಿಂ ತಂದೆ ಮಗನನ್ನು ಕಾರಣವಿಲ್ಲದೆ ಥಳಿಸಿ ಬೆತ್ತಲೆಗೊಳಿಸಿ ಮಾರಣಾಂತಿಕ ಹಲ್ಲೆ ಮಾಡಿದ್ದರು. ಈ ಸಂಬಂಧ ಬಂಧನಕ್ಕೊಳಗಾಗಿದ್ದರೂ ಸ್ಥಳೀಯ ಬಿಜೆಪಿ ಮುಖಂಡರ ಹಲಾಲಕೋರ ಆಸರೆ ಮತ್ತು ಮಧ್ಯಸ್ತಿಕೆಯಿಂದಾಗಿ ಜಾಮೀನಿನ ಮೇಲೆ ಹೊರಬಂದಿದ್ದರು. ಕೇಸರಿ ಬಳಗದ ಪಶುಹೃದಯಿ ಮುಖಂಡರು ಜಾಮೀನಿನ ಮೇಲೆ ಹೊರಬಂದ ಈ ಅಪಾಪೋಲಿಗಳನ್ನು ಆದ್ದೂರಿಯಾಗಿ ಸ್ವಾಗತಿಸಿ ಸಮಾರಂಭ ಮಾಡಿದ್ದು ಇಲ್ಲಿನ ಮಾನವಂತರಿಗೆ ಹೇಸಿಗೆ ತರಿಸಿದೆ.

ಆದಿ ಉಡುಪಿಯಲ್ಲಿ ಗಂಡಸರ ಬಟ್ಟೆ ಬಿಚ್ಚಿದ ಈ ಕೋಮುವಾದಿಗಳು ನಿಡ್ಲೆಯಲ್ಲಿ ಅಮಾಯಕ, ಅಸಹಾಯಕ ಹೆಣ್ಣು ಮಕ್ಕಳ ಬಟ್ಟೆ ಬಿಚ್ಚಿದ್ದಾರೆ.



ದಲಿತ ಯುವತಿಯ ಮೇಲಿನ ಅತ್ಯಾಚಾರ ಖಂಡಿಸಿ ಪ್ರತಿಭಟನೆ

ಕೈಬಿಟ್ಟಿದ್ದಾರೆ. ಬಸವಳಿದ ಆಕೆ ಮನೆಗೆ ಬಂದು ತಾಯಿಗೆ ವಿಷಯ ತಿಳಿಸಿ ರೋಧಿಸಿದ್ದಾಳೆ.

ತಾಯಿ ಲಕ್ಷ್ಮಿ ಅತ್ಯಂತ ಬಡತನದಲ್ಲಿ ಅಪಾಪೋಲಿ ಗಂಡನೊಡನೆ ಗುದ್ದಾಡಿ ಕೊನೆಗೂ ಆತ ಮರುಮದುವೆಯಾದಾಗ ತ್ಯಜಿಸಿ, ಸಂಜೀವ (18), ಚಂದ್ರಾವತಿ(16), ಯಶೋಧ(14) ಎಂಬ ಮೂರು ಮಕ್ಕಳೊಂದಿಗೆ ಅದೇ ತಾಲೂಕಿನ ಪಟ್ರಮೆ ಎಂಬ ಹಳ್ಳಿಯಲ್ಲಿ ಕೂಲಿನಾಲಿ ಮಾಡಿ ಬಾಳು ದೂಡುತ್ತಿದ್ದಾಳೆ. ಸರಕಾರಿ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿರುವ ಈ ದಿಕ್ಕೇಡಿ ಕುಟುಂಬಕ್ಕೆ ದುಡಿಯಲು ಎರಡು ಕೈಗಳು ಬಿಟ್ಟರೆ ಮತ್ತಾವುದೇ ಆಸರೆ ಇಲ್ಲ. ಸರ್ಕಾರಿ ಸೌಲಭ್ಯವಂತೂ ಇವರಿಗೆ ಮರೀಚಿಕೆ. ಅಂಥದರಲ್ಲಿ ಬೆಳಿಗ ಮಗಳ ಮೇಲೆ

ಈ ಎರಡೂ ಘಟನೆಗಳನ್ನು ಖಂಡಿಸಿ ಬೆಳ್ತಂಗಡಿಯಲ್ಲಿ ಮಾರ್ಚ್ 21 ರಂದು ಬೃಹತ್ ಪ್ರತಿಭಟನಾ ಸಭೆ ನಡೆದು ಕೋಮುವಾದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸಲಾಯಿತು. ಈ ಪ್ರತಿಭಟನಾ ಸಭೆಯನ್ನು ಡಿವೈಎಫ್ಐ ನೇತೃತ್ವದಲ್ಲಿ ಜೆಎಂಎಸ್, ಸಿಐಟಿಯು, ಎಐಕೆಎಸ್, ಜಮಿಯತ್ ಉಲ್ ಫಲಾ ಮುಸ್ಲಿಂ ಒಕ್ಕೂಟ, ಡಿಎಸ್ಎಸ್ ಎರಡು ಬಣಗಳ ಜೊತೆ ಸೇರಿ ನಡೆಸಿತು. ಅಲ್ಲದೆ ಸಿಪಿಐ(ಎಂ), ಕಾಂಗ್ರೆಸ್, ಜನತಾದಳ ಪಕ್ಷಗಳು ಬೆಂಬಲಿಸ ಭಾಗವಹಿಸಿದ್ದವು. ಪ್ರಮುಖ ಭಾಷಣಕಾರರಾಗಿ ಸಿಪಿಐ(ಎಂ) ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್ ಮಾತನಾಡಿದರು. ಪ್ರಾಸ್ತಾವಿಕವಾಗಿ ಬಿ.ಎಂ.ಭಟ್, ಕಾಂಗ್ರೆಸ್‌ನಿಂದ ಹರೀಶಕುಮಾರ, ಜನತಾದಳ ಹಾಗೂ ಜಮಿಯತ್ ಉಲ್-ಫಲಾ ಅಬ್ದುಲ್ ಲತೀಫ್ ಸಾಹೇಬ, ಡಿಎಸ್ಎಸ್ ನಿಂದ ಚಂದು, ಧರ್ಮಸೇನ, ಸಿಐಟಿಯು ನಿಂದ ವಸಂತ ಆಚಾರಿ, ಡಿವೈಎಫ್ಐ ನಿಂದ ಮುನೀರ್ ಕಾಟಿಪಳ್ಳಿ, ಸುನೀಲಕುಮಾರ, ಅಶೋಕ ಕೊಂಚಾಡಿ, ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಶಿವಕುಮಾರ ಮುಂತಾದವರು ಮಾತನಾಡಿದರು.



ಕಾಮ್ರೇಡ್ ಸಂಗ್ರಾಮ ನಿಧನ

ಕಾಮ್ರೇಡ್ ಸಂಗ್ರಾಮ ಪ್ರಭುರಾವ್ ಉದಗೆರೆ ಎಂಬ ಹೆಸರೇ ಬೀದರ ಜಿಲ್ಲೆಯಲ್ಲಿ ಜನಪರ ಚಳುವಳಿಗೆ ಇರುವ ಇನ್ನೊಂದು ಹೆಸರು. ತಮ್ಮ ವಿದ್ಯಾರ್ಥಿ ದೆಸೆಯಿಂದಲೂ ಕಮ್ಯೂನಿಸ್ಟ್ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸಂಗ್ರಾಮ ವಕೀಲರು 1964 ರ ತರುವಾಯ ಸಿಪಿಐ(ಎಂ) ನೊಂದಿಗೆ ತಮ್ಮನ್ನು ಗುರುತಿಸಿಕೊಂಡು ರೈತ-ಕಾರ್ಮಿಕ ಚಳುವಳಿಗಳನ್ನು ಕಟ್ಟುವ ಹೊಣೆ ಹೊತ್ತಿದ್ದರು. ರೈತರ ಬೆಳೆಗೆ ಬೆಂಬಲ ಬೆಲೆಗಾಗಿ, ಬಡಜನರಿಗೆ ರೇಷನ್ ಕಾರ್ಡ್‌ಗಾಗಿ, ಮುಚ್ಚಿದ ಕಾರ್ಖಾನೆ ತೆರೆಯಲಿಕ್ಕಾಗಿ, ಸಾರ್ವಜನಿಕರ ಅನುಕೂಲಕ್ಕೆ ರೈಲ್ವೆ ಗೇಟ್ ತೆರೆಯಲಿಕ್ಕಾಗಿ ಹೀಗೆ ಅನೇಕ ದುಡಿಯುವ ವರ್ಗದ ಪರ ಹೋರಾಟಗಳಲ್ಲಿ ತಮ್ಮನ್ನು ತಾವುತೊಡಗಿಸಿಕೊಂಡಿದ್ದ ಕಾಮ್ರೇಡ್ ಸಂಗ್ರಾಮ ಅವರು ವೃತ್ತಿಯಲ್ಲಿನ ವಕಾಲತ್ತಿಗಿಂತಲೂ ಹೆಚ್ಚು ಜನತೆಯೊಂದಿಗೆ ಬೆರೆಯುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಮನೆತನದಲ್ಲಿ ಜನಿಸಿದ ಕಾಂ. ಸಂಗ್ರಾಮ ಅವರು ತಮ್ಮ ಕೊನೆಯುಸಿರಿರುವವರೆಗೂ ಜನತೆಗಾಗಿ ಚಿಂತಿಸಿದವರು. ಮಾರ್ಚ್ 26, 2005 ರಂದು ನಸುಕಿನ ಜಾವದಲ್ಲಿ ಕೊನೆಯುಸಿರೆಳೆದ ಧೀಮಂತ ಹೋರಾಟಗಾರನಿಗೆ ಸಿಪಿಐ(ಎಂ) ರಾಜ್ಯ ಸಮಿತಿಯು ಶೋಕತಪ್ತ ಶ್ರದ್ಧಾಂಜಲಿ ಸಲ್ಲಿಸುತ್ತದೆ. ಜನತೆಯ ಹೋರಾಟದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರ ಕುಟುಂಬಕ್ಕೆ ಪಕ್ಷವು ಸಾಂತ್ವನ ಹೇಳುತ್ತದೆ. ಕಾಂ. ಸಂಗ್ರಾಮ ಅವರು ಒಬ್ಬ ಮಗಳು ಮತ್ತು ಇಬ್ಬರು ಗಂಡು ಮಕ್ಕಳನ್ನು ಹಾಗೂ ಪತ್ನಿಯನ್ನು ಅಗಲಿದ್ದಾರೆ.

ಸಿಪಿಐ(ಎಂ) ನ ರಾಜ್ಯ ಸಮಿತಿ ಪರವಾಗಿ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಗುರುಶಾಂತ್‌ರವರು ಬೆಂಗಳೂರಿನಿಂದ ಬೀದರ್‌ಗೆ ತೆರಳಿ ಅಂತಿಮ ನಮನ ಸಲ್ಲಿಸಿದರು.


ಸಂಘ ಪರಿವಾರದೊಂದಿಗೆ ಸೈದ್ಧಾಂತಿಕ ಗುದ್ದಾಟಗಳು

ಸಂಘ ಪರಿವಾರದ ಎಲ್ಲಾ ಅಂಗ ಸಂಸ್ಥೆಗಳ ಅಖಿಲ ಭಾರತ ಪ್ರತಿನಿಧಿ ಸಭಾದ ಬೈಠಕ್‌ವೊಂದನ್ನು ಪ್ರಪ್ರಥಮ ಬಾರಿಗೆ ಮಾರ್ಚ್ 11 ರಿಂದ 13 ರ ವರೆಗೆ ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಈ ಪರಿವಾರದ ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಮಟ್ಟದ 1300 ಮಂದಿ ನಾಯಕರುಗಳಲ್ಲಿ ಅಡ್ವಾಣಿ, ತೊಗಾಡಿಯಾ, ಸಿಂಘಾಲ್‌ರವರುಗಳೂ ಸೇರಿದ್ದರು. ಮಾಧ್ಯಮಗಳಲ್ಲಿ ಸಂಘ ಪರಿವಾರದ ತುತ್ತೂರಿಗಳೇ ಮೊಳಗುವ ಸಾಧ್ಯತೆಗಳು ಪ್ರಾರಂಭದಿಂದಲೇ ಕಂಡುಬಂತು. ಆರ್‌ಎಸ್‌ಎಸ್ ಸುಳ್ಳು ವಿಷಪೂರಿತ ವಿಚಾರಗಳೇ ಅಲ್ಲ, ಅದಕ್ಕೆ ವಿರುದ್ಧವಾದ ಮತ್ತು ವಾಸ್ತವಾಂಶಗಳ ಸುದ್ದಿಯೂ ಮಾಧ್ಯಮದಲ್ಲಿ ಕಾಣಬೇಕೆಂಬ ಇರಾದೆಯಿಂದ ಪ್ರಗತಿಪರ ಚಿಂತಕರ ವೇದಿಕೆ ಮಂಗಳೂರಿನಲ್ಲಿ ಮೂರು ವೈಚಾರಿಕ ಸಂವಾದಗಳನ್ನು ರೂಪಿಸಿ ಮಾಧ್ಯಮಕ್ಕೆ ವ್ಯಾಪಕವಾದ ಸುದ್ದಿ ನೀಡಲಾಯಿತು.

ಮಾರ್ಚ್ 9 ರಂದು 'ಗೋದ್ರೋತ್ತರ ಗುಜರಾತ್- ಒಂದು ವಿಶ್ಲೇಷಣೆ' ಸಂವಾದ ಕಾರ್ಯಕ್ರಮದಲ್ಲಿ ಡಾ. ಜಿ.ಭಾಸ್ಕರಮಯ್ಯ ಸಂವಾದಕರಾಗಿ ಸಂಘ ಪರಿವಾರದ ರಾಜಕೀಯ ಮತ್ತು ತಂತ್ರಗಳನ್ನು ಐತಿಹಾಸಿಕ ಉದಾಹರಣೆಗಳ ಸಮೇತ ವಿವರಿಸಿದರು. ಗುಜರಾತ್ ಹಿಂಸಾಕಾಂಡಕ್ಕೆ ಆಧಾರವಾಗಿ ಹತ್ತಾರು ಹಿಂದಿ ವೈಚಾರಿಕ ಪುಸ್ತಕಗಳೊಂದಿಗೆ ನಡೆಸಿದ ಸಂವಾದ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಚಾರವಾಯಿತು. ಆರ್‌ಎಸ್‌ಎಸ್ ನ ಪರಮೋಚ್ಚ ನಾಯಕ ಸುದರ್ಶನ್‌ರವರೂ ಸೇರಿದಂತೆ ವಿವಿಧ ನಾಯಕರುಗಳು ಒಂದು ವಾರ ಮೊದಲೇ ನಗರಕ್ಕೆ ಆಗಮಿಸಿ ಭೂಗತರಾದವರಂತೆ ಒಂದೊಂದು ಹೇಳಿಕೆಗಳನ್ನು ನೀಡುತ್ತಿದ್ದರು.

ಮಾರ್ಚ್ 10 ರಂದು 'ಭಾರತದ ಜಾತಿ ವ್ಯವಸ್ಥೆ ಮತ್ತು ಹಿಂದುತ್ವ' ಈ ಸಂವಾದದಲ್ಲಿ ಅದಮಾರು ಶ್ರೀಪತಿ ಆಚಾರ್ಯರವರು ವಿವರವಾಗಿ ವಿಶ್ಲೇಷಿಸಿದರು. ಜಾತಿ ಪದ್ಧತಿಯನ್ನು ಶಾಶ್ವತವಾಗಿರಿಸಿ ವೈಭವೀಕರಿಸುವ ಇರಾದೆಯೇ ಹಿಂದುತ್ವ ಎಂದು ವಿಶ್ಲೇಷಿಸಿದರು. ಇದರ ವರದಿಯನ್ನು ಒಂದು ಅತ್ಯಧಿಕ ಪ್ರಸಾರದ ಸಂಜೆ ದೈನಿಕ ತೊಗಾಡಿಯವರ ಸಂದರ್ಶನದ ಎದುರು ಬದುರಲ್ಲೇ ಪ್ರಕಟಿಸಿತು.

ಮಾರ್ಚ್ 11 ರಂದು 'ಭಾರತದ ಸಮಾಜದ ಬದಲಾವಣೆಯ ದಾರಿ' ಇದರಲ್ಲಿ ಪ್ರೊ. ಹಯವದನ ಉಪಾಧ್ಯಾಯ ಸಂವಾದಕಾರರಾಗಿ ಭಾಗವಹಿಸಿದರು. ಜಾಗತೀಕರಣ ಮತ್ತು ಕೋಮುವಾದದ ಒಂದೇ ನಾಣ್ಯದ ಮುಖ ಎಂದು ಹೇಳಿ ದುಡಿಯುವ ಜನರ ವರ್ಗ ಹೋರಾಟವೊಂದೇ ನಮ್ಮ



ವಿಮೋಚನೆಯ ದಾರಿ ಎಂದು ಹೇಳಿದರು.

ಇದೇ ಸಮಯದಲ್ಲಿ ರಾಜ್ಯ ಸಮ್ಮೇಳನ ನಡೆಸುತ್ತಿದ್ದ ಸಿಪಿಐ ಕೂಡಾ ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ತೀವ್ರವಾಗಿ ಎದಿರೇಟು ನೀಡಿತು. ಸಿಪಿಐ ನಾಯಕ ಡಿ.ರಾಜಾರವರ ಭಾಷಣದಿಂದ ಕಕ್ಕಾಬಿಕ್ಕಿಯಾದ ಆರ್‌ಎಸ್‌ಎಸ್ ಮರುದಿನ ಅರ್ಧ ಗಂಟೆಯ ಪತ್ರಿಕಾ ಹೇಳಿಕೆ ಕಮ್ಯುನಿಸ್ಟರನ್ನು ಜರೆಯಲು ಉಪಯೋಗಿಸಿತು. ಆರ್‌ಎಸ್‌ಎಸ್, ಈ ಮೊದಲು ಸ್ವಾತಂತ್ರ್ಯ ಹೋರಾಟಗಾರರೆಂದು ಹೇಳುತ್ತಿದ್ದ ವಾಜಪೇಯಿ ಮತ್ತು ವೀರ ಸಾವರ್ಕರ್‌ರವರ ಬದಲು ಹೆಡಗೆವಾರ್‌ರವರು ಸ್ವಾತಂತ್ರ್ಯ ಹೋರಾಟಗಾರರೆಂದು ಉತ್ತರಿಸಿತು.

ಈ ರೀತಿ ಒಂದು ರೀತಿಯಲ್ಲಿ ಸೈದ್ಧಾಂತಿಕ ಗುದ್ದಾಟದಿಂದ ಆರ್‌ಎಸ್‌ಎಸ್ ವಿರುದ್ಧವಾದ ವಿಚಾರಗಳೂ ಪ್ರಕಟವಾಯಿತು. ಸಂಘ ಪರಿವಾರ ಮಂಗಳೂರಿನಲ್ಲಿ ಈ ರೀತಿಯ ಪ್ರತಿತಂತ್ರ ಎದುರಾಗಬಹುದೆಂದು ನಿರೀಕ್ಷಿಸಿರಲಿಲ್ಲ.

■ ಕೃಷ್ಣಪ್ಪ ಕೊಂಚಾಡಿ

ವಿಜಾಪುರ: ದೌರ್ಜನ್ಯಕ್ಕೆ ಧಿಕ್ಕಾರ ಹೇಳಿದ ಮಹಿಳೆಯರು

ಮಹಿಳೆಯರ ಮೇಲಿನ ದೌರ್ಜನ್ಯ, ನಿಲ್ಲಲಿ!
ಹೆಣ್ಣುಭ್ರೂಣ ಹತ್ಯೆ! ನಿಲ್ಲಲಿ ! ನಿಲ್ಲಲಿ !!
ಮಹಿಳಾ ಮೀಸಲಾತಿ ಜಾರಿಗೆ ಬರಲಿ !!
ಪಡಿತರ ಆಹಾರಧಾನ್ಯ ಚಿಮಣಿ ಎಣ್ಣೆ ಎಲ್ಲ ಬಡ ಕುಟುಂಬಗಳಿಗೆ ಸಿಗಲೇಬೇಕು

- ಎಂದು ಮುಂತಾಗಿ ಘೋಷಣೆಗಳನ್ನು ಕೂಗುತ್ತ ವಿಜಾಪುರದ ಎಪಿಎಂಎಲ್ ಗೇಟಿನಿಂದ ಹೊರಟಿದ್ದ ಜನವಾದಿ ಮಹಿಳಾ ಸಂಘಟನೆಯ ಸದಸ್ಯರು ಗಾಂಧಿ ಚೌಕಿಗೆ ಬಂದಾಗ ಸಾಲು ಸಾಲಾಗಿ ಹಾಕಿದ ಸಿನೆಮಾದ ಅಶ್ಲೀಲ ಬಿತ್ತಿಪತ್ರಗಳನ್ನು ನೋಡಿದ ತಕ್ಷಣ ಮಹಿಳೆಯರು ಅಶ್ಲೀಲ ಬಿತ್ತಿಪತ್ರಗಳನ್ನು ಪ್ರದರ್ಶಿಸುವ ಮಾಲಿಕರಿಗೆ ದಿಕ್ಕಾರ ಹೇಳುತ್ತ 10-15 ಅಡಿ ಎತ್ತರದ ಕಬ್ಬಿಣದ ಸರಳುಗಳನ್ನು ಸರಸರನೆ ಎಲ್ಲ ಅಶ್ಲೀಲ ಬಿತ್ತಪತ್ರಗಳನ್ನು ಹರಿದು ಹಾಕಿ ಗಾಂಧಿ ಪುತ್ಥಳಿಯ ಮುಂದೆ ಸುಟ್ಟುಹಾಕಿದರು. ಈ ದೃಶ್ಯ ನೋಡಿದ ಜನ ಮೂಕವಿಸ್ಮಿತರಾದರು. ಅಶ್ಲೀಲ ಬಿತ್ತಿಪತ್ರ ಪ್ರದರ್ಶಿಸುವ ಸಿನಿಮಾ ಮಾಲಿಕರಿಗೆ ಧಿಕ್ಕಾರ! ಘೋಷಣೆ ಕೂಗುವಾಗ ಸಾರ್ವಜನಿಕರು ತಮಗರಿವಿಲ್ಲದಂತೆ ಘೋಷಣೆ ಕೊಡುತ್ತಿರುವುದು ಕೂಡಾ ಸಾಮಾನ್ಯವಾಗಿತ್ತು. ದಿನಾಂಕ 11 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಸಾಲಾಗಿ ಶಿಸ್ತಿನ ಸಿಪಾಯಿಯಂತೆ ಹೊರಟಿದ್ದ ಮಹಿಳೆಯರ ದಂಡು ಗಾಂದಿ ಚೌಕಿಯಿಂದ ಮುಂದೆ ಸಾಗಿತು. ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಆಹಾರ ಇಲಾಖೆಯ ಅಧಿಕಾರಿಗಳಿಗೆ ಘೆರಾವೋ ಹಾಕಿದರು. ಅಲ್ಲದೆ 15 ದಿವಸದ ಒಳಗೆ ಪಡಿತರ ಆಹಾರಧಾನ್ಯದ ಚೀಟಿ ಕೊಡದಿದ್ದರೆ ಪುನಃ ಘೇರಾವೊ ಮಾಡುವುದಾಗಿ ಎಚ್ಚರಿಕೆ ಕೊಟ್ಟರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಸುರೇಖಾ ರಜಪೂತ, ಲಕ್ಷ್ಮಿ ಮೈಲಾರಿ ಎಂ.ಎಂ.ಖಾನ್, ಜಯಾ ಪವಾರ ಮುಂತಾದ ಮಹಿಳೆಯರು ಮಾತನಾಡಿ ಮಹಿಳೆಯರೆಲ್ಲ ಸಂಘಟಿತರಾಗಿ ಹೋರಾಡಲು ಕರೆ ನೀಡಿದರು.

ರೈತ ಸಂಘ ಜಿಲ್ಲಾ ಅಧ್ಯಕ್ಷ ಭೀಮಶಿ ಕಲಾದಗಿ ಕಾರ್ಯದರ್ಶಿ ಅಣ್ಣಾರಾಯ ಈಳಗೇರ ಮಾತನಾಡಿ, ಮಹಿಳೆಯರು ತಮ್ಮ ಹಕ್ಕಿಗಾಗಿ ಹೋರಾಡಬೇಕು ಎಂದರು. ಡಿವೈಎಫ್ಐನ ಬಸಲಿಂಗ ಕಪಾಲಿ, ರೈತಸಂಘದ ನಬಿಸಾಬ ಢವಳ ಸಿಐಟಿಯುವಿನ ವಿ.ಎಂ.ಸೊನ್ನದ ಮಹಿಳಾ ದಿನಾಚರಣೆಗೆ ಶುಭಕೋರಿ ಮಾತನಾಡಿದರು. ಹಿರಾಬಾಯಿ ಹಜೇರಿ, ಸಾವಿತ್ರಿ ಸಾಳೊಂಕೆ ಶಾರದಾ ವಸ್ತ್ರದ, ಶೈಕೀಲಾಭಾನು ಜೈಸುಬ್ಬಿ ಮುಂತಾದ 100ಕ್ಕೂ ಹೆಚ್ಚು ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಐಟಿಸಿ ವಿವಿದೋದ್ದೇಶ ಸಹಕಾರ ಸಂಘದ ಚುನಾವಣೆ ಸಿಐಟಿಯು ತಂಡದ ಪ್ರಚಂಡ ಜಯ

2005-06ರ ವರ್ಷದಿಂದ 2009-10ರ ವರ್ಷದ ವರೆಗೆ ಕಾರ್ಯ ನಿರ್ವಹಿಸುವ ಐಟಿಸಿ ಕಾರ್ಮಿಕರ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಮಂಡಳಿಗೆ ಮಾರ್ಚ್ 13 ರಂದು ನಡೆದ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮೀಸಲಿಟ್ಟ ಒಂದು ಸ್ಥಾನ ಸೇರಿದಂತೆ ಎಲ್ಲಾ ಒಂಬತ್ತು ಸ್ಥಾನಗಳಿಗೆ ಸಿಐಟಿಯು ತಂಡದ ಸದಸ್ಯರೇ ಆಯ್ಕೆಯಾಗಿದ್ದು ಪ್ರತಿ ಸ್ಪರ್ಧಿ ಎಐಟಿಯುಸಿ ವಿರುದ್ಧ ಅವೋಘ ಜಯ ದಾಖಲಿಸಿದೆ. ಸಿಐಟಿಯು ತಂಡಕ್ಕೆ ಸೇರಿದ್ದ ನಿರ್ದೇಶಕ ಮಂಡಳಿ ವಿರುದ್ಧ ವ್ಯಾಪಕ ಸುಳ್ಳು ಪ್ರಚಾರಗಳು ನಡೆದರೂ, ಏಐಟಿಯುಸಿ ತಂಡವು ಹತ್ತಾರು ಹುಸಿ ಭರವಸೆಗಳನ್ನು ನೀಡಿದರೂ ಸಹ ಸತತವಾಗಿ ನಾಲ್ಕನೇ ಬಾರಿ ಸಿಐಟಿಯು ತಂಡವು ಇಂತಹ ವಿಜಯವನ್ನು ಸಾಧಿಸಿದೆ.

ಸಾಮಾನ್ಯ ವಿಭಾಗದಲ್ಲಿ ಒಟ್ಟು 1035 ಸದಸ್ಯತ್ವದಲ್ಲಿ ಚಲಾವಣೆಯಾದ ಮತಗಳು 724. ಒಟ್ಟು 673 ಅರ್ಹ ಮತಗಳಲ್ಲಿ ಸಿಐಟಿಯು ತಂಡವು 403 ರಿಂದ 459 ಮತಗಳನ್ನು ಪಡೆದಿದೆ. ಏಐಟಿಯುಸಿ ತಂಡವು 199ರಿಂದ 254 ಮತಗಳನ್ನು ಮೀಸಲು ವಿಭಾಗದಲ್ಲಿ 708 ಅರ್ಹ ಮತಗಳಲ್ಲಿ ಸಿಐಟಿಯು ತಂಡವು 401 ಮತಗಳನ್ನು ಪಡೆದಿದ್ದು ಏಐಟಿಯುಸಿ ತಂಡವು 307 ಮತ ಪಡೆದಿದೆ.

ಈ ಅವೋಘ ವಿಜಯವು ಸಿಐಟಿಯು ಬೆಂಬಲಿಗರ ನೈತಿಕ ಸ್ಥೈರ್ಯ ಉತ್ಸಾಹವನ್ನು ಹೆಚ್ಚಿಸಿದೆ.

ಜಯಗಳಿಸಿದ ಸದಸ್ಯರುಗಳ ಹೆಸರು

ಜಿ. ಪಾತಿಮಾನಾಥನ್, ಕೆ.ಸುಧಾಕರನ್, ಆರ್. ಬಾಲಷಾ, ಆಂಥೋನಿ, ಮುನಿಚಿನ್ನಪ್ಪ, ಎ.ಶ್ರೀನಿವಾಸ್, ಎಂ.ವೆಂಕಟೇಶ್, ಎಲ್. ವಿಜಯಚಂದ್ರನ್, ಎಸ್.ಸಿ./ಎಸ್.ಟಿ. ಮೀಸಲು - ಆರ್.ಸಂಪಂಗಿ

ಡಿವೈಎಫ್ಐ ಬೆಳ್ಳಿಹಬ್ಬ - ಭಗತ್ ಸಿಂಗ್ ದಿನಾಚರಣೆ - ರಕ್ತದಾನ ಶಿಬಿರ

1980 ರಲ್ಲಿ ಸ್ಥಾಪನೆಗೊಂಡ ರಾಷ್ಟದ ಹೆಮ್ಮೆಯ ಯುವಜನ ಫೆಡರೇಷನ್ (DYFI) ತನ್ನ ಬೆಳ್ಳಿಹಬ್ಬ ಆಚರಿಸುತ್ತಿದೆ. ಹೋರಾಟ, ತ್ಯಾಗ, ಮುನ್ನಡೆಯೊಂದಿಗೆ ದೇಶದ ಸಾರ್ವಭೌಮತೆಗಾಗಿ, ರಾಷ್ಟ್ರದ ಸಮಗ್ರತೆಗಾಗಿ ತನ್ನನ್ನು ಅರ್ಪಿಸಿಕೊಂಡ ಡಿವೈಎಫ್ಐ, ರಾಷ್ಟದ ದೊಡ್ಡ ಯುವಜನ ಸಂಘಟನೆಯಾಗಿದೆ. ಭಗತ್ ಸಿಂಗ್, ರಾಜಗುರು, ಸುಖದೇವ್ ಮುಂತಾದ ಹುತಾತ್ಮರ ಧ್ಯೇಯಗಳಿಗಾಗಿ ಹೋರಾಡುತ್ತಿರುವ ಈ ಸಂಘಟನೆ ಈ ವರ್ಷ ಬೆಳ್ಳಿ ಹಬ್ಬದ ಸಡಗರದಲ್ಲಿದೆ. ಸಂಗಾತಿಗಳಾದ ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮರಾಗಿ 75 ವರ್ಷ ಕೂಡಾ.

ಜಾಗತೀಕರಣ, ಉದಾರೀಕರಣ ಹಾಗೂ ಕೋಮುವಾದದ ಅಪಾಯಗಳ ವಿರುದ್ಧ ನಿರಂತರ ಹೋರಾಡುತ್ತಲೇ ಯುವಜನ ಚಳುವಳಿಯ ಸ್ಫೂರ್ತಿಯಾದ 'ಭಗತ್ ಸಿಂಗ್ ಮತ್ತು ಸಂಗಾತಿಗಳ ಸ್ಮರಣೆಗಾಗಿ ಕೋಮುಸೌಹಾರ್ದತೆ ಹಾಗೂ ರಾಷ್ಟದ ಸಾರ್ವಭೌಮತೆಗಾಗಿ ರಕ್ತದಾನದಂತಹ ಜೀವಪರ ಕಾರ್ಯಕ್ರಮವನ್ನು ಭಾರತ ಯುವಜನ ಫೆಡರೇಷನ್ ಬೆಂಗಳೂರು ಜಿಲ್ಲಾ ಸಮಿತಿ ಏಪ್ರಿಲ್ 3 ರಂದು ಹಮ್ಮಿಕೊಂಡಿದೆ. ಬೆಂಗಳೂರಿನ ಬನಪ್ಪ ಪಾರ್ಕ್‌ನಲ್ಲಿ ನಡೆಯುವ ಈ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ ನೂರಾರು ಯುವನಜರು ಪಾಲ್ಗೊಳ್ಳಲಿದ್ದಾರೆ.

ಯುದ್ಧದಾಹಿ ಅಮೆರಿಕದ ವಿರುದ್ಧ ಪ್ರತಿಭಟನೆ

ಇರಾಕ್ ಮೇಲೆ ಅಮೇರಿಕಾ ಯುದ್ಧ ಆರಂಭಿಸಿ ಮಾರ್ಚ್ 20,2005 ಕ್ಕೆ ಎರಡು ವರ್ಷಗಳಾಗಿವೆ. ಇಂತಹ ಯುದ್ಧ ಕೂಡದೆಂದು ವಿಶ್ವದಾದ್ಯಂತ ಮಿಲಿಯಗಟ್ಟಲೆ ಜನ ಆಗ್ರಹ ಪಡಿದರೂ, ವಿಶ್ವ ಸಂಸ್ಥೆಯನ್ನು ದಿಕ್ಕರಿಸಿ ಇರಾಕ್ ಮೇಲೆ ಅಮಾನುಷ ಯುದ್ಧ ಸಾರಿ ಒಂದು ಲಕ್ಷಕ್ಕೂ ಹೆಚ್ಚು ಮುಗ್ದ ಜನರನ್ನೂ ಬಲಿತೆಗೆದುಕೊಂಡಿತು. ಇರಾಕ್‌ನಲ್ಲಿ ವಿಧ್ವಂಸಕ ಶಸ್ತ್ರಾಸ್ತ್ರಗಳು ಮತ್ತು ಭಾರೀ ಆಧುನಿಕ ಸೈನ್ಯದೊಂದಿಗೆ ತಳವೂರಿರುವ ಅಮೇರಿಕಾ ಅಲ್ಲಿನ ಪ್ರಾಚೀನ ಕಲೆ, ಸಂಸ್ಕೃತಿ, ಇತಿಹಾಸ, ಆಧುನಿಕ ಬೆಳವಣಿಗೆಗಳನ್ನು ಹೊಂದಿ ರುವ ಸೆಕ್ಯುಲರ್ ಇರಾಕನ್ನು ಧ್ವಂಸಗೊಳಿಸಿದೆ.

ಈ ಎಲ್ಲಾ ದುರಾಕ್ರಮಣ, ಅಮಾನುಷ ಕೃತ್ಯಗಳು ಇಡೀ ಜಗತ್ತಿನ ಮೇಲೆ ಅದಿಪತ್ಯ ಸ್ಥಾಪಿಸುವ, ತನ್ನ ಕಾಲಡಿಯಲ್ಲಿ ಏಕಧೃವದ ವಿಶ್ವ ರಚನೆಯ ಅಮೇರಿಕನ್ ಸಾಮ್ರಾಜ್ಯಶಾಹಿ ಹವಣಿಕೆಯ ಭಾಗವಾಗಿದೆ. ಆದರೆ ಇದರ ವಿರುದ್ಧ ಜಗತ್ತಿನೆಲ್ಲೆಡೆ ವ್ಯಾಪಕ ಪ್ರತಿರೋಧ ಎದ್ದಿದೆ. ಯುದ್ಧ ಸಾರಿದ ಹೊಸಿಲಿನಲ್ಲೇ ಜಗತ್ತಿನ ಇತಿಹಾಸದಲ್ಲೇ ಕಂಡು ಕೇಳರಿಯದಂತಹ ಯುದ್ಧವಿರೋಧಿ-ಶಾಂತಿಪರ ಪ್ರತಿಭಟನೆಗಳು ಮೊಳಗಿದವು. ಸ್ವತಹ ಅಮೇರಿಕಾ, ಬ್ರಿಟನ್ ದೇಶಗಳಲ್ಲೆ ವಿಜಲಿಯ-ಮಿಲಿಯ ಜನರು ಪ್ರವಾಹೋಪಾದಿಯಲ್ಲಿ ಯುದ್ಧವಿರೋಧಿ ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು. 2004 ರಲ್ಲಿಯೂ ಇರಾಕ್‌ನಿಂದ ಅಮೇರಿಕಾ ಕಾಲ್ತೆಗೆಯಬೇಕೆಂದು ಜಗತ್ತಿನಾದ್ಯಂತ ಪ್ರತಿಭಟನೆಗಳು ನಡೆದವು. ಇಂತಹ ಸನ್ನಿವೇಶದಲ್ಲಿ ಈ ವರ್ಷವೂ ಇರಾಕ್‌ನ ದುರಾಕ್ರಮಣ ವಿರೋಧಿಸಿ ಎಲ್ಲಾ ಯುದ್ಧ ವಿರೋಧಿ ಸಂಘಟನೆಗಳು, ವಿಶ್ವದಾದ್ಯಂತ ಮಿಲಿಯಗಟ್ಟಲೆ ಶಾಂತಿ ಪ್ರಿಯ ಜನತೆ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಈ ಪ್ರತಿರೋಧಕ ಪ್ರಖರತೆಯು ಅಮೇರಿಕಾವನ್ನು ಕಂಗಾಲಾಗಿಸಿದೆ.

ಮಾರ್ಚ್ 20 2005 ರಂದು ಭಾನುವಾರ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ನಿಡುಮಾಮಿಡಿ ಮಠದ ಸ್ವಾಮೀಜಿಗಳಾದ ಚೆನ್ನಮಲ್ಲ ವೀರಭದ್ರಸ್ವಾಮಿಯವರು, ಕಾಮ್ರೇಡ್ ಜಿ.ವಿ.ಶ್ರೀರಾಮರೆಡ್ಡಿಯವರು, ಸಿಪಿಐ ನಾಯಕರಾದ ಅನಂತಸುಬ್ಬರಾವ್, ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷರೂ ಹಾಗೂ ಆಫ್ರಿಕಾದಲ್ಲಿ ರಾಯಭಾರಿಯಾಗಿದ್ದ ಎಲ್.ಸಿ.ಜೈನ್, ಸಮಾಜ ಕಾರ್ಯಕರ್ತೆ ದೇವಕಿ ಜೈನ್, ವಿಜ್ಞಾನಿ ಡಾ.ಚಟರ್ಜಿ, ಜೆ.ಡಿ(ಎಸ್)ನ ಮಾಜಿ ಸಚಿವ ಆರ್.ಕೃಷ್ಣಪ್ಪ, ಜೆ.ಡಿ(ಎಸ್) ಪ್ರಧಾನ ಕಾರ್ಯದರ್ಶಿ ವೈ.ಎಸ್.ವಿ.ದತ್ತ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಜೆ.ಎಂ.ಎಸ್‌ನ ವಿಮಲಾ ಮುಂತಾದವರು ಭಾಗವಹಿಸಿದ್ದರು.

ನಗರದ ಎಂ.ಜಿ.ರಸ್ತೆಯ ಮಹಾತ್ಮಾಗಾಂಧಿ ಪ್ರತಿಮೆ ಬಳಿಯಿಂದ ಮೆರವಣಿಗೆಯಲ್ಲಿ ತೆರಳಿ, ಬ್ರಿಟೀಷ್ ಟ್ರೇಡ್ ಸೆಂಟರ್ ಹಾಗೂ ಲೈಬ್ರರಿ ಎದುರು ಪ್ರತಿಭಟನಾ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ವೀರಭದ್ರ ಚನ್ನಮಲ್ಲ ಸ್ವಾಮಿಜಿಯವರು ಜಗತ್ತಿನಲ್ಲಿ ಶಾಂತಿ ಕಾಪಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಯುದ್ಧವನ್ನು ವಿರೋಧಿಸ ಬೇಕು. ಎಲ್ಲಾ ಜನರು ನೆಮ್ಮದಿಯ ಜೀವನ ನಡೆಸುವ ಸಮಾಜವನ್ನು ನಿರ್ವಹಿಸಬೇಕೆಂದು ಹೇಳಿದರು. ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿಯವರು ಇರಾಕ್ ಮೇಲೆ ಯುದ್ಧ ಸಾರಿದ ಅಮೇರಿಕಾ ಅಧಿಪತ್ಯ ಸಾಧಿಸುವ ಯತ್ನವನ್ನು ಸೋಲಿಸಬೇಕೆಂದರು. AITUCಯ ಅನಂತ ಸುಬ್ಬರಾವ್ ಮಾತನಾಡಿ ಸಂಘ ಪರಿವಾರದವರನ್ನು ಬಿಟ್ಟು ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಗೆ ಕೋಮುವಾದ ಗಲಭೆ ನಿಗ್ರಹಿಸಲು ವಿಫಲವಾದ ಹಿನ್ನೆಲೆಯಲ್ಲಿ ಅಮೇರಿಕಾ ವೀಸಾ ನೀಡಲು ನಿರಾಕರಿಸಿದೆ, ಇದು ರಾಷ್ಟ್ರಕ್ಕೆ ಮಾಡಿದ ಅವಮಾನ ಎಂದು ಹೇಳುವ ಇವರು ಅಮೇರಿಕಾ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ, ಆದರೆ ಹಿಂದಿನ ವಾಜಪೇಯಿ ಸರ್ಕಾರ ಅಮೇರಿಕಾದ ಪರವಾಗಿ ಇರಾಕಿಗೆ ಸೈನ್ಯ ಕಳುಹಿಸಲು ಸಿದ್ಧವಾಗಿತ್ತು ಎಂದು ಟೀಕಿಸಿದರು. ಭೌತವಿಜ್ಞಾನಿಗಳಾದ ಡಾ.ಎಸ್.ಚಟರ್ಜಿಯವರು ಮಾತನಾಡಿ ಲ್ಯಾಟಿನ್ ಅಮೇರಿಕಾ, ಭಾರತ, ಆಫ್ರಿಕಾದಂತಹ ರಾಷ್ಟಗಳು ಒಂದಾಗಿ ಸಾಮ್ರಾಜ್ಯ ಶಾಹಿ ಶಕ್ತಿಯನ್ನು ಸೋಲಿಸಬೇಕು ಎಂದರು, ಅಮೇರಿಕಾದ ವಿರುದ್ಧ ತೀವ್ರ ಪ್ರತಿರೋಧ ಒಡ್ಡಿರುವ ಇರಾಕ್ ಜನತೆ ನಮ್ಮ ಬೆಂಬಲ ಸೂಚಿಸಬೇಕೆಂದು ಕರೆ ನೀಡಿದರು.

ಎ.ಕೃಷ್ಣಪ್ಪ, ವೇಣುಗೋಪಾಲ್, ವೈ.ಎಸ್.ವಿ. ದತ್, ದೇವಕೀ ಜೈನ್, ಎಲ್.ಸಿ.ಜೈನ್ ಮುಂತಾದವರು ಮಾತನಾಡಿ ಸಾಮ್ರಾಜಿಯಶಾಹಿ ಅಮೇರಿಕಾದ ಯುದ್ಧಕೋರ ನೀತಿಯನ್ನು ಖಂಡಿಸಿದರು.

ಯುದ್ಧವಿರೋಧಿ ವೇದಿಕೆಯ ಸಂಚಾಲಕರಾದ ಎಸ್.ವೈ.ಗುರುಶಾಂತ್‌ರವರು ಬಂದಿರುವ ಎಲ್ಲಾ ಯುದ್ಧವಿರೋಧಿ ಸಂಘಟನೆಗಳಿಗೂ ವಂದನೆಗಳನ್ನು ಸಲ್ಲಿಸುತ್ತಾ ಜಗತ್ತಿನಾದ್ಯಂತ ಎರಡು ವರ್ಷಗಳಿಂದ ನಡೆದ ಪ್ರತಿಭಟನೆ ಸಾಮ್ರಾಜ್ಯಶಾಹಿ ಶಕ್ತಿಗಳ ಮೇಲೆ ಭಾರೀ ಪ್ರಭಾ ಬೀರಿದೆ, ಲ್ಯಾಟಿನ್ ಅಮೇರಿಕಾದಲ್ಲಿ ದೊಡ್ಡ ರಾಜಕೀಯ ಬದಲಾವಣೆಗೂ ಕಾರಣವಾಗಿದೆ ಎಂದರು. ಸದ್ದಾಂ ಹುಸೇನ್ ಪದಚ್ಯುತಿಯನ್ನು ಟೀಕಿಸಿ ಅದನ್ನು ತೀರ್ಮಾನಿಸಬೇಕಾಗಿರುವುದು ಇರಾಕಿನ ಜನತೆಯೇ ಹೊರತು ಅಮೇರಿಕಾಗೆ ಯಾವ ನೈತಿಕ ಅಧಿಕಾರವೂ ಇಲ್ಲ ಎಂದರು. ಸಾಮ್ರಾಜ್ಯಶಾಹಿ ಅಮೇರಿಕಾದ ಯುದ್ಧಕೋರ ನೀತಿಯ ವಿರುದ್ಧ ತೀವ್ರ ಹೋರಾಟ ರೂಪಿಸಬೇಕೆಂದು ಕರೆ ನೀಡಿದರು. ಈ ಪ್ರತಿಭಟನೆಯಲ್ಲಿ ಸಿಐಟಿಯು, ಡಿವೈಎಫ್ಐ, ಎಸ್ಎಫ್ಐ, ಎಐಎಸ್ಎಫ್, ಎಐವೈಎಫ್ ಅಲ್ಲದೆ ಸದ್ಭಾವನಾ ಯೂತ್ ಅಸೋಸಿಯೇಷನ್, ಟಿಪ್ಪು ಪ್ರಚಾರ ಸಮಿತಿ ಮುಂತಾದ ಸಂಘಟನೆಗಳು ಭಾಗವಹಿಸಿದ್ದವು.



ಪೇಟೆಂಟ್ ದಾಳಿಗೆ ಒಂದು ತಡೆ

ಕದನ ಮುಂದುವರಿಕೆ

ಪೇಟೆಂಟ್ ಕಾಯಿದೆ ತಿದ್ದುಪಡಿಗೆ ಬಿಜೆಪಿ ಮಾಡುತ್ತಿರುವ ವಿರೋಧ ಅದರ ದ್ವಂದ್ವ ನೀತಿಗೆ ಸಾಕ್ಷಿ. ತಾನು ಅಧಿಕಾರದಲ್ಲಿದ್ದಾಗ 1999 ಮತ್ತು 2002 ರಲ್ಲಿ, ಎಡಪಕ್ಷಗಳ ವಿರೋಧದ ನಡುವೆಯೂ ಎರಡು ಬಾರಿ ತಿದ್ದುಪಡಿ ಮಾಡಿ, 2003 ರಲ್ಲಿ ಮೂರನೇ ಬಾರಿಗೆ ಕರಡು ಮಸೂದೆಯನ್ನು ತಯಾರಿಸಿದ ಎನ್‌ಡಿಎ ಮತ್ತು ಬಿಜೆಪಿ ಈಗ ಸಂಸದೀಯ ಸಮಿತಿಗೆ ಒಪ್ಪಿಸಬೇಕೆಂದು ವಿರೋಧದ ನಾಟಕವಾಡುತ್ತಿವೆ.

ಎಡಪಕ್ಷಗಳು ಮಂಡಿಸಿದ 12 ತಿದ್ದುಪಡಿಗಳಲ್ಲಿ 10ನ್ನು ಅಂಗೀಕರಿಸಲು ಯುಪಿಎ ಸರ್ಕಾರ ಒಪ್ಪಿದ್ದು ಇನ್ನೆರಡು ತಿದ್ದುಪಡಿಗಳ ಕುರಿತು ಪರಿಶೀಲಿಸಲು ತಜ್ಞರ ಸಮಿತಿಯನ್ನು ನೇಮಿಸಲಾಗುವುದು. ಒಟ್ಟಾರೆಯಾಗಿ 1970 ರ ಪೇಟೆಂಟ್ ಕಾಯಿದೆಗೆ ತರಲು ಉದ್ದೇಶಿಸಿದ್ದ 3ನೇ ತಿದ್ದುಪಡಿಯ ಭಾರಿ ಅನಾಹುತವನ್ನು ಸ್ವಲ್ಪಮಟ್ಟಿಗೆ ತಡೆ ಹಿಡಿಯಲು ಸಾಧ್ಯವಾಗಿದೆ. ಆದರೆ ಟ್ರಿಪ್ಸ್ (TRIPS) ಒಪ್ಪಂದವನ್ನು ವಿಶ್ವ ವ್ಯಾಪಾರ ಸಂಘಟನೆಯ ವ್ಯಾಪ್ತಿಯಿಂದ ಹೊರ ತರುವ ದೀರ್ಘಾವಧಿಯ ಹೋರಾಟವನ್ನು ಮುಂದುವರೆಸಬೇಕಾಗಿದೆ.

ದೇಶದಲ್ಲಿ ಮಾತ್ರವಲ್ಲದೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾಗಿ ಚರ್ಚೆಗೆ ಒಳಗಾಗಿರುವ ಭಾರತದ ಪೇಟೆಂಟ್ ಕಾಯಿದೆ (3ನೇ ತಿದ್ದುಪಡಿ) ಮಸೂದೆ ಅಂಗೀಕಾರವಾದ ಹಿನ್ನೆಲೆಯಲ್ಲಿ ಎಡಪಕ್ಷಗಳ ನಿಲುಮೆಯನ್ನು ವಿವರಿಸುವ ಹೇಳಿಕೆ ಇಲ್ಲಿದೆ.

1995 ರಲ್ಲಿ ಅಂತಿಮವಾಗಿ ವಿಶ್ವ ವ್ಯಾಪಾರ ಸಂಘಟನೆ (WTO) ಒಪ್ಪಂದದ ಭಾಗವಾದ ಬೌದ್ಧಿಕ ಹಕ್ಕುಗಳ ಸಂಬಂಧಿತ ವಾಣಿಜ್ಯ (TRIPS) ಒಪ್ಪಂದವು ಒಂದು ಅತ್ಯಂತ ಚರ್ಚಾಸ್ಪದವಾದ ಮತ್ತು ತೀಕ್ಷ್ಣವಾದ ಪ್ರತಿರೋಧ ಎದುರಿಸಿದ ಒಪ್ಪಂದ. TRIPS ಒಪ್ಪಂದವು ಬಹುರಾಷ್ಟ್ರೀಯ ಕಂಪನಿಗಳ ಪರವಾದ ತಾರತಮ್ಯದಿಂದ ಕೂಡಿದ ಒಪ್ಪಂದವಾಗಿತ್ತು ಹಾಗೂ ಇಂದು ಸಹ ಅಂತೆಯೇ ಇದೆ ಎಂಬುದು ಎಡ ಪಕ್ಷಗಳ ನಿರಂತರವಾದ ಪ್ರತಿಪಾದನೆ. WTO ಒಪ್ಪಂದಕ್ಕೆ ಎಡೆ ಮಾಡಿದ ಉರುಗ್ವೆ ಸುತ್ತಿನ ಮಾತುಕತೆಗಳ ಸಂದರ್ಭದಲ್ಲೇ TRIPS ಗೆ ಸಹಿ ಹಾಕುವುದರ ಕುರಿತು ಎಡ ಪಕ್ಷಗಳು ಎಚ್ಚರಿಸಿದ್ದವು. ಆದರೆ ಅಂದಿನ ಸರ್ಕಾರ ಜನಾಭಿಪ್ರಾಯವನ್ನು ಕಡೆಗಣಿಸಿ ಸಹಿ ಮಾಡಿತು.

ಒಮ್ಮೆ ಭಾರತವು TRIPS ಗೆ ಸಹಿ ಮಾಡಿದ ನಂತರ, ಒಪ್ಪಂದವು ಭಾರತದಂತಹ ರಾಷ್ಟ್ರಗಳ ಮೇಲೆ ನಿರ್ದಿಷ್ಟವಾಗಿ 1970 ರ ಭಾರತೀಯ ಪೇಟೆಂಟ್ ಕಾಯ್ದೆಗೆ ತಿದ್ದುಪಡಿಯಂತಹ ಬಾಧ್ಯತೆಗಳನ್ನು ನಿರ್ಮಿಸಿದೆ. ಈ ಒಪ್ಪಂದಕ್ಕೆ ಬದ್ಧವಾಗುವ ನಿಟ್ಟಿನಲ್ಲಿ 1999 ಮತ್ತು 2002 ರಲ್ಲಿ 1970ರ ಕಾಯ್ದೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಎರಡು ಬಾರಿ ತಿದ್ದುಪಡಿಗಳನ್ನು ತಂದಿತ್ತು. 2003 ರ ಡಿಸೆಂಬರ್‌ನಲ್ಲಿ ಮತ್ತಷ್ಟು ತಿದ್ದುಪಡಿಗಳನ್ನು ಮಾಡಲು ಮತ್ತೊಂದು ಮಸೂದೆ ತಂದಿತ್ತು.

ಈ ಎಲ್ಲಾ ಮಸೂದೆಗಳ ವಿಷಯಗಳಲ್ಲೂ ಇಂದಿನ ಸರ್ಕಾರಗಳು ಸಾರ್ವಜನಿಕ ಹಿತಾಸಕ್ತಿಗಳನ್ನು ಕಡೆಗಣಿಸುತ್ತಾ TRIPS ನ ದುಷ್ಪರಿಣಾಮಗಳನ್ನು ಕಡಿಮೆಗೊಳಿಸಬಹುದಾಗಿದ್ದ, TRIPS ಒಪ್ಪಂದದಲ್ಲಿ ಲಭ್ಯವಿದ್ದ ಸೀಮಿತ ರಕ್ಷಣಾ ಅವಕಾಶಗಳನ್ನು ಬಳಸಿಕೊಳ್ಳಲು ನಿರಾಕರಿಸಿವೆ ಎಂಬುದು ಎಡಪಕ್ಷಗಳ ಅಭಿಪ್ರಾಯವಾಗಿದೆ.

ಡಿಸೆಂಬರ್ 2003 ರಲ್ಲಿ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ರೂಪಿಸಿದ್ದ ಮಸೂದೆಯನ್ನು ಯುಪಿಎ ಸರ್ಕಾರವು ಪುನರುಜ್ಜೀವಿತಗೊಳಿಸಿದೆ. ಹಿಂದಿನ ಮಸೂದೆಯಂತೆಯೇ ಈ ಮಸೂದೆಯು ಇದೆ. ಈ ಪೇಟೆಂಟ್ (ಮೂರನೇ) ತಿದ್ದುಪಡಿ ಮಸೂದೆಯು ಇಂದಿನ ಚರ್ಚೆಯ ವಿಷಯವಾಗಿತ್ತು. ರಾಷ್ಟ್ರದ ಹಿತಾಸಕ್ತಿಗಳನ್ನು ರಕ್ಷಿಸಲು ವಿಫಲವಾಗುವ ಈ ಮಸೂದೆಯು ದೂರಗಾಮಿ ಪರಿಣಾಮಗಳನ್ನು ಬೀರಲಿವೆ ಎಂಬುದು ಎಡಪಕ್ಷಗಳ ದೃಢ ನಿಲುಮೆಯಾಗಿತ್ತು.

ಸರ್ಕಾರವು 2004 ರ ನವೆಂಬರ್‌ನಲ್ಲಿ ಮಸೂದೆ ಕುರಿತು ಎಡಪಕ್ಷಗಳೊಂದಿಗೆ ಚರ್ಚಿಸಿದಾಗ ಅಗತ್ಯವಿರುವ ಬದಲಾವಣೆಗಳ ಕುರಿತು ಟಿಪ್ಪಣಿಯನ್ನು ಎಡಪಕ್ಷಗಳು ನೀಡಿದ್ದವು. ಇದರ ನಂತರ ಡಿಸೆಂಬರ್ 2004 ರಲ್ಲಿ ತಿದ್ದುಪಡಿಗಳ ಸಮಗ್ರ ಪಟ್ಟಿಯನ್ನು ನೀಡಲಾಗಿತ್ತು. 2004 ರ ತಿದ್ದುಪಡಿಯನ್ನು ಮಾರ್ಪಡಿಸಲು ಮಾತ್ರವೇ ಅಲ್ಲದೇ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತಂದಿದ್ದ 2002 ಮತ್ತು 2003 ರಲ್ಲಿನ ತಿದ್ದುಪಡಿಗಳ ಕೊರತೆ ಹಾಗೂ ನ್ಯೂನತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ತಿದ್ದುಪಡಿಗಳ ಪಟ್ಟಿಯನ್ನು ನೀಡಲಾಗಿತ್ತು. TRIPS ಒಪ್ಪಂದದಲ್ಲಿನ ಸಡಿಲತೆಯನ್ನು ಬಳಸಿ ನೂತನ ಕಾಯ್ದೆಯಲ್ಲಿ ಗರಿಷ್ಠ ರಕ್ಷಣೆಯನ್ನು ಪಡೆದುಕೊಳ್ಳುವುದು ಎಡಪಕ್ಷಗಳು ಪ್ರಸ್ತಾಪಿಸಿದ ತಿದ್ದುಪಡಿಗಳ ಪ್ರಯತ್ನವಾಗಿತ್ತು.

ಎಡಪಕ್ಷಗಳ ವಿರೋಧದಿಂದಾಗಿ ಸರ್ಕಾರವು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಿಲ್ಲ. ಬದಲಾಗಿ 2004

ಪುಟ 11 ಕ್ಕೆ

ನೀತಿಬದ್ಧ ನಿಲುಮೆಯನ್ನು ಪ್ರತಿಪಾದಿಸಿ ಎತ್ತಿಹಿಡಿದ ಲೋಕಸಭಾ ಸ್ಪೀಕರ್ ಮೇಲೆ ಬಿಜೆಪಿ ಕೂಟ ಧಾಳಿಯನ್ನು ಹರಿಯಬಿಟ್ಟಿದೆ. ಸಂಸದೀಯ ಪ್ರಜಾಪ್ರಭುತ್ವೀಯ ಸಂಸ್ಥೆಗಳನ್ನು ಅವಹೇಳನ ಮಾಡುವ ಅದರ ಇತಿಹಾಸ ಗೊತ್ತಿರುವಂತಹದ್ದೇ. ಈಗ ಮತ್ತೊಮ್ಮೆ ಅದರ ಬಣ್ಣ ಬಯಲು

ಲೋಕಸಭಾಧ್ಯಕ್ಷರ ಸಂಸ್ಥೆಯ ಮೇಲೆ ಧಾಳಿ

ಬಿಜೆಪಿಯ ನಿಜ ಬಣ್ಣ ಬಯಲು


ಲೋಕಸಭಾ ಅಧ್ಯಕ್ಷರ ಸಂಸ್ಥೆಯನ್ನು ಮತ್ತೊಮ್ಮೆ ಅವಹೇಳನ ಮಾಡುವ ಮೂಲಕ ಸಂಸದೀಯ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಅಧಿಕಾರಸ್ಥ ಸಂಸ್ಥೆಗಳ ಕುರಿತು ಬಿಜೆಪಿಗೆ ಇರುವ ತಿರಸ್ಕಾರವನ್ನು ತೋರುತ್ತದೆ. ಕಳೆದ 6 ವರ್ಷಗಳಲ್ಲಿ ಬಿಜೆಪಿಯ ಅವಹೇಳನಕ್ಕೆ ಒಳಗಾಗದ ಸಂವಿಧಾನಿಕ ಸಂಸ್ಥೆಗಳ ಉಳಿದಿಲ್ಲ. ಸಂವಿಧಾನಿಕ ಸಂಸ್ಥೆಗಳು ಜಾತ್ಯತೀತ ಪ್ರಜಾಸತ್ತೆಯನ್ನು ರಕ್ಷಿಸಲು ಮುಂದಾದಾಗೆಲ್ಲ ಅವುಗಳ ಮೇಲೆ ತುಚ್ಛ ಧಾಳಿಗಳನ್ನು ಬಿಜೆಪಿ ನಡೆಸಿದೆ. ಚುನಾವಣೆ ಸಮಯ ಕುರಿತು ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರ್ಕಾರದ ವಾದವನ್ನು ಚುನಾವಣಾ ಆಯೋಗ ಒಪ್ಪದಿರಲು ನಿರ್ಧರಿಸಿದಾಗ ಅದರ ಮೇಲೆ ದಾಳಿ ನಡೆಸಿತು. ಗುಜರಾತ್ ಜನಾಂಗ ಹತ್ಯೆಯಲ್ಲಿ ಅಲ್ಲಿನ ರಾಜ್ಯ ಸರ್ಕಾರದ ಭಾಗಿದಾರಿಕೆಯನ್ನ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ತೋರ್ಪಡಿಸಿದಾಗ ಆಯೋಗದ ಮೇಲೆಯೂ ಅದು ದಾಳಿ ನಡೆಸಿತು. ಗುಜರಾತ್ ಕೋಮುದಳ್ಳುರಿಯ ಮೊಕದ್ದಮೆಗಳನ್ನು ರಾಜ್ಯದಿಂದ ಹೊರಗೆ ವಿಚಾರಣೆ ನಡೆಸಬೇಕೆಂದು ಸುಪ್ರೀಂಕೋರ್ಟ್ ಆದೇಶಿಸಿದಾಗ, ಅದರ ಮೇಲೂ ಅವರು ದಾಳಿ ನಡೆಸಿದರು. ಅವರ ಹಿತಾಸಕ್ತಿಗಳಿಗೆ ಅನುಗುಣವಾಗದಿದ್ದಾಗ ಅವರು ರಾಜ್ಯಪಾಲರ ಹಾಗೂ ಲೆಕ್ಕ ಪರಿಶೋಧಕರ (ಸಿಎಜಿ) ಸಂಸ್ಥೆಗಳ ಮೇಲೂ ಧಾಳಿ ನಡೆಸಿದ್ದರು. ಭಾರತದ ರಾಷ್ಟ್ರಪತಿ ಕಛೇರಿಯ ಮೇಲೆಯೂ ಧಾಳಿ ನಡೆಸಿದ್ದರು. ಅದರ ಭಾಗವಾಗಿಯೇ ಇಂದಿಗೂ ಸಹಾ ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ರವರೊಂದಿಗೆ ವ್ಯಾಗ್ಯುದ್ಧ ಮುಂದುವರೆಸಿದ್ದಾರೆ. ದಿನಕಳೆದಂತೆ ಅವರ ವರ್ತನೆಯಿಂದಾಗಿ ಭಾರತದ ಜನತೆಯು ಸದ್ಯ ಅವರು ಆಡಳಿತದ ಚುಕ್ಕಾಣಿ ಹಿಡಿದಿಲ್ಲವಲ್ಲ ಎಂದೂ ನಿಟ್ಟುಸಿರು ಬಿಡುತ್ತಿದ್ದಾರೆ. ಹಾಗೇನಾದರೂ ಆಡಳಿತದಲ್ಲಿ ಇದಿದ್ದರೆ ಸಂವಿಧಾನಿಕ ಪ್ರಾಧಿಕಾರಗಳನ್ನು ಕಡೆಗಣಿಸುವ ಹಾಗೂ ಸಂಸದೀಯ ಪ್ರಜಾಪ್ರಭುತ್ವವನ್ನು ದಾರಿತಪ್ಪಿಸುವ ಕೆಲಸವನ್ನು ಮತ್ತಷ್ಟು ತೀವ್ರಗೊಳಿಸುತ್ತಿದ್ದರು.

ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಸ್ವರೂಪ ಕುರಿತ ಅವರ ವಿರೋಧದ ಒಟ್ಟಾರೆ ಕಣ್ಣೋಟದ ಭಾಗವಾಗಿ ಸಂವಿಧಾನಿಕ ಪ್ರಾಧಿಕಾರಿಗಳ ಕುರಿತ ಬಿಜೆಪಿಯ ಅಗೌರವ ಅಡಕವಾಗಿದೆ. ಆರ್.ಎಸ್.ಎಸ್. ನ ರಾಜಕೀಯ ಅಸ್ತ್ರವಾಗಿರುವ ಬಿಜೆಪಿಯು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಅಸ್ಪೃಶ್ಯತೆಯ ಫ್ಯಾಸಿಸ್ಟ್ ಹಿಂದೂರಾಷ್ಟ್ರವಾಗಿ ಮಾರ್ಪಡಿಸಲು ಅದು ಹವಣಿಸುತ್ತಿದೆ.

ಲೋಕಸಭೆಯ ಅಧ್ಯಕ್ಷರು ಶಾಸಕಾಂಗದ ಕಾರ್ಯವ್ಯಾಪ್ತಿಯಲ್ಲಿ ನ್ಯಾಯಾಂಗದ ಮಧ್ಯಪ್ರವೇಶದಿಂದ ಉಂಟಾಗಿರುವ ವಿಶಾಲ ಪರಿಣಾಮಗಳ ಕುರಿತು ಚರ್ಚಿಸಲೆಂದು ವಿಧಾನಸಭಾ ಅಧ್ಯಕ್ಷರುಗಳ ಸಭೆ ಕರೆಯುವ ಪ್ರಸ್ತಾಪಾ ಮಾಡಿದ್ದ ಹಿನ್ನೆಲೆಯಲ್ಲಿ ಇತ್ತೀಚಿನ ಅವರ ದಾಳಿ ಲೋಕಸಭಾಧ್ಯಕ್ಷರ ಸಂಸ್ಥೆಯ ಮೇಲೆ ನಡೆದಿದೆ. ವಾಸ್ತವವಾಗಿ ಲೋಕಸಭೆಯ ಅಧ್ಯಕ್ಷರಾಗಿ ಶಾಸಕಾಂಗದ ಪಾವಿತ್ರತೆಯನ್ನು ರಕ್ಷಿಸುವಲ್ಲಿ ಅಧ್ಯಕ್ಷರುಕರ್ತವ್ಯ ಬದ್ಧರಾಗಿ ಕಾರ್ಯಾಂಗ ಮತ್ತು ನ್ಯಾಯಾಂಗ ನಡುವಿನ ಅಧಿಕಾರ ವಿಂಗಡಣೆ ನಿರ್ದಿಷ್ಟವಾಗಿ ಅನುಸರಿಸುವಂತದ್ದು. ಪ್ರಜಾಪ್ರಭುತ್ವವು ಪ್ರಬುದ್ಧಗೊಂಡಂತೆ ಈ ಮೂರು ಅಂಗಗಳ ಸಮತೋಲನವನ್ನು ರಕ್ಷಿಸಲು ಅನೇಕ ತಿದ್ದುಪಡಿಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸಬಯಸುವ ಯಾರೇ ಆಗಲಿ ಜನತೆಯ ಸರ್ವೋಚ್ಛ ಸಾರ್ವಭೌಮತೆಯ ಅಡಿಯಲ್ಲಿ ಈ ಮೂರು ಅಂಗಗಳ ನಡುವಿನ ಸಂಬಂಧಿತ ಸ್ವಾಯತ್ತತೆಯನ್ನು ಖಾತ್ರಿ ಪಡಿಸುವಲ್ಲಿನ ಸಮತೋಲನವನ್ನು ಪರೀಕ್ಷಿಸುವ ಹಾಗೂ ಉತ್ತಮಪಡಿಸುವ ಎಲ್ಲಾ ಸಲಹೆಗಳನ್ನು ಸ್ವಾಗತಿಸಬೇಕು.

ಆದರೆ ಇದು ಬಿಜೆಪಿಗೆ ಅನ್ವಯವಾದಂತೆ ಕಾಣುವುದಿಲ್ಲ. ಅವರ ಚೀರಾಟಕ್ಕೆ ಇತ್ತೀಚಿನ ಉತ್ತೇಜನವೆಂದರೆ ಜಾರ್ಖಂಡ್ ಅಸಂಬ್ಲಿ ಕುರಿತ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದ ನಂತರದ ಲೋಕಸಭಾ ಅಧ್ಯಕ್ಷರ ನಿರ್ಣಯ. ಈ ಹಿಂದೆ ಬಿಜೆಪಿಯು ಜಾರ್ಖಂಡ್ ರಾಜ್ಯಪಾಲರನ್ನು

ನೀತಿಬದ್ಧ ನಿಲುಮೆ ಪ್ರತಿಪಾದಿಸಿದ ಸ್ಪೀಕರ್ ಸೋಮನಾಥ ಚಟರ್ಜಿ



ಭೂಗತ ವ್ಯಕ್ತಿಗಳೊಂದಿಗಿನ ಸಂಬಂಧದ ಹೆಸರಲ್ಲಿ ತೇಜೋವಧೆ ಮಾಡಿತ್ತು. ಯಾವುದೇ ರಾಜ್ಯಪಾಲರಾಗಲಿ ಅವರ ಸ್ಥಾನದ ಘನತೆಗೆ ತಕ್ಕುದಾಗಿ ನಡೆದುಕೊಳ್ಳದಿದ್ದಲ್ಲಿ ಅವರ ಪರ ಯಾರು ಸಹ ವಕಾಲತ್ತು ನಡೆಸಲಾಗದು. ಇತ್ತೀಚೆಗೆ ಜಾರ್ಖಂಡ್ ಪ್ರಕರಣವನ್ನು ಒಳಗೊಂಡಂತೆ ಈ ಹಿಂದೆಯೂ ಎಲ್ಲಾ ಸಂದರ್ಭಗಳಲ್ಲಿಯೂ ಸಹ ಸಿಪಿಐ(ಎಂ) ಪಕ್ಷವು ಯಾವುದೇ ಗೊಂದಲವಿಲ್ಲದೇ ಇದನ್ನು ಸ್ಪಷ್ಟಪಡಿಸಿದೆ.

1996 ರಲ್ಲಿ ಲೋಕಸಭೆಯ ಬಹುಮತದ ಸಧಸ್ಯರು ಸರ್ಕಾರದಲ್ಲಿ ಕೋಮುವಾದಿ ಶಕ್ತಿಗಳು ಇರುವುದನ್ನು ವಿರೋಧಿಸುವುದಾಗಿ ಅಂದಿನ ರಾಷ್ಟ್ರಪತಿಗಳಾದ ಶಂಕರ್ ದಯಾಳ್ ಶರ್ಮರವರಿಗೆ ತಿಳಿಸಿದ್ದರು ಸಹಾ ಅವರು ಬಿಜೆಪಿಯನ್ನು ಸರ್ಕಾರ ರಚಿಸಲು ಆಹ್ವಾನಿಸಿದಾಗ ಅವರನ್ನು ಬಿಜೆಪಿಯು ಅಭಿನಂದಿಸಿತ್ತು. ಚುನಾಯಿತ ಸದಸ್ಯರ ಬಹುಮತ ಹೊಂದಿದ್ದ ಎಚ್.ಡಿ.ದೇವೇಗೌಡರನ್ನು ಸಂಯುಕ್ತ ರಂಗವು ತನ್ನ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡ ನಂತರ ಅಂದಿನ ರಾಷ್ಟ್ರಪತಿಗಳ ಈ ನಿರ್ಣಯ ಬಂದಿತ್ತು. 13 ದಿನಗಳ ಒಳಗಾಗಿ ಅಂದಿನ ರಾಷ್ಟ್ರಪತಿಗಳ ತಪ್ಪು ಅಂದಾಜನ್ನು ಲೋಕಸಭೆಯಲ್ಲಿ ಸರಿಪಡಿಸಲಾಗಿತ್ತು ಹಾಗೂ ಬಹುಮತ ಹೊಂದಿದ್ದ ಸಂಯುಕ್ತ ರಂಗವನ್ನು ಅಧಿಕಾರಕ್ಕೆ ತರಲಾಗಿತ್ತು.

ಸಂವಿಧಾನಿಕ ಪ್ರಾಧಿಕಾರಿಗಳು ಮತ್ತು ಸಂಸ್ಥೆಗಳು ಯಾವುದೇ ನಿರ್ದಿಷ್ಟ ಪಕ್ಷದ ಹಿತಾಸಕ್ತಿಗಳಿಗಿಂತ ಮೇಲಿರುವಂತಹವು ಎಂಬುದನ್ನು ಮೂಲದಲ್ಲಿಯೇ ಪ್ರಜಾಪ್ರಭುತ್ವ ವಿರೋಧಿಯಾಗಿರುವ ಬಿಜೆಪಿಯು ಒಪ್ಪಲು ನಿರಾಕರಿಸುತ್ತದೆ. ನಿರ್ದಾಕ್ಷಿಣ್ಯವಾಗಿ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಸಂವಿಧಾನವನ್ನು ಎತ್ತಿಹಿಡಿಯುವ ಮತ್ತು ಪ್ರಜಾಸತ್ತಾತ್ಮಕ ಸಂರಕ್ಷಣೆಯನ್ನು ಬಲಗೊಳಿಸುವುದು ರಾಜಕೀಯ ಪಕ್ಷದ ಏಕಮಾತ್ರ ಉದ್ದೇಶವಾಗಿರಬೇಕು. ತಮಗೆ ಅನುಕೂಲವಾದಾಗ ಯಾವುದೇ ಸಂಸ್ಥೆಯನ್ನು ಅಥವಾ ಪ್ರಾಧಿಕಾರವನ್ನು ಹೊಗಳುವುದು ಇಲ್ಲವಾದಲ್ಲಿ ತೆಗಳುವುದು ಒಳಿತಲ್ಲ. ಸಂಸದೀಯ ಪ್ರಜಾಪ್ರಭುತ್ವಕ್ಕೆ ಬದ್ಧವಾಗಿರುವ ಎಲ್ಲಾ ಪಕ್ಷಗಳಿಗೆ ಈ ನಿಯಮ ಅನ್ವಯಿಸುತ್ತದೆ. ಆದರೆ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಬಲಗೊಳಿಸುವ ಬದ್ಧತೆ ಹೊಂದಿಲ್ಲದ ಬಿಜೆಪಿಗೆ ಮಾತ್ರ ಇದು ಅನ್ವಯಿಸದು. ಸರ್ಕಾರದ ಅಧಿಕಾರದಿಂದ ಅವರು ದೂರವಿದ್ದಷ್ಟು ಭಾರತದ ಗಣರಾಜ್ಯಕ್ಕೆ ಒಳಿತು.

ಕರಾವಳಿಯ ತೀರದುದ್ದಕ್ಕೂ ಬಜರಂಗದಳ, ಹಿಂದೂ ಯುವ ಸೇನೆ, ಹಿಂದೂ ಜಾಗರಣಾ ವೇದಿಕೆ ಎಂಬಂತಹ ಹಲವು ಹೆಸರಿನ ಮುಖವಾಡದಲ್ಲಿ ಸಂಘ ಪರಿವಾರದ ದೌರ್ಜನ್ಯ ಹಾಗೂ ಕ್ರಿಮಿನಲ್ ಕೃತ್ಯಗಳಿಗೆ ಎಣೆಯೇ ಇಲ್ಲ. ದಿನನಿತ್ಯವೂ ಒಂದಿಲ್ಲೊಂದು ನೆಪದಲ್ಲಿ ದಾಂಧಲೆ ಎಬ್ಬಿಸುವ ಈ ಪರಿವಾರ ಕಳೆದ ವಾರ ಆದಿ ಉಡುಪಿಯಲ್ಲಿ ನಡೆಸಿದ ಅಮಾನವೀಯ ದೌರ್ಜನ್ಯವು ಸಂವಿಧಾನ, ಕಾನೂನನ್ನು ಗೌರವಿಸದ, ಕಾನೂನನ್ನೇ ಕೈಗೆತ್ತಿಕೊಳ್ಳುವ ಫ್ಯಾಸಿಸ್ಟರ ಪ್ರೋಗ್ರಾಂ ಮಾದರಿಯದು. ಬರ್ಬರ ಸಂಸ್ಕೃತಿಯ ಆರಾಧಕರ ಕೃತ್ಯಗಳ ವಿವರ ವರದಿ ಅಲ್ಲಿಗೆ ಭೇಟಿ ನೀಡಿದ ಎಸ್.ವೈ.ಗುರುಶಾಂತ್‌ರಿಂದ



ಉಡುಪಿಯಲ್ಲಿ ಫ


ಕರಾವಳಿ ತೀರದುದ್ದಕ್ಕೂ ಬಜರಂಗದಳ-ಹಿಂದೂ ಯುವ ಸೇನೆಯಂತಹ ಸಂಘ ಪರಿವಾರದ ವಿಧ್ವಂಸಕ ಪಡೆ ನಿತ್ಯವೂ ಒಂದಿಲ್ಲೊಂದು ಅನಾಹುತವನ್ನು ಮಾಡುತ್ತಲೇ ಇದೆ. ವೃತ್ತಿನಿರತ ಕ್ರಿಮಿನಲ್‌ಗಳೇ ಪ್ರಧಾನವಾಗಿರುವ ಈ ಸಂಘಟನೆ, ಅದರ ನಾಯಕರ ಎಲ್ಲಾ ಕುಕೃತ್ಯಗಳಿಗೂ ಮುಖವಾಡ ಇಟ್ಟುಕೊಂಡಿರುವುದು ಹಿಂದೂ ಧರ್ಮದ, ಸಂಸ್ಕೃತಿಯ ರಕ್ಷಣೆ ಎಂಬುದು. ಗೋರಕ್ಷಣೆಯ ಗುತ್ತಿಗೆಯನ್ನು ಈ ಪರಿವಾರ ತಾನೇ ತೆಗೆದುಕೊಂಡುಬಿಟ್ಟಿದೆ. ಈ ಪಡೆ ಹೇಳಿಬಿಟ್ಟರೆ ಆಯಿತು, ಮಾಮೂಲಿ ವಸೂಲಿಯಿಂದ ಹಿಡಿದು, ಶಿಕ್ಷೆಕೊಡುವ ಪೊಲೀಸ್ ಠಾಣೆ, ನ್ಯಾಯಾಲಯವೂ ಇವರೇ ಆಗಿಬಿಡುತ್ತಾರೆ. ಸಿಕ್ಕವರನ್ನು ಬಡಿಯುವ, ಯುವಕ-ಯುವತಿಯರಿಗೆ ನೀತಿ ಸಂಹಿತೆ ಹೇರುವ, ಅನೇಕ ಘಟನೆಗಳು ಈ ಪ್ರದೇಶದಲ್ಲಿ ಜನರನ್ನು ತಲ್ಲಣಕ್ಕೆ ಈಡು ಮಾಡಿವೆ, ಆತಂಕ ಸೃಷ್ಟಿಸಿವೆ.

ಈ ಖಾವೀ ಪಡೆಯ ಪುಂಡಾಟಿಕೆ, ಗೂಂಡಾಗಿರಿ ಎಂತಹ ಅಮಾನವೀಯತೆಯ ಬರ್ಬರ ದೌರ್ಜನ್ಯದ ಅನಾಗರೀಕತೆಯ ಮಟ್ಟವನ್ನು ಮುಟ್ಟಬಹುದು ಎಂಬುದಕ್ಕೆ ಇದೇ ಕಳೆದ ಭಾನುವಾರ13 ರಂದು ಉಡುಪಿಯ ಜಿಲ್ಲೆಯ ಆದಿ ಉಡುಪಿಯಲ್ಲಿ ಕ್ರಿಮಿನಲ್‌ಗಳು ನಡೆಸಿದ ಕೃತ್ಯವೇ ಸಾಕ್ಷಿ. ಆಕಳು ಕರುವನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂದು ನೆವ ಹೇಳಿ ದನಗಳ ವ್ಯಾಪಾರಿ ಹಾಜಬ್ಬನನ್ನು ಕೂಡಿ ಹಾಕಿದ್ದಾರೆ, ಬಡಿದಿದ್ದಾರೆ. ತಂದೆ ಇನ್ನೇಕೋ ಬರಲಿಲ್ಲವಲ್ಲ ಎಂದು ಹುಡುಕಿಹೊರಟ ಮಗ ಹಸನಬ್ಬ(25)ನನ್ನು ಎಳೆದಾಡಿದ ಪುಂಡರ ಪಡೆ ಕರುವನ್ನು ಕಾರಿನೊಳಗೆ ತುರುಕಿ, ಹೆಲಿಪ್ಯಾಡ್ ಮೈದಾನಕ್ಕೆ ಕರೆದೊಯ್ದು ಬಟ್ಟೆ ಬಿಚ್ಚಿಸಿ ಬೆತ್ತಲೆ ಮಾಡಿ ಮನಬಂದಂತೆ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ತಲೆ, ಬಾಯಿ, ಕಣ್ಣು, ಇಡೀ ಬೆನ್ನು ಕಾಲುಗಳ ಮೇಲಿರುವ ಗಾಯಗಳು ನಡೆದ ಹಲ್ಲೆಯ ಗಂಭೀರ ಸ್ವರೂಪವನ್ನು ಹೇಳುತ್ತವೆ.

'ಬೆತ್ತಲೆ ಮಾಡಿ ನನ್ನನ್ನು ಓಡು ಎಂದರು, ಓಡದಿದ್ದಾಗ ಕಾಲಿನಿಂದ ಒದ್ದರು. ಬಿದ್ದಾಗ ಕಟ್ಟಿಗೆ, ಬೆಲ್ಟ್‌ಗಳಿಂದ ಬಡಿದರು. ಕೈಗಳಿಂದ ಗುದ್ದಿದರು. ಮೋಟಾರು ಬೈಕ್ ಓಡಿಸುತ್ತಾ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ ಸಾರ್.... ' ಎಂದು ತೊದಲಿ ತೊದಲಿ ಹೇಳುತ್ತಿದ್ದ ಯುವಕ ಹಸನಬ್ಬ ಘಟನೆ ಮನಸ್ಸಿನಲ್ಲಿ ಮೂಡತ್ತಿದ್ದಂತೆ ಭಾವೋದ್ರೇಕಕ್ಕೆ ಒಳಗಾದ.

ಉಡುಪಿಯ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿ 'ಶುಶ್ರೂಷೆ' ಪಡೆಯುತ್ತಿರುವ ತಂದೆ-ಮಗನನ್ನು ಮಾತನಾಡಿಸಲು ನಮ್ಮ ನಿಯೋಗ ಹೋದಾಗ ಹಸನಬ್ಬನ ತಾಯಿ ದುಃಖ ತಡೆಯಲಾರದೆ ಕಣ್ಣೀರಿಡುತ್ತಾ 'ನನ್ನ ಗಂಡ-ಮಗ ಮಾಡಿದ್ದಾದರೂ ಏನು ಸ್ವಾಮಿ? ಹೊಟ್ಟೆಪಾಡಿಗೆ ಅನೇಕ ವರುಷಗಳಿಂದ ದನದ ವ್ಯಾಪಾರ ಮಾಡುತ್ತಾ ಬಂದವರು ನಾವು. ದನಗಳನ್ನು ನಮಗೆ ಯಾರು ಕೊಡುತ್ತಾರೆ... ಇದೇ ಹಿಂದುಗಳಲ್ಲವೇ?.. ನಮ್ಮ ಮನೆಯವರನ್ನು ನಂಬಿಸಿ ಮೋಸ ಮಾಡಿಸಿದ್ದಾರೆ...."

ಹೌದು! ಹಸನಬ್ಬ ಅನೇಕ ದಶಕಗಳಿಂದಲೂ ದನದ ವ್ಯಾಪಾರ ಮಾಡಿಕೊಂಡಿದ್ದಾತ. ಹಳೆ ದನಗಳಿಗೆ ಹೊಸ ದನ ಕೊಡುವುದು, ಎಳೆ ಕರುಗಳನ್ನು ಖರೀದಿಸಿ, ಅಗತ್ಯವಿರುವವರಿಗೆ ಮಾರುವುದು.... ಸತತವಾಗಿ ನಡೆದುಬಂದ ಕಸುಬು. 60 ವರುಷವಾಗಿರುವ ಹಾಜಬ್ಬ ಹೇಳುತ್ತಾರೆ " ಈ ಕರುವನ್ನು ಮಾರಿದಾತನೇ



ಕಾಂತು ಪೂಜಾರಿ. ಕಾಂತು ಪೂಜಾರಿಗೆ ನಾನ್ಯಾರು ಎಂದು ಗೊತ್ತಿಲ್ಲವೇ? ಎಷ್ಟು ವರುಷಗಳ ವ್ಯಾಪಾರ ಸಂಬಂಧ".

ಯಾರೀ ಕಾಂತು ಪೂಜಾರಿ? ಈ ಕಾಂತು ಪೂಜಾರಿಯೂ ಹಸು-ಕರು ಎತ್ತುಗಳನ್ನು ಖರೀದಿಸುವ, ಮಾರುವ ವ್ಯಾಪಾರಿ. ಅಂದು ಆದಿತ್ಯವಾರ ಸಂಜೆ ಮೂಡಬೆಟ್ಟಿನ ದನದ ದಲ್ಲಾಳಿ ಕಾಂತುಪೂಜಾರಿ ಕರೆದದ್ದರಿಂದ ಅವರ ಮನೆಗೆ ವ್ಯಾಪಾರ ನಿಮಿತ್ತ ಹಾಜಬ್ಬ ಹೋಗಿದ್ದಾರೆ. ವ್ಯಾಪಾರ ಕುದುರಿ ರೂ. 50 ನ್ನು ಅಡ್ವಾನ್ಸ್ ಹಣವಾಗಿ ನೀಡಿದ್ದಾರೆ. ಪೂರ್ವಯೋಜನೆಯಂತೆ ಕಾಂತು ಪೂಜಾರಿಯ ಮನೆಯೊಳಗೆ ಅಡಗಿ ಕುಳಿತಿದ್ದ ಹಿಂದೂ ಯುವ ಸೇನೆಯ ಕಾರ್ಯಕರ್ತರು ಹಾಜಬ್ಬನ ಮೇಲೆ ಎರಗಿದ್ದಾರೆ. ಥಳಿಸಿದ್ದಾರೆ. ಸ್ವಲ್ಪ ಸಮಯದ ಬಳಿಕ ಕಾರಿನಲ್ಲಿಬಂದ ಹಸನಬ್ಬನನ್ನು ಹೊರಗೆಳೆದು ಕರುವನ್ನು ಕಾರಿನಲ್ಲಿ ತುರುಕಿ ಮೈದಾನದಲ್ಲಿ ಫ್ಯಾಸಿಸ್ಟರ 'ಪ್ರೋಗ್ರಾಂ' ಜಾರಿಗೊಳಿಸತೊಡಗಿದ್ದಾರೆ. ಇದು ಖಂಡಿತ ಹಿಟ್ಲರ್ ಪಡೆಯ- ಫ್ಯಾಸಿಸ್ಟರ 'ಪ್ರೋಗ್ರಾಂ' ಮಾದರಿಯದ್ದೇ ಆಗಿದೆ.

'ನೋಡಿ ಮೈಮೇಲೆ ಹೇಗೆಲ್ಲಾ ನನ್ನ ಮಗನನ್ನು ಹೊಡೆದಿದ್ದಾರೆ' ಎಂದರು ಶೋಕತಪ್ತ ತಾಯಿ. ಮೈತುಂಬಾ ಗಾಯ. ಚರ್ಮ ಕಿತ್ತು ಬಂದ ರಕ್ತ ಒಸರುವ ಗಾಯಗಳು... ಜನರ ಎದುರು ಹೀಗೆಲ್ಲಾ ಹೊಡೆದು ಕೇಕೆ ಹಾಕಿದ್ದು ಎಂತಹ ವಿಕೃತ ರೋಗಿಷ್ಟ ಮನಸ್ಸಿನ ಪ್ರತೀಕ! ಹೊಡೆದಾದ ಮೇಲೆ ನೀರು ಕೇಳಿದರೆ ಮೂತ್ರ ಕೊಡಲು ಬರುತ್ತಾರೆಂದರೆ... ಇಂತಹ ವಿಕೃತಗಳನ್ನು ಮಾಡಲು, ನೋಡಲು ಅದನ್ನು ಜನರೆದುರು ಪ್ರದರ್ಶಿಸಿ 'ನೋಡಿ ತಕ್ಕ ಶಾಸ್ತಿ ಮಾಡಿದ್ದೇವೆ' ಎಂದು ವಿಜೃಂಬಿಸುವುದು ಕೇವಲ ಮನುಷ್ಯತ್ವ ಕಳೆದುಕೊಂಡ ಫ್ಯಾಸಿಸ್ಟರಿಗೆ ಮಾತ್ರ ಸಾಧ್ಯ. ಅದಕ್ಕೆಂದೇ ಫೋಟೋ ತೆಗೆಸಿದ್ದಲ್ಲದೇ, ವಿಡಿಯೋ ರೆಕಾರ್ಡಿಂಗ್ ಮಾಡಿದ್ದಾರೆ ಎಂದರೆ....? ಎಲ್ಲರಲ್ಲೂ ತಾವೆಷ್ಟು ಭಯಂಕರರು ಎಂದು ಭಯ ಉತ್ಪಾದಿಸಲು ಮೊದಲೇ ನಿರ್ಧರಿಸಿಬಿಟ್ಟಿದ್ದಾರೆ ಎಂದಲ್ಲವೇ?

ಹೀಗೆ ಹೊಡೆದು ಹಸನಬ್ಬನನ್ನು ಬಿಸಾಕಿ ಹೋಗಿದ್ದಾರೆ. ಪರಿಚಿತರು ಹಾಜಬ್ಬನನ್ನು ಪೊಲೀಸ್ ಠಾಣೆಗೆ ಕರೆದು ತಂದಿದ್ದಾರೆ. ಪೊಲೀಸರ ಮುಂದೆ ಘಟನೆ ಹೇಳಿ - ದುಃಖ ಹಂಚಿಕೊಂಡರೆ ನ್ಯಾಯ ಸಿಗುತ್ತದೆ, ರಕ್ಷಣೆ ಸಿಗುತ್ತದೆ ಎಂದರೆ.... ಸಿಕ್ಕಿದ್ದು ಉಲ್ಟಾ. ಹಾಜಬ್ಬನ ಮೇಲೆ ಪೊಲೀಸ್ ಕೇಸ್. ದನದ ಅಕ್ರಮ ಸಾಗಾಣಿಕೆ ಮಾಡಿದ್ದೀಯಾ, ಗೋ ರಕ್ಷಣಾ ಕಾನೂನು ಉಲ್ಲಂಘಿಸಿದ್ದೀಯಾ!'. ಎಂತಹ ವಿಪರ್ಯಾಸ, ಘಟನೆಯ ಹಿಂದೆ ಮುಂದೆ ವಿಚಾರಿಸದೆ, ಏಟು ತಿಂದದ್ದನ್ನಾದರೂ ನೋಡದೆ ಬಜರಂಗದಳದ ಪುಂಡರ ಪಡೆಯ ಒಂದು ತುಕಡಿಯಂತೆ, ಕಾದು ಕುಳಿತವರಂತೆ ಕೇಸ್ ಹಾಕುತ್ತಾರೆಂದರೆ? ಹೋಗಲಿ ಘಟನೆ ನಡೆದಲ್ಲಿಗೆ ಕೂಡಲೇ ತೆರಳಿ ಆಗಬಹುದಾದ ಅನಾಹುತ ತಪ್ಪಿಸಲು, ಹಸನಬ್ಬನನ್ನು ಹುಡುಕಲು ಪೊಲೀಸರು

ಎಲ್ಲಿದೆ ನೀತಿ ನಿಯತ್ತು! ಎರಡೆಳೆ ನಾಲಿಗೆ ಇರದು ಸುಮ್ಮನೆ

ಸಂಘ ಪರಿವಾರದ ಪುಂಡರ ಪಡೆಯ ಈ ಅಮಾನವೀಯ ಕೃತ್ಯಕ್ಕೆ ವ್ಯಾಪಕವಾದ ಖಂಡನೆ ಎಲ್ಲೆಡೆ ಕಂಡುಬರುತ್ತಿದೆ. ಹಿಂದೂ ಧರ್ಮದ ಉದ್ಧಾರಕರಂತೆ ಪೋಜು ನೀಡುತ್ತಿದ್ದ ಇವರ ಮಾತುಗಳಿಗೆ ಆಗಾಗ ತಲೆತೂಗುತ್ತಿದ್ದವರು ಕೆಲವರು ಸಹ ಈ ಘಟನೆಯಿಂದ ನೊಂದಿದ್ದಾರೆ, ದೂರ ಸರಿಯುತ್ತಿದ್ದಾರೆ. ಸಂಘ ಪರಿವಾರವೂ ಬಹಿರಂಗ ವಾಗಿ ಸಮರ್ಥಿಸಿಕೊಳ್ಳಲು ಹಿಂದುಮುಂದು ನೋಡುತ್ತಿದೆ. ಬಜರಂಗದಳ - ಹಿಂದೂ ಯುವ ಸೇನೆಗಳನ್ನು ಸಾಕಿ ಸಲಹುವ ಉಡುಪಿಯ ಪೇಜಾವರರು ಮೆತ್ತಗೆ ಎಂದಿನಂತೆ ಹೀಗೆ ಆಗಬಾರದಿತ್ತು, ಸರಿಯಲ್ಲ... ಎಂದು ಉಸುರಿದ್ದಾರೆ. ಒಡನೆಯೇ ಗೋಮಾತೆ ರಕ್ಷಣೆಗೆ ಪೊಲೀಸರು ಕಾನೂನು ಕ್ರಮ ಕೈಗೊಳ್ಳದಿರುವುದೇ ಇದಕ್ಕೆ ಕಾರಣ ಎಂದಿದ್ದಾರೆ. ಅಂದು ಇಂದು ಸುತ್ತಿಬಳಸಿದರೂ ಅದೇ ಮಾತು. ಪೊಲೀಸರು ಕಾನೂನು ಜಾರಿ ಮಾಡದಿರುವುದರಿಂದ ಯುವ ಸೇನೆ ಜಾರಿ ಮಾಡುತ್ತಿದೆ ಎಂಬ ನಯವಾದ ಸಮರ್ಥನೆ! ಇದೇ ವಟುವೇ ಬಾಬ್ರಿ ಮಸೀದಿ ಧ್ವಂಸ 'ಆಗಬಾರದಿತ್ತು ಎನ್ನುತ್ತಲೇ ಸಿಡಿದ ಹಿಂದೂಗಳ ಆಕ್ರೋಶ' ಎಂದು ಲಾಗ ಹೊಡೆದು ಸಂಘ ಪರಿವಾರದ ನಾಗಪುರ ಹೆಡ್‌ಆಫೀಸ್‌ಗೆ ಪಾಠ ಒಪ್ಪಿಸಿದ್ದು ಗೊತ್ತಿದ್ದೇ ಇದೆ.

ಹಾಗೆ ಬಜರಂಗದಳವೂ ಘಟನೆ ಖಂಡಿಸಿ ಬಿಟ್ಟಿದೆ. ಹೇಗಿದೆ? ಎರಡೆಳೆ ನಾಲಿಗೆಯ ವೈಖರಿ?

ಅವರೇ ಇವರು!

ಈ ಘಟನೆ ಮುಚ್ಚಿಹೋಗುವುದರಲ್ಲಿತ್ತು. ಹನ್ನೊಂದರಲ್ಲಿ ಇನ್ನೊಂದು ಎಂದು! ಸುದ್ದಿ ತಿಳಿದಿದ್ದೇ ತಡ, ವಿಧಾನಸಭೆಯ ಕಲಾಪಗಳು ನಡೆದಿರುವಾಗಲೇ ಈ ವಿಷಯವನ್ನು ಕೂಡಲೇ ಅಸೆಂಬ್ಲಿಯಲ್ಲಿ ಪ್ರಸ್ತಾವನೆ ಎತ್ತಿ ಚರ್ಚೆಗಿಳಿದವರು ಸಿಪಿಐ(ಎಂ)ನ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಯವರು. ಸಾಥಿಯಾಗಿ ನಿಂತವರು ಶಾಸಕ ಜಯ ಪ್ರಕಾಶ್ ಹೆಗ್ಡೆಯವರು. ಆಗ ಗೃಹಮಂತ್ರಿಗಳೂ ಆಗಿರುವ ಮುಖ್ಯಮಂತ್ರಿಗಳು ದಡಬಡಾಯಿಸಿ ಎಸ್.ಪಿ.ಗೆ ಸಂಪರ್ಕಿಸಿದರೆ ಅಂತಹದ್ದು ನಡೆದದ್ದೇ ಗೊತ್ತಿಲ್ಲ ಎನ್ನಬೇಕೆ? ಭಲೇ ಮುರುಗನೇ! ಚರ್ಚೆ ಒತ್ತಾಯದ ನಂತರ ತನಿಖೆ-ಕ್ರಮದ ಭರವಸೆಯನ್ನೇನೋ ಮುಖ್ಯಮಂತ್ರಿಗಳು ನೀಡಿದ್ದಾರೆ. ಮಂಗಳೂರಿನಲ್ಲಿ ಭಾರಿ ಪ್ರತಿಭಟನೆ ನಡೆದು ಐಜಿಪಿಗೆ ಮನವಿ ಸಲ್ಲಿಸಲಾಗಿದೆ. ಕ್ರಮದ ಆಶ್ವಾಸನೆಯೇನೋ ಇದೆ. 'ಬಾಗೆಪಲ್ಲಿ ಶಾಸಕರು ಈ ಪ್ರಶ್ನೆ ಎತ್ತಬಹುದಾದರೆ ನಮ್ಮ ಶಾಸಕರಿಗೆ ಏನಾಗಿದೆ?' ಎಂದು ಪ್ರಶ್ನಿಸುತ್ತಾರೆ ಅಲ್ಲಿನ ಜನ. ಏನಾಗಿದೆ ಎಂದು ಹೇಳಬೇಕಿಲ್ಲ. ಅವರೇ ಇವರಲ್ಲವೇ?

ನಿತ್ಯ ದೌರ್ಜನ್ಯಗಳ ಸರಮಾಲೆ

ಬಜರಂಗದಳ, ಹಿಂದೂ ಯುವ ಸೇನೆಯ ಹಾವಳಿಗೆ ಮಿತಿಯೇ ಇಲ್ಲ. ಗೋರಕ್ಷಣೆ ನೆಪದ ರೋಲ್‌ಕಾಲ್ ಒಂದು ವಿಧವಾದರೆ, ಇತ್ತೀಚಿನ ದಿನಗಳಲ್ಲಿ ಪ್ರಾಣ, ಮಾನ ಕಳೆದುಕೊಂಡ ಅಮಾಯಕ ಯುವಕ-ಯುವತಿಯರ ಸಂಖ್ಯೆ ಲೆಕ್ಕಕ್ಕಿಲ್ಲ.

ಹೆಜಮಾಡಿಯ ವನಿತಾ ಅಲ್ಪಸಂಖ್ಯಾತರ ಯುವಕನೊಂದಿಗೆ ಮಾತನಾಡಿದಳೆಂದು, ಅವಳಿಗೆ ತನ್ನ ಆಫೀಸಿನಲ್ಲಿ ಆತ ಕೆಲಸ ನೀಡಿದವನೆಂದು ಸಾರ್ವಜನಿಕವಾಗಿ ಸೇನೆ ಪುಂಡರು ಅವಮಾನಿಸಿದಾಗ, ತಾಳದೇ ಆತ್ಮಹತ್ಯೆಗೀಡಾದಳು.

• • •

ಈ ನಾಲ್ಕಾರು ದಿನಗಳ ಹಿಂದೆಯೇ ಬೆಳ್ತಂಗಡಿಯ ನಿಡ್ಲೆಯಲ್ಲಿ 16 ವಯಸ್ಸಿನ ದಲಿತ ಯುವತಿಯ ಮೇಲೆ ನಾಲ್ಕು ಜನ ಬಜರಂಗದಳದ ನಾಯಕ-ಕಾರ್ಯಕರ್ತರು ಅತ್ಯಾಚಾರವೆಸಗಿದರು. ಧೈರ್ಯ ಮಾಡಿ ದೂರು ನೀಡಿದ ಬಳಿಕ ತಪಾಸಣೆ ನಡೆದಾಗ ಅತ್ಯಾಚಾರ, ದೌರ್ಜನ್ಯ ಎಸಗಿದ್ದು ಖಾತ್ರಿಯಾಗಿದೆ. ವೈದ್ಯಕೀಯ ತಪಾಸಣೆಯಲ್ಲಿ ದಾಖಲಾಗಿದೆ.

ಕಳೆದ 15 ದಿನಗಳ ಹಿಂದೆ ವ್ಯಾನ್‌ನಲ್ಲಿ ಹೊರಟಿದ್ದ ಮುಸ್ಲಿಂ ಯುವಕರ ವಾಹನ ತಡೆದು ದನ ವ್ಯಾಪಾರ ಮಾಡುತ್ತೀರೆಂದು ಹಲ್ಲೆ ಮಾಡಿ ಕೈ ಕಡಿದಿದ್ದಾರೆ. ಇಂತಹವುಗಳು ನೂರಾರು. ದಲಿತರು, ಹಿಂದುಗಳಲ್ಲವೇ? ಮುಸ್ಲಿಂರು ಮನುಷ್ಯರಲ್ಲವೇ?



ವಿಚಿತ್ರವೆಂದರೆ ಜಿಲ್ಲೆಯ ಜನ-ಆಸ್ತಿ,

ಸ್ಟರ 'ಪ್ರೋಗ್ರಾಂ'

ಂತಿ-ಕಾನೂನು ಸಂರಕ್ಷಣೆಯ ಹೊಣೆ ಾತ್ತಿರುವ ಒಬ್ಬ ಜಿಲ್ಲಾ ವರಿಷ್ಠಾಧಿಕಾರಿ ುರುಗನ್‌ರವರಿಗೆ ವಿಷಯ ತಿಳಿದಿದ್ದು ದೆಗಳಿಂದಲ್ಲ, ಮುಖ್ಯಮಂತ್ರಿಗಳಿಂದ!. ಅಂದರೆ ತಹ ಬೇಜವಾಬ್ದಾರಿತನ ಅಥವಾ ಮೀಲ್ರುತನ. ಕರಾವಳಿ ತೀರದುದ್ದಕ್ಕೂ ಪೊಲೀಸ್ ಣೆಗಳಲ್ಲಿ ಬಹಳಷ್ಟು ಠಾಣೆಗಳು ಭಜರಂಗದಳ ರ್‌ಎಸ್‌ಎಸ್‌ಗಳ ಕಚೇರಿಗಳಂತೆ ಆಗಿಬಿಟ್ಟಿವೆ. ್ಲಿನ ರಾಜಕಾರಣದಲ್ಲಿ, ಸಮಾಜದಲ್ಲಿ ಮೇಲುಗೈ ಧಿಸುತ್ತಿರುವ ಬಿಜೆಪಿ-ಆರ್‌ಎಸ್‌ಎಸ್ ನ ಾವಕ್ಕೆ ಸಿಲುಕಿಬಿಟ್ಟಿವೆ. ಖಾಕಿ ಒಳಗೆ ಖಾವಿ ಕೆ ಚಿಡ್ಡಿಗಳು!

ಈ ಪ್ರಕರಣ ಅಸೆಂಬ್ಲಿಯಲ್ಲಿ ಪ್ರಸ್ತಾಪಿಸಲ್ಪಟ್ಟು ುಖ್ಯಮಂತ್ರಿಗಳು ಹೇಳಿಕೆ ನೀಡಿದ ಬಳಿಕ ಆಡಳಿತ ್ಪ ಚುರುಕುಗೊಂಡಿದೆ, ಕೇಸ್ ದಾಖಲಾಗಿದೆ. ದಿಬ್ಬರನ್ನು ಹಿಡಿದಿದ್ದಾರೆ. ಇನ್ನೂ ಹಲವರನ್ನು ತಿಯಬೇಕಿದೆ. ಪೊಲೀಸ್ ಇಲಾಖೆಯ ವೈಫಲ್ಯ ್ನಗೆ ರಾಚುತ್ತಿರುವುದರಿಂದ ಸರ್ಕಲ್, ಸಬ್ ್ಸ್‌ಪೆಕ್ಟರ್‌ನ್ನು ಸಸ್ಪೆಂಡ್ ಮಾಡಿದ್ದಾರೆ. ಗಬೇಕಾದವರು ಆಗಿಲ್ಲ ಎಂಬ ಪುಕಾರು ಇದೆ) ್ಲರೂ ಆರೋಪಿಗಳನ್ನು ಹುಡುಕುತ್ತಿದ್ದಾರೆ!

ಈ ಪ್ರಕರಣ ಖಂಡಿಸಿ ಪ್ರತಿಭಟಿಸಿದ್ದು ಐ(ಎಂ), ನಂತರ ಪ್ರಗತಿಪರರ ತಂಡ, ಆ ಿಕವೇ ಕೇಸ್‌ಗೆ ಚಾಲನೆ ಬಂದಿದೆ. ಇಡೀ ಗರಿಕರು ಇಂತಹ ಅವಮಾನವೀಯ ಕರಣವನ್ನು ಖಂಡಿಸುತ್ತಿರುವಾಗ, ತಲೆ ್ಗಿಸಬೇಕಾದ ಸ್ಥಿತಿ ನಿರ್ಮಾಣವಾಗಿರುವಾಗ ಂದೂ ಯುವಸೇನೆ, ಸಂಘ ಪರಿವಾರ ಕಿಂಚಿತ್ತೂ ಚಲಿತವಾಗಿಲ್ಲ. ತಮ್ಮ ಕುಕೃತ್ಯವನ್ನು ಮರ್ಥಿಸಿಕೊಳ್ಳಲು ಮೆರವಣಿಗೆ, ಸಭೆ ಡೆಸಿದ್ದಾರೆ. ಜನಾಂಗ ದ್ವೇಷದ ದಳ್ಳುರಿ ಹಬ್ಬಿಸಲು ವಣಿಸುವ ಈ ಶಕ್ತಿಗಳಿಗೆ ಜನ ತಕ್ಕ ಪಾಠ ಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕರಾವಳಿ ಉದ್ದಕ್ಕೂ ತಿಭಟನೆಯ ಅಲೆ ಎದ್ದಿದೆ. ಈ ದುಷ್ಕರ ಟ್ಟಹಾಸಕ್ಕೆ ಶಿಷ್ಟರು ಮೌನವಾಗಿರಬಾರದು.

ಮನುಷ್ಯತ್ವದಲ್ಲಿ ನಂಬಿಕೆ ಇರುವ ಪ್ರತಿಯೊಬ್ಬರೂ ಪ್ರತಿಭಟಿಸಬೇಕಾದುದು ಅನಿವಾರ್ಯ

– ಎಸ್.ವೈ.ಗುರುಶಾಂತ್

ವಾಹನದಲ್ಲಿ ದನ ಸಾಗಿಸುತ್ತಿದ್ದಾರೆಂಬ ಆರೋಪ ಹೊರಿಸಿ ವಯೋವೃದ್ಧ 60 ವರ್ಷ ಪ್ರಾಯದ ಹಾಜಬ್ಬ ಮತ್ತು ಅವರ ಮಗ ಹಸನಬ್ಬರನ್ನು ಸಂಪೂರ್ಣವಾಗಿ ನಗ್ನಗೊಳಿಸಿ, ಮರಣಾಂತಿಕ ಹಲ್ಲೆ ನಡೆಸಿ, ನಗದು ಲಪಟಾಯಿಸಿರುವ ಕೃತ್ಯವನ್ನು ಮನುಷ್ಯತ್ವದಲ್ಲಿ ನಂಬಿಕೆ ಇರುವ ಪ್ರತಿಯೊಬ್ಬರೂ ಪ್ರತಿಭಟಿಸಬೇಕಾದುದು ಅನಿವಾರ್ಯ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್‌ರವರು ಹೇಳಿದರು. ಅವರು ಮಂಗಳೂರಿನಲ್ಲಿ 40 ಸಂಘಟನೆಗಳು ಆಯೋಜಿಸಿದ್ದ ಬೃಹತ್ ಪ್ರತಿಭಟನೆ(ಡಿಐಜಿ ಕಚೇರಿ ಮುತ್ತಿಗೆ) ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಇಡೀ ರಾಜ್ಯದ ಜನತೆ ತಲೆತಗ್ಗಿಸಬೇಕಾದ ಅತ್ಯಂತ ಅಮಾನವೀಯ ಘಟನೆಗೆ ಕಾರಣರಾದ ಭಜರಂಗದಳ, ಹಿಂದೂ ಯುವ ಸೇನೆಯನ್ನು ಮಟ್ಟಹಾಕಬೇಕಾದುದು ಅನಿವಾರ್ಯವಾಗಿದೆ. ವಿರೋಧ ಪಕ್ಷವಾದ ಬಿಜೆಪಿಯ ನಾಯಕ ಯಡಿಯೂರಪ್ಪನವರು ರಾಜ್ಯದಲ್ಲಿ ಕಾನೂನು ಶಿಸ್ತು ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳುತ್ತಿದ್ದಾರೆ. ಆದರೆ ಇದನ್ನು ಹದಗೆಡಿಸುತ್ತಿರುವವರು ಯಾರು? ಎಂದು ಪ್ರಶ್ನಿಸಿದ ಅವರು ವಾಸ್ತವವಾಗಿ ಇಂತಹ ಪರಿಸ್ಥಿತಿಗೆ ಸಂಘ ಪರಿವಾರದ ಸಂಘಟನೆಗಳೇ ಕಾರಣವೆಂದು ಹೇಳಿದರು. ಕರಾವಳಿ ಜಿಲ್ಲೆಯಲ್ಲಿ ಭಯದ ವಾತಾವರಣ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾಬಾಬುಡನ್ ಗಿರಿ ಪ್ರಶ್ನೆಗೆ ಸಂಬಂಧಿಸಿ ಭಯದ ವಾತಾವರಣ, ವಿಜಾಪುರ, ಬಾಗಲಕೋಟೆ, ಬೀದರ್, ಕೋರಮಂಗಲಗಳಲ್ಲಿ ಕಾನೂನನ್ನು ಕೈಗೆತ್ತಿಕೊಂಡು ಅಟ್ಟಹಾಸ ಮೆರೆಯುತ್ತಿರುವ ಈ ಸಮಾಜಬಾಹಿರ ಶಕ್ತಿಗಳೇ ರಾಜ್ಯದ ಶಾಂತಿ ಭಂಜಕರು ಎಂದು ಹೇಳಿದರು. ಸಂಸ್ಕೃತಿಯ ಬಗ್ಗೆ ಸದಾ ವಟಗುಡುವ ಸಂಘ ಪರಿವಾರದ ನಾಯಕರು ಹೆಜಮಾಡಿ ವನಿತಾ ಆತ್ಮಹತ್ಯೆಗೆ ಕಾರಣವಾದ, ಬೆಳ್ತಂಗಡಿಯ ದಲಿತ ಯುವತಿಯ ಮೇಲೆ ಅತ್ಯಾಚಾರ ಮಾಡಿದ ಭಜರಂಗದಳ-ಹಿಂ.ಯು.ಸೇನೆಯ ಕೃತ್ಯಗಳ ಬಗ್ಗೆ ಚಕಾರ ಎತ್ತುತ್ತಿಲ್ಲ. ವೇದ-ಧರ್ಮ ಗ್ರಂಥಗಳಲ್ಲಿ ಅತ್ಯಾಚಾರ, ದೌರ್ಜನ್ಯ, ಕೊಲೆಗಳನ್ನು ಮಾಡಲು ಹೇಳಿವೆಯೇ? ಸುದರ್ಶನರಾಗಲೀ, ಪೇಜಾವರರಾಗಲೀ ಸಂಘ ಪರಿವಾರ ಹೇಳುವ ಸಂಸ್ಕೃತಿಯೇ ಫ್ಯಾಸಿಸ್ಟ್ ಮಾದರಿಯದು ಎಂದು ಖಂಡಿಸಿದರು. ಕರ್ನಾಟಕದ ಸಂಸ್ಕೃತಿ ಜಾತ್ಯತೀತತೆ ಸಂಸ್ಕೃತಿ. ಅದು ಸೌಹಾರ್ದತೆಯ ಸಂಸ್ಕೃತಿ, ಸೌಹಾರ್ದತೆಯ ನಾಡನ್ನು ಗುಜರಾತ್ ಆಗಿ ಮಾಡುವ ಶಕ್ತಿಗಳನ್ನು ಪ್ರತಿಭಟಿಸಲು ಎಲ್ಲರೂ ಒಂದಾಗೋಣ ಎಂದು ಹೇಳಿದರು. ಕೋಮುಗಲಭೆ ಅಥವಾ ಗಲಭೆ ಉದ್ದೇಶಿತ ಹಲ್ಲೆಗಳಾದಾಗ ಪೊಲೀಸರು ನಿಷ್ಠುರ ಕ್ರಮ ವಹಿಸಬೇಕು. ಆದಿ ಉಡುಪಿಯ ಯೋಜಿತ ಘಟನೆಯಲ್ಲಿ ಪೊಲೀಸ್ ಇಲಾಖೆಯ ವೈಫಲ್ಯವಿದೆ. ಇದಕ್ಕೆ ಕಾರಣರಾದವರ ಮೇಲೂ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದ ಅವರು ಖಾಕಿ ಉಟ್ಟಿರುವ ಹಲವಾರು ಪೊಲೀಸ್ ಅಧಿಕಾರಿಗಳು ಬಜರಂಗದಳ- ಯುವಸೇನೆಯ ಕಾರ್ಯಕರ್ತರಂತೆ ವರ್ತಿಸುತ್ತಿದ್ದಾರೆ. ಇದರ ಆಮೂಲಾಗ್ರ ಶೋಧನೆ ನಡೆದು ಸರಿಪಡಿಸಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್ ಪಕ್ಷದ ನಾಯಕರಾದ ಇಬ್ರಾಹಿ ಕೋಡಿಜಾಲ್‌ರವರು ಘಟನೆಯನ್ನು ಖಂಡಿಸುತ್ತಾ ಪೊಲೀಸ್‌ಇಲಾಖೆಗೆ ಗಂಭೀರತೆಯಿಂದ ಕಾನೂನಿನ ಪರವಾಗಿ ದುಡಿಯಬೇಕಾಗಿದೆ, ಆಮೂಲಕ ಜನರಲ್ಲಿ ಕೋಮುವಾದಿಗಳು ನಿರ್ಮಿಸುವ ಭಯದ ಸನ್ನಿವೇಶವನ್ನು ಒದ್ದೋಡಿಸಬೇಕೆಂದು ಹೇಳಿದರು.

ಜಾತ್ಯತೀತ ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಬಿ.ಸದಾಶಿವರವರು ಮಾತನಾಡುತ್ತಾ ಕಡಬ, ಪುತ್ತೂರು, ಬೆಳ್ತಂಗಡಿ, ಹೆಜಮಾಡಿ ಎಲ್ಲಾ ಕಡೆಗಳಲ್ಲಿ ಭಜರಂಗದಳ, ಹಿಂದೂ ಯುವ ಸೇನೆಯ ಕೃತ್ಯಕ್ಕೆ ಕಡಿವಾಣ ಹಾಕಬೇಕು. ಉಡುಪಿ ಎಸ್.ಪಿ. ಮುರುಗನ್‌ರವರನ್ನು ವಜಾ ಮಾಡಲು ಸರ್ಕಾರದ ವಿರುದ್ಧ ಅನಿವಾರ್ಯವಾದರೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳಿದರು.

ಮುಸ್ಲಿಂ ಸೆಂಟ್ರಲ್ ಸಮಿತಿಯ ಪರವಾಗಿ ಹಮೀದ್ ಹಾಜಿ ಕಂದಕರರವರು ಸಂಘ ಪರಿವಾರದ ಕ್ರಿಮಿನಲ್ ಸಮಾಜಬಾಹಿರ ಕೃತ್ಯಗಳನ್ನು ಎಳೆ ಎಳೆಯಾಗಿ ವಿವರಿಸಿದರು.

ದ.ಕ. ಜಿಲ್ಲಾ ಕಾರ್ಮಿಕ ಪರಿಷತ್‌ನ ಐವಾನ್ ಡಿ ಸೋಜಾರವರು ಎಲ್ಲಾ ಮತ ಧರ್ಮಗಳ ಶಾಂತಿ ಪ್ರಿಯ ಜನತೆ ಅನ್ಯಾಯವಾದ ವಿರುದ್ಧ ಪ್ರತಿಭಟಿಸಲು ತಮ್ಮ ಎಲ್ಲಾ ಬೇಧ ಭಾವ ಮರೆತು ಒಂದಾಗಬೇಕು ಎಂದು ಹೇಳಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿಯವರು ಶೇ 73 ಇರುವ ಜಾತ್ಯತೀತ ಮನೋಭಾವದ ಜನ ಒಂದಾಗಬೇಕು , ಕೋಮು ಭಾವನೆ ಕೆರಳಿಸಿ ಹಿಂಸೆ ನಡೆಸುವ ಶಕ್ತಿಗಳು 'ಫ್ಯಾಸಿಸ್ಟ್' ರು ಎಂದು ಹೇಳಿದರು.

ಮಾಜಿ ಸಚಿವರಾದ ರಮಾನಾಥ ರೈ, ಯೂತ್ ಕಾಂಗ್ರೆಸ್ಸಿನ ಬೋಂಡಾಲ ಜಗನ್ನಾಥ ಶೆಟ್ಟಿ, ಅಖಿಲ ಭಾರತ ವಕೀಲರ ಸಂಗದ ಅಧ್ಯಕ್ಷರಾದ ಯಶವಂತ ಯರೋಳಿ, ಪಿ.ವಿ.ಮೋಹನ್ ಮೊದಲಾದವರು ಮಾತನಾಡಿದರು.

ವಿವಿಧ ಸಂಘಟನೆಗಳಾದ ಮಾನವತಾ ವೇದಿಕೆ, ಮುಸ್ಲಿಂ ಲೇಖಕರ ಸಂಘ, ಪ್ರಗತಿಪರ ಚಿಂತಕರ ವೇದಿಕೆ, ವಿಮಾ ನೌಕರರ ಸಂಘ, ಸಿಐಟಿಯು, ಡಿವೈಎಫ್‌ಐ, ತಲೆಹೊರೆ ಕಾರ್ಮಿಕರ ಸಂಘ, ಎಸ್‌ಎಫ್‌ಐ, ಸಹಮತ, ಸಮುದಾಯ, ಮಾಂಸ ವ್ಯಾಪಾರಿಗಳ ಸಂಘ, ಮುಸ್ಲಿಂ ವಿಕಾಸ ಪರಿಷತ್, ಕರಾವಳಿ ಜನಜಾಗೃತಿ ಒಕ್ಕೂಟ, ಬ್ಯಾರಿ ಯುವಜನ ಸಂಘ, ಜೆಎಂಎಸ್ ಮೊದಲಾದ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ಉನ್ನತ ನಿಯೋಗ ಐಜಿಪಿಯವರಿಗೆ ಮನವಿ ನೀಡಿದ ಮೇಲೆ ಅದರ ವಿವರವನ್ನು ಎಸ್.ವೈ.ಗುರುಶಾಂತ್ ನೀಡಿದರು.

ಮುಸ್ಲಿಂ ಸೆಂಟ್ರಲ್ ಸಮಿತಿಯ ಹಸನ್ ಹಾಜಿ, ಡಿವೈಎಫ್‌ಐನ ನಾಯಕರಾದ ಅಶೋಕ್ ಕೊಂಚಾಡಿ, ದಯಾನಂದ ಶೆಟ್ಟಿ, ವಾಸುವೇದ ಜೆ.ಪಿ., ಸಂತೋಷ್ ನೀತಿನಗರ, ಖಲೀಲ್, ಅಜೀಜ್, ಹಕೀಂ ಮೊಯಿಲಿ, ಪ್ರಗತಿಪರ ಚಿಂತಕರ ವೇದಿಕೆಯ ಕೃಷ್ಣಪ್ಪ ಕೊಂಚಾಡಿ, ರೋಹಿತಾಕ್ಷ ರೈ ಮೊದಲಾದವರು ನೇತೃತ್ವ ವಹಿಸಿದ್ದರು. ಡಿವೈಎಫ್‌ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳಿ ಕಾರ್ಯಕ್ರಮ ನಿರೂಪಿಸಿದರು. ಯಾದವ ಶೆಟ್ಟಿ ಈ ಪ್ರತಿಭಟನಾ ರ್‍ಯಾಲಿಯ ಉದ್ದೇಶವನ್ನು ಆರಂಭದಲ್ಲಿ ವಿವರಿಸಿದರು.



ಉಡುಪಿಯಲ್ಲಿ ನಡೆದ ಬರ್ಬರ ಮತ್ತು ಅನಾಗರಿಕ ಘಟನೆ ಬಗ್ಗೆ ತಕ್ಷಣ ತನಿಖೆ ನಡೆಸಿ ದೌರ್ಜನ್ಯಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಾರ್ಚ್ 16 ರಂದು ಜಿಲ್ಲಾ ಪೊಲೀಸ್ ಅಧಿಕಾರಿಯ ಕಛೇರಿ ಎದುರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು.

ಪುಟ 8 ನೋಡಿ

ದೇಶಭಕ್ತರ ದಂಡೇ ಇಲ್ಲಿದೆ ನೋಡಿ

ಸಂಸ್ಕೃತಿ-ನಾಗರೀಕತೆ ಬಗ್ಗೆ ಭಾರೀ ಬೊಗಳೆ ಬಿಡುವ ಬಿಜೆಪಿ ನಾಯಕರ ಸ್ಥಿತಿಯಾದರೂ ಏನು? ಪುತ್ತೂರಿನ ಬಿಜೆಪಿ ನಾಯಕ ವೈಶ್ಯಾವಾಟಿಕೆ ನಡೆಸುತ್ತಿರುವ ಆರೋಪದಲ್ಲಿ ರೆಡ್ ಹ್ಯಾಂಡ್ ಸಿಕ್ಕಿಬಿದ್ದು ಕೇಸ್ ಎದುರಿಸುತ್ತಿದ್ದಾನೆ.

ಸುಳ್ಯದ ಬಿಜೆಪಿ ಮಹಾನಾಯಕನೊಬ್ಬ ಕಳ್ಳ ನೋಟಿನ ದಂಧೆಯಲ್ಲಿ ಸಿಕ್ಕಿಬಿದ್ದು ಕಂಬಿ ಎಣಿಸುತ್ತಿದ್ದಾನೆ. ಎಂತಹ ದೇಶಭಕ್ತರು ಇವರಾ?

ಊರ್ವಸ್ಟೋರ್ ಬಳಿಯಲ್ಲಿ 'ಗೋಶಾಲೆ' ನಡೆಸುತ್ತಿರುವ ಇದೇ ಪರಿವಾರ ಮಂದಿಯ ದನ-ಕರು ಹಿಡಿದುತಂದು ಕೂಡಿಹಾಕಿದ್ದು ಕೇಸ್ ಮುಗಿದ ಬಳಿಕ ದನಗಳೆಲ್ಲಿ ಎಂದು ಕೇಳಿದರೆ, ಅಸ್ವಸ್ಥತೆಯಿಂದ ಸತ್ತಿವೆ ಎಂದೋ, ಕಳ್ಳತನ ವಾಗಿವೆ ಎಂದೋ ಸಬೂಬು ಹೇಳಲಾಗುತ್ತಿದೆ. ಇಂತಹ 19 ದನಗಳು ಕಾಣೆಯಾಗಿವೆಯಂತೆ? ಎಲ್ಲಿಗೆ ಯಾರ ಮನೆಗೆ, ಯಾರ ಹೊಟ್ಟೆಗೆ ಎಂದು ತನಿಖೆ ಮಾಡಿದರೆ ಸತ್ಯ ಹೊರಬಂದೀತು! ಇಂತಹ 'ಸಚ್ಚಾರಿತ್ರ್ಯವಿರುವ' ಈ ಪುಂಡರ ತಂಡವನ್ನು ಸಾಕಿಕೊಂಡು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಬೊಬ್ಬೆ ಹೊಡೆಯಲು ಯಡಿಯೂಪ್ಪನವರಿಗೆ ಏನು ನೈತಿಕ ಹಕ್ಕಿದೆ? ಅದು ಕೋರಮಂಗಲ, ನಾಗಮಂಗಲ, ಬಾಗಲಕೋಟೆ, ಬಿಜಾಪುರ, ಮುಂತಾಗಿ ಬೆಂಕಿ ಹಚ್ಚಿ ಬಾಯಿಬಡಿದುಕೊಳ್ಳಲು ನಾಚಿಕೆಯಾದರೂ ಬೇಡವೆ?

.....ನಕ್ಸಲ್‌ವಾದ ಒಂದು ವಿಶ್ಲೇಷಣೆ

ಪುಟ 2 ರಿಂದ

ಅಧಿಕಾರವನ್ನು ಹಂಚಿಕೊಂಡರು. ಆಗ ವಿಯಟ್ನಾಂ ಜನತೆಯ ಮುಖ್ಯಶತ್ರುಗಳು ಜಪಾನರು ಹಾಗೂ ಫ್ರೆಂಚ್ ಫ್ಯಾಸಿಸ್ಟರುಗಳೆಂದು ಪಕ್ಷ ತಿಳಿಯಹೇಳಿತು. 1945ರ ಮಾರ್ಚ್ ನಂತರ ಜಪಾನರು ಫ್ರೆಂಚರನ್ನು ಹೊರದೂಡಿ ತಾವೊಬ್ಬರೆ ಇಂಡೋಚೈನಾವನ್ನು ಆಳತೊಡಗಿದರು. ಆಗ ಜಪಾನಿನ ಫ್ಯಾಸಿಸ್ಟ್‌ಗಳು ಮುಖ್ಯ ಶತ್ರುಗಳಾದರು. 1945-54 ರಲ್ಲಿ ವಿಯಟ್ನಾಮಿನ ರಕ್ಷಣಾಯುದ್ಧವು ಫ್ರೆಂಚಿನ ವಸಾಹತುಶಾಹಿ ಹಾಗೂ ಅವರ ಸಹಾಯಕರಾದ ಅಮೇರಿಕಾದ ಸಾಮ್ರಾಜ್ಯಶಾಹಿಗಳ ವಿರುದ್ಧವಾಗಿತ್ತು. ದಿಯನ್ ಬಿಯಸ್‌ಫ್ಯೂನ ನಮ್ಮ ಮಹತ್ತರ ಜಯದ ನಂತರ ಅಮೇರಿಕಾ ವಿಯಟ್ನಾಮಿನ ಮುಖ್ಯ ಶತ್ರುವಾಯಿತು. ಕಾರಣ ಅಮೇರಿಕನ್ನರು ಆಗ ಫ್ರೆಂಚರನ್ನು ಹೊರದೂಡಿ ದಕ್ಷಿಣ ವಿಯಟ್ನಾಮಿನ ಮೇಲೆ ವಿನಾಶಕಾರಿ ಯುದ್ಧವನ್ನು ಸಾರಿದರು.

"ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿಯ ಶತ್ರುಗಳಲ್ಲಿ ಊಳಿಗಮಾನ್ಯ ಭೂಸ್ವಾಮ್ಯವರ್ಗವೂ ಸೇರಿರುತ್ತದೆ ಎಂಬುದನ್ನು ಮನಗಾಣಬೇಕು. ಆದರೆ ಪ್ರತಿಯೊಂದು ಕಾಲಘಟ್ಟದಲ್ಲಿ ಯಾವ ಶತ್ರುವನ್ನು ಶಕ್ತಿಗುಂದಿಸಬೇಕು ಎಂಬುದನ್ನು ತಿಳಿದುಕೊಳ್ಳಲೇ ಬೇಕು. ಉದಾಹರಣೆಗೆ, ವಿಯಟ್ನಾಮಿನಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆಯಾದಾಗಿನಿಂದ ಕೇಂದ್ರ ಸಮಿತಿಯ ಆರನೆ ಸಮ್ಮೇಳನದವರೆಗೆ (1939 ಡಿಸೆಂಬರ್‌ವರೆಗೆ) ರಾಜ ಹಾಗೂ ಅವನ ಅನುಯಾಯಿಗಳು ಗ್ರಾಮೀಣ ಸ್ವೇಚ್ಛಾಧಿಪತಿಗಳು ಮುಂತಾದ ಊಳಿಗಮಾನ್ಯ ಅಧಿಕಾರ ವರ್ಗವು ಫ್ರೆಂಚ್ ವಸಾಹತುಶಾಹಿಗಳ ದಳ್ಳಾಳಿಗಳಾಗಿ ವರ್ತಿಸಿದರು. ಆಗ ಇವರನ್ನು ಶಕ್ತಿಗುಂದಿಸ ಬೇಕಾಗಿತ್ತು. ಆರನೆಯ ಸಮ್ಮೇಳನದ ನಂತರ ಫ್ರೆಂಚ್ ಹಾಗೂ ಜಪಾನಿನ ಫ್ಯಾಸಿಸ್ಟ್‌ಗಳ ಕೈಗೊಂಬೆಗಳಾಗಿ ವರ್ತಿಸಿದ ವಂಚಕ ವರ್ಗವಾದ ಭೂಸ್ವಾಮಿ ವರ್ಗವನ್ನು ಗುರಿಯಾಗಿಟ್ಟು ಕೊಳ್ಳಬೇಕಾಗಿತ್ತು. ಅಂದರೆ, ಅಂದಿನ ಊಳಿಗಮಾನ್ಯ ಭೂಸ್ವಾಮಿಗಳನ್ನು ಇಡೀ ಒಂದು ವರ್ಗವಾಗಿ ತಿಳಿದು ಶಕ್ತಿಗುಂದಿಸಲಿಲ್ಲ. ಅದಕ್ಕೆ ಬದಲಾಗಿ, ಅವರಲ್ಲಿ ಒಡಕುಂಟುಮಾಡಿ ಭಾರಿ ಬಂಡವಾಳಶಾಹಿಗಳ ಭಾಗವನ್ನು ಅಗಚಿಹಾಕಿ ಫ್ರೆಂಚ್ ಹಾಗೂ ಜಪಾನೀಯರನ್ನು ಎದುರಿಸಿದೆವು. ನಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ಚಳುವಳಿ ಮುನ್ನಡೆದು ಫ್ರೆಂಚ್ ವಸಾಹತುಶಾಹಿಗಳಿಗೆದುರಾಗಿ ರಕ್ಷಣೆಗೋಸ್ಕರ ಭೂಸುಧಾರಣೆಗಳನ್ನು ಜಾರಿಗೆ ತಂದೆವು. ಶ್ರಮಜೀವಿ ಹಾಗೂ ರೈತಾಪಿ ವರ್ಗಗಳ ಸ್ನೇಹವನ್ನು ಹೆಚ್ಚಿಸಿದೆವು. ಕ್ರಾಂತಿಯನ್ನು ಮುನ್ನಡೆಸುವ ಸಲುವಾಗಿ ಜನರ ಸಾಮರ್ಥ್ಯವನ್ನು ಹೆಚ್ಚಿಸುತ್ತಾ ಬಂದೆವು. ಅಗತ್ಯ ಬಿದ್ದಾಗಲೆಲ್ಲ ಊಳಿಗಮಾನ್ಯ ಭೂಸ್ವಾಮ್ಯ ವರ್ಗವನ್ನು ತೊಡೆದುಹಾಕಿದೆವು. ಅಲ್ಲದೆ ಅವರ ಭೂಒಡೆತನವನ್ನು ತೆಗೆದುಹಾಕುವ ಜವಾಬುದಾರಿಯನ್ನು ವಹಿಸಿಕೊಂಡೆವು.

ಶತ್ರುವಿನ ಒಳಗಿನ ಭಿನ್ನಾಭಿಪ್ರಾಯಗಳಿಗೆ ಸಂಬಂಧಿಸಿದಂತೆ 1936-39 ರ ಪ್ರಜಾಪ್ರಭುತ್ವದ ಮುನ್ನಡೆಯ ಕಾಲದಲ್ಲಿ ಫ್ರೆಂಚ್ ಸಾಮ್ರಾಜ್ಯಶಾಹಿಯನ್ನು ಹಾಗೂ ವಸಾಹತುಶಾಹಿಯನ್ನು ಪೂರ್ಣವಾಗಿ ಮೂಲೋತ್ಪಾಟನೆ ಮಾಡುವ ಗುರಿಯನ್ನು ಇಟ್ಟುಕೊಳ್ಳದೆ ಫ್ರೆಂಚ್ ಫ್ಯಾಸಿಸ್ಟ್ ಹಾಗೂ ವಸಾಹತು ಬಂಡವಾಳಶಾಹಿಗಳನ್ನು ವಿಯಟ್ನಾಂನ ಪ್ರಧಾನ ಶತ್ರುಗಳೆಂದು ತಿಳಿದು ಅವುಗಳನ್ನು ಬೇರುಸಹಿತ ಕೀಳಲು ಪಣತೊಟ್ಟೆವು.

ಊಳಿಗಮಾನ್ಯ ಭೂಸ್ವಾಮಿ ವರ್ಗವನ್ನು ಸಂಬಂಧಿಸಿದಂತೆ ಅಗಸ್ಟ್ ತಿಂಗಳ ಕ್ರಾಂತಿ ಮೊದಲ್ಗೊಂಡು, ಭೂಸುಧಾರಣಾ ಕ್ರಮವನ್ನು ಮೂರು ಹಂತಗಳಲ್ಲಿ ಜಾರಿಗೊಳಿಸಲು ಶ್ರಮಿಸಿದೆವು. ಇದಕ್ಕಾಗಿ ಹಲವಾರು ಮಾರ್ಗಗಳನ್ನು ಅನುಸರಿಸಿದೆವು. ಪೂರ್ಣ ಸ್ವಾಧೀನಪಡಿಸಿಕೊಳ್ಳುವುದು, ಭಾಗಭಾಗವಾಗಿ ತೆಗೆದುಕೊಳ್ಳುವುದು, ಬಲವಂತವಾಗಿ ಕೊಂಡುಕೊಳ್ಳುವುದು, ಭೂಒಡೆಯರು ತಾವಾಗಿಯೇ ಭೂಮಿಯನ್ನು ಬಿಟ್ಟುಕೊಡುವಂತೆ ಮಾಡುವುದು ಮುಂತಾದ ವಿವಿಧ ಕ್ರಮಗಳನ್ನು ಅವರವರ ರಾಷ್ಟ್ರೀಯ ಧೋರಣೆಗಳಿಗನುಗುಣವಾಗಿ ಕೈಗೊಂಡೆವು.

ಭೂಸ್ವಾಮಿ ವರ್ಗವನ್ನು ಆದಷ್ಟು ಒಡೆದು ಒಂದು ನಿರ್ದಿಷ್ಟ ಮಿತಿಯಲ್ಲಿ ಅವರ ರಕ್ಷಣೆಯನ್ನು ಶೀತಲಗೊಳಿಸಿದೆವು. ಏಕೆಂದರೆ ಇವರ ರಕ್ಷಣೆಗೆ ಬರುತ್ತಿದ್ದ ಭೂಮಾಲೀಕ ಕುಟುಂಬಗಳನ್ನು ಪಕ್ಷದೊಳಕ್ಕೆ ತರುವುದು ಅಗತ್ಯವಾಗಿತ್ತು".

ಇದೇ ರೀತಿ ಚೈನಾಕ್ರಾಂತಿಯ ಮುನ್ನಡೆಯಲ್ಲಿ ವಿವಿಧ ವಿಭಾಗಗಳಿಗೆ ಸೇರಿದ ಶತ್ರುವಿಗೆದುರಾಗಿ ಆಕ್ರಮಣದ ದಿಕ್ಕನ್ನು ತಿರುಗಿಸುದುದು ಹೇಗೆಂಬುದನ್ನು ಮಾವೊ ಕೃತಿಗಳನ್ನು ಅಭ್ಯಸಿಸಿದರೆ ತಿಳಿಯಬಹುದು. (ಚೈನಾ ಕಮ್ಯೂನಿಸ್ಟ್ ಪಕ್ಷವೇ ಹೇಳಿದಂತೆ ಅದು ಮೊದಲಿನಿಂದ ಕೊನೆಯವರೆಗೂ ಸಶಸ್ತ್ರ ಸೈನ್ಯಾಚರಣೆಯ ಕ್ರಮಗಳನ್ನು ಅನುಸರಿಸಿದರೂ ಇತರ ಯುದ್ಧ ಮಾರ್ಗಗಳನ್ನು ಅದು ಉಪೇಕ್ಷಿಸಲಿಲ್ಲ. ಆದಾಗ್ಯೂ ಪ್ರತಿದಿನ ನಡೆಯುವ ಏರ್ಪಾಡುಗಳೆಲ್ಲವನ್ನು ಪರಿಶೀಲಿಸಿ ಅವುಗಳಲ್ಲಿ ಒಟ್ಟು ರಾಷ್ಟ್ರೀಯ ಪರಿಸ್ಥಿತಿಗೆ ಅಂಗೀಕರಿಸಬಹುದಾದ ಪ್ರಾಯೋಗಿಕ ಕ್ರಾಂತಿ ತಂತ್ರಗಳನ್ನು ತಿದ್ದಿಕೊಂಡರು. ಈ ಸಮರತಂತ್ರದೊಳಗೇ ಸಶಸ್ತ್ರ ಸಮರ ಎನ್ನುವಂತೆಯೇ ಸಮಾಧಾನಕರವಾದ ಮಾರ್ಗಗಳು ಶತ್ರುವರ್ಗದೊಳಗಿನ ವೈರುಧ್ಯಗಳನ್ನು ಉಪಯೋಗಿಸಲಗತ್ಯವಿರುವ ನಯವಾದ ನಡವಳಿಕೆಗಳೂ ಅಡಗಿರುತ್ತವೆ.)

ರಷ್ಯನ್ ಕ್ರಾಂತಿಯ ಮುನ್ನಡೆಗೆ ಇದು ಬಾಧಕವಾಗಿದೆ. ಲೆನಿನ್ ಕೃತಿಗಳೂ ಸೇರಿದಂತೆ ರಷ್ಯನ್ ಕ್ರಾಂತಿಯ ಚರಿತ್ರೆಯೆಲ್ಲವನ್ನೂ ಸಂಗ್ರಹಿಸಿ ಸ್ಟಾಲಿನ್ ರಚಿಸಿದ ಕೃತಿಗಳೂ ಈ ವಸ್ತುಸ್ಥಿತಿಯನ್ನು ಸ್ಪಷ್ಟಪಡಿಸುತ್ತವೆ. (ಸ್ಟಾಲಿನ್ ನೇತೃತ್ವದಲ್ಲಿ ರಚಿಸಿದ ಸೋವಿಯತ್ ಯೂನಿಯನ್ನಿನ ಕಮ್ಯೂನಿಸ್ಟ್ ಪಕ್ಷದ (ಬೋಲ್ಷೆವಿಕ್) ಚರಿತ್ರೆಯ ಕೃತಿಯು ಇದರ ಸಂಕ್ಷಿಪ್ತ ರೂಪ ಎನ್ನಬಹುದು - ಹಿಸ್ಟರಿ ಆಫ್ ಸಿ.ಪಿ.ಎಸ್.ಯು(ಬಿ)

ವಿಶ್ವದ ಕ್ರಾಂತಿ ಅನುಭವಗಳಿಗೆ ವಿರುದ್ಧವಾಗಿ "ಸಶಸ್ತ್ರ ಸಮರ"ವೆಂಬ ಏಕೈಕ ಮಾರ್ಗವಾಗಿ ಎಂದೆಂದಿಗೂ ಎಲ್ಲ ಕಡೆಯೂ ಅಂಗೀಕಾರಯೋಗ್ಯ ಎನ್ನುವ ಸಿದ್ಧಾಂತವನ್ನು ಚೈನಾ ಕಮ್ಯೂನಿಸ್ಟ್ ಪಕ್ಷ ಒಂದು ಸಂದರ್ಭದಲ್ಲಿ ತಿದ್ದುಪಡಿ ಮಾಡಿಕೊಂಡಿತು. ಈ ಸಿದ್ಧಾಂತವನ್ನು ಹುಟ್ಟು ಹಾಕಿದವನು ಎನ್ನಲಾದ ಲಿನ್‌ಪಿಯಾವೊನನ್ನು ಕಮ್ಯೂನಿಸ್ಟ್ ನಾಯಕತ್ವವೇ ಟೀಕಿಸಿತು. ಅದರೆ ಇದರ ಅವಶೇಷಗಳು ಇನ್ನೂ ಉಳಿದಿವೆ. ಇದೇ ಭಾರತದ ನಕ್ಸಲ್‌ವಾದಿಗಳಿಗೆ ಇರುವ ತಾತ್ವಿಕ ಆಧಾರ.

ಒಂದು ಘಟ್ಟದಲ್ಲಿ ಅತೃಪ್ತಿಗೊಂಡ ವಿದ್ಯಾರ್ಥಿ ಹಾಗೂ ಯುವಜನ ವಿಭಾಗಗಳನ್ನು ಆಕರ್ಷಿಸಲು ಈ ಸಿದ್ಧಾಂತ ಹಾಗೂ ಸಂಘಟನೆಗೆ ಸಾಧ್ಯವಿತ್ತು. ಆದರೆ ಕಳೆದ ಹತ್ತಾರು ವರ್ಷಗಳ ಬೆಳವಣಿಗೆಯನ್ನು ಪರಿಶೀಲಿಸಿದರೆ ಅದು ತನ್ನ ಆಕರ್ಷಣಾಶಕ್ತಿಯನ್ನು ಕಳೆದುಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಶ್ರೀಸಾಮಾನ್ಯರನ್ನು ಕ್ರಾಂತಿಯತ್ತ ಸೆಳೆಯುವ ಮಾತಿರಲಿ, ನಕ್ಸಲ್‌ವಾದಿ ವಿಚಾರಧಾರೆಯಿಂದ ಪ್ರಭಾವಿತರಾದ ಜನರನ್ನು ಸಂಘಟಿಸುವುದರಲ್ಲಿ ಈ ಸಿದ್ಧಾಂತ ಅನುಪಯೋಗಿಯಾಗಿದೆ. ಇಂದಿನ ಭಾರತೀಯ ಸ್ಥಿತಿಗತಿಗಳನ್ನು ಕೂಲಂಕುಷವಾಗಿ ವಿಮರ್ಶಿಸುವ ಬದಲು ಚೈನಾದಲ್ಲಿ ನಡೆದುದೆಂದು ಅವರು ತಿಳಿದುಕೊಂಡಿರಬಹುದಾದ ಕೆಲವು ಘಟನೆಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಅವುಗಳ ರೀತಿಯಲ್ಲೇ ಭಾರತದ ಎಲ್ಲಾ ಕಡೆಗಳಲ್ಲೂ ಕ್ರಾಂತಿಯನ್ನು ಸಂಘಟಿಸುತ್ತೇವೆಂದು ನಕ್ಸಲ್‌ವಾದಿಗಳು ಶ್ರಮಿಸಿದರೆ ಅವರ ಶಕ್ತಿ ಹೀಗೆ ಪೋಲಾಗಿಬಿಡುತ್ತದೆ. ಆದ್ದರಿಂದ ಒಂದು ಕ್ರಾಂತಿಕಾರಿ ಸಂಘಟನೆಯಾಗಿ ನಕ್ಸಲ್‌ವಾದಿಗಳಿಗೆ ಯಾವ ಭವಿಷ್ಯವೂ ಇಲ್ಲ.

ಆದರೆ ಇದಕ್ಕೆ ಮತ್ತೊಂದು ರೀತಿಯ ಭವಿಷ್ಯವಿದೆ. ಪ್ರಾರಂಭ ಆದದ್ದು ಹೇಗೆ ಇರಲಿ, ಇಂದು ನಕ್ಸಲ್‌ವಾದಿಗಳಿಗೆ ಕಾಣುವ ಮುಖ್ಯಶತ್ರು ಭಾರತದ ಆಳುವ ವರ್ಗವಲ್ಲ. ಅದಕ್ಕೆ ವಿರುದ್ಧವಾಗಿ ಶ್ರಮಜೀವಿಗಳನ್ನು ಸಂಘಟಿಸುತ್ತಿರುವ ಎಡಪಕ್ಷಗಳ ಮೇಲೆ ಇದು ಕಾರುತ್ತಿದೆ. ಅಂದರೆ ಪ್ರಜಾಪ್ರಭುತ್ವ ಸಂಘಟನೆಗಳು ಮತ್ತು ಅದರ ಮುಂಚೂಣಿಲ್ಲಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವನ್ನು ನಕ್ಸಲ್‌ವಾದಿಗಳು ಮುಖ್ಯ ಶತ್ರುವನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕಾಗಿ ನಕ್ಸಲ್‌ವಾದಿಗಳು, ಕಮ್ಯೂನಿಸ್ಟ್ ಪಕ್ಷದ ನಾಯಕರುಗಳ ತಲೆಯನ್ನು ತೆಗೆಯಲು ಸಿದ್ಧರಿದ್ದಾರೆ. ಇದರಿಂದ ಆಳುವ ವರ್ಗಕ್ಕೆ ಪ್ರತ್ಯಕ್ಷವಾಗಿಯೇ ಸಹಾಯ ಮಾಡಿದ ಹಾಗೆ ಆಗುತ್ತದೆ. 1972-77ರ ಪಶ್ಚಿಮ ಬಂಗಾಳದಲ್ಲಿ ಅರೆ ಫ್ಯಾಸಿಸ್ಟ್ ಭೀಕರ ಆಳ್ವಿಕೆಯನ್ನು ಸ್ಥಾಪಿಸಲು ನಕ್ಸಲ್‌ವಾದಿಗಳನ್ನು ಉಪಯೋಗಿಸಲಾಯಿತು. ಇದು ಒಂದು ಮಿತಿಯಾದ ಅರ್ಥದಲ್ಲಿ ಕೇರಳದಲ್ಲೂ ನಡೆಯಿತು ಎಂದು ಹೇಳಬಹುದು.

ಈ ರೀತಿಯ ಕೊಲೆಪಾತಕ ರಾಜಕಾರಣವಲ್ಲದೆ ಚುನಾವಣೆಯಂತಹ ರಾಜಕೀಯ ಚಟುವಟಿಕೆಗಳಲ್ಲೂ ನಕ್ಸಲವಾದಿಗಳು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವೂ ಸೇರಿದಂತೆ ಉಳಿದೆಲ್ಲಾ ವಾಮಪ್ರಜಾಪ್ರಭುತ್ವ ಪಕ್ಷಗಳಿಗೆದುರಾಗಿ ಕೆಲಸ ಮಾಡುತ್ತಿದ್ದಾರೆ.

ಹೀಗೆ ಎಡಪಕ್ಷಗಳ ಪ್ರಜಾಪ್ರಭುತ್ವ ಸಂಘಟನೆಯನ್ನು ನಾಶಪಡಿಸಲು ಆಳುವ ವರ್ಗಗಳ ಆಯುಧವಾಗಿ ನಕ್ಸಲ್‌ವಾದ ಬೆಳೆಯುತ್ತಿದೆ.

(ಒಡನಾಡಿ ಸಂಚಿಕೆ 17 ರಿಂದ)

.....ಪ್ರತಿಯೊಬ್ಬರೂ ಪ್ರತಿಭಟಿಸಬೇಕಾದುದು ಅನಿವಾರ್ಯ

ಪುಟ 7ರಿಂದ

ಈ ಘಟನೆ ರಾಜ್ಯದ ಮತ್ತು ಜಿಲ್ಲೆಯ ಸಂಸ್ಕೃತಿ, ಮೌಲ್ಯ, ಸೌಹಾರ್ದತೆ, ಇತಿಹಾಸಗಳ ಘನತೆಗೆ ಚ್ಯುತಿ ತಂದಿದೆ. ದನ ಸಾಗಾಣಿಕೆ ಆರೋಪ ಹೊರಿಸಿ ವ್ಯಕ್ತಿಗಳನ್ನು ವಿವಸ್ತ್ರ ಗೊಳಿಸಿ ಹಿಂಸೆ ನೀಡಿದ್ದು ಅಮಾನವೀಯ. ಇದನ್ನು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯು ಖಂಡಿಸಿದೆ. ಹಾಗೂ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಯಾವುದೇ ವ್ಯಕ್ತಿ ಯಾ ಸಂಘಟನೆಯ ಮೇಲೆ ಪೊಲೀಸರು ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಸಮಿತಿಯು ಜಿಲ್ಲಾ ಪೊಲೀಸ್ ಅಧಿಕಾರಿಯರಿಗೆ ಒತ್ತಾಯಿಸಿದೆ.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯವರಾದ ಕೆ.ಶಂಕರ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ, ಕೂಡಲೇ ಸಂಬಂಧಪಟ್ಟ ಆರೋಪಿಗಳನ್ನು ಪೊಲೀಸರು ಬಂಧಿಸಿ ಕ್ರಮಗಳನ್ನು ಕೈಗೊಂಡು ಇಂತಹ ಪ್ರಕರಣಗಳನ್ನು ಮುಂದೆ ನಡೆಯದಂತೆ ತಡೆಯಬೇಕೆಂದು ಜಿಲ್ಲಾ ಪೊಲೀಸ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಯವರನ್ನು ಒತ್ತಾಯಿಸಿರುತ್ತಾರೆ.

ಪ್ರತಿಭಟನಾ ನೇತೃತ್ವವನ್ನು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಡೇವಿಡ್ ಎ.ಕರ್ಕಡ, ವಿಶ್ವನಾಥ ರೈ, ಚಂದ್ರಶೇಖರ್ ವಿ. ಮತ್ತು ಮಹಾಬಲ ವಡೇರಹೋಬಳಿ ಹಾಗೂ ಜಿಲ್ಲಾ ಸಮಿತಿಯ ಸದಸ್ಯರಾದ ರಮೇಶ್ ಮಂಡನ್, ದೋಗು ಸುವರ್ಣ, ಸಾಧು ಅಮೀನ್ ಮತ್ತು ಎಚ್.ನರಸಿಂಹನವರು ವಹಿಸಿದ್ದರು.



ಘಟನೆ ಬಗ್ಗೆ ತಿಳಿದ ತಕ್ಷಣವೇ ಸಿಪಿಐ(ಎಂ) ನಿಂದ ಉಡುಪಿಯಲ್ಲಿ ಪ್ರತಿಭಟನೆ

ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಲು ಸಿಪಿಐ(ಎಂ) ನಿಯೋಗದ ಆಗ್ರಹ


ಮಾರ್ಚ್ 13 ರಂದು ಉಡುಪಿ ಜಿಲ್ಲೆಯ ಆದಿ ಉಡುಪಿಯಲ್ಲಿ ತಂದೆ-ಮಗನನ್ನು ಬೆತ್ತಲೆಗೊಳಿಸಿ, ಅಮಾನುಷವಾಗಿ ಹೊಡೆದ ಪ್ರಕರಣಕ್ಕೆ ಸಂಬಂಧಿಸಿ ಘಟನಾ ವಿವರಗಳನ್ನು ಸಿಪಿಐ(ಎಂ)ನ ನಿಯೋಗವು ಪರಿಶೀಲಿಸಿತು. ಹಲ್ಲೆಗೊಳಗಾದ ಹಸನಬ್ಬ, ಮತ್ತು ಹಾಜನಬ್ಬರವರನ್ನು ಆಸ್ಪತ್ರೆಯಲ್ಲಿ ಸಂದರ್ಶಿಸಿದ ನಿಯೋಗವು ಅವರಿಗೆ ಸಾಂತ್ವನ ಹೇಳಿತು.

ಕಾನೂನನ್ನು ಕೈಗೆತ್ತಿಕೊಂಡು ಗೂಂಡಾಗಿರಿ ನಡೆಸಿದ ಹಿಂದೂ ಯುವಸೇನೆಯ ಕಾರ್ಯಕರ್ತರ ಕ್ರಮವನ್ನು ಉಗ್ರವಾಗಿ ಖಂಡಿಸಿರುವ ನಿಯೋಗವು ಈ ಕೃತ್ಯದಲ್ಲಿ ಭಾಗಿಯಾಗಿರುವವರ ಮೇಲೆ ನಿಷ್ಠುರವಾದ ಕಠಿಣ ಕ್ರಮ ಜರುಗಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದೆ.

ಬಜರಂಗದಳ ಮತ್ತು ಹಿಂದೂ ಯುವಸೇನೆಯಂತಹ ಕೋಮುವಾದಿ ಸಂಘಟನೆಗಳು ಸತತವಾಗಿ ಇಂತಹ ಕೃತ್ಯಗಳಲ್ಲಿ ತೊಡಗಿವೆ. ಸಮಾಜದಲ್ಲಿ ಶಾಂತಿ-ಸೌಹಾರ್ದತೆಯ ವಾತಾವರಣವನ್ನು ಕಾಪಾಡಿ ದ್ವೇಷ-ಕೋಮುವಿಭಜನೆ ತರಲು ಹವಣಿಸುತ್ತಿವೆ. ಇಂತಹ ಹತ್ತಾರು ಘಟನೆಗಳಿದ್ದು ಈ ಶಕ್ತಿಗಳ ಅಟ್ಟಹಾಸವನ್ನು ಮಟ್ಟಹಾಕಲು. ದೃಢಕ್ರಮ ಜರುಗಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಭಾನುವಾರದಂದಿನ ಹಲ್ಲೆಯಪ್ರಕರಣ ಪೂರ್ವಯೋಜಿತವಾದ ಕೃತ್ಯ ಎಂದು ಸ್ಪಷ್ಟವಾಗುತ್ತದೆ. ಹಲ್ಲೆ ಮತ್ತು ನಂತರದಲ್ಲಿ ಕ್ರಮ ವಹಿಸುವಲ್ಲಿ ಪೊಲೀಸರ ವೈಫಲ್ಯ ಕಾಣುತ್ತಿದ್ದು, ಇದರ ಬಗ್ಗೆ ಅಮೂಲಾಗ್ರ ತನಿಖೆಯೂ ಆಗಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಕೋಮುವಾದಿಗಳ ಇಂತಹ ಕೃತ್ಯಗಳನ್ನು ಮಾನವೀಯತೆಯುಳ್ಳ ಎಲ್ಲರೂ ಖಂಡಿಸಬೇಕೆಂದು ಸಿಪಿಐ(ಎಂ) ನಿಯೋಗ ವಿನಂತಿಸಿದೆ. ಈ ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಉಡುಪಿ ಕಾರ್ಯದರ್ಶಿ ವಿಶ್ವನಾಥ. ರೈ, ಬಿ.ಚಂದ್ರಶೇಖರ್, ಕೃಷ್ಣ ಅಮೀನ್ ಮುಂತಾದವರಿದ್ದರು.



ಇತ್ತೀಚೆಗೆ ಜರುಗಿದ ಬಿಹಾರ-ಜಾರ್ಖಂಡ್ ರಾಜ್ಯಗಳು ಚುನಾವಣಾ ಫಲಿತಾಂಶದಿಂದ ಧರ್ಮನಿರಪೇಕ್ಷಿತ ಶಕ್ತಿಗಳು ಕಲಿಯಬೇಕಾದ ಪಾಠಗಳೇನು? ಹಾಗೆಯೇ ರಾಜ್ಯಪಾಲರ ಪಾತ್ರದ ಕುರಿತಂತೆ ಬಿಜೆಪಿ ಬೊಬ್ಬೆ ಹೊಡೆಯುವುದಕ್ಕೆ ಅದಕ್ಕಾವ ನೈತಿಕತೆ ಇದೆ?

ಜಾರ್ಖಂಡ್ ಮತ್ತು ಬಿಹಾರ : ಕೆಲವು ಪಾಠಗಳು

ಪ್ರಕಾಶ್ ಕಾರಟ್

ಬಿಹಾರ, ಜಾರ್ಖಂಡ್ ಮತ್ತು ಹರ್ಯಾಣ ವಿಧಾನಸಭಾ ಚುನಾವಣೆಗಳ ನಂತರದ ಬೆಳವಣಿಗೆಗಳು ಹಲವಾರು ಪ್ರಶ್ನೆಗಳನ್ನು ಎತ್ತಿವೆ; ಅವು ಈ ಚುನಾವಣೆಗಳ ಫಲಿತಾಂಶಗಳ ತಕ್ಷಣದ ಪ್ರಭಾವ ಮತ್ತು ರಾಜ್ಯ ಸರ್ಕಾರಗಳ ರಚನೆಗೂ ಆಚೆ ಹೋಗಿವೆ, ಈ ಪ್ರಶ್ನೆಗಳನ್ನು ಪರಿಶೀಲಿಸುವುದು ಸಾಕಷ್ಟು ಬೋಧಕವಾಗಬಲ್ಲದು.

ಹರ್ಯಾಣದ ಫಲಿತಾಂಶಗಳು ನಿರೀಕ್ಷಿತವಾಗಿತ್ತು. ಜನತೆಗೆ ಚೌಟಾಲಾರ ಅಸಹ್ಯ ಸರಕಾರದಿಂದ ಮುಕ್ತಿ ಬೇಕಿತ್ತು. ಕಾಂಗ್ರೆಸ್ ಪಕ್ಷಕ್ಕೆ ಆಳುವ ಪಕ್ಷವನ್ನು ತಿರಸ್ಕರಿಸುವ ಈ ತೀರ್ಪಿನಿಂದ ಪ್ರಯೋಜನೆ ಸಿಕ್ಕಿತು. ಬಿಹಾರ ಮತ್ತು ಜಾರ್ಖಂಡ್ ಚುನಾವಣೆಗಳು ಮತ್ತು ನಂತರದ ವಿಷಯಗಳೇ ರಾಜಕೀಯವಾಗಿ ಮತ್ತು ಸಂವಿಧಾನಿಕವಾಗಿಯೂ ಮಹತ್ವದ್ದು.

ರಾಜಕೀಯ ಮಟ್ಟದಲ್ಲಿ, ಎದ್ದು ಕಾಣುವ ಅಂಶವೆಂದರೆ ಯುಪಿಎ ಸಹಯೋಗಗಳೊಂದಿಗೆ ಪೂರ್ಣ ಪ್ರಮಾಣದ ಮೈತ್ರಿ ಮಾಡಿಕೊಳ್ಳುವ ಬದಲು ಕಾಂಗ್ರೆಸ್ ತನ್ನ ಸ್ಥಾನ ಮತ್ತು ಈ ರಾಜ್ಯಗಳಲ್ಲಿ ತನ್ನ ಶಕ್ತಿಯ ಬಗ್ಗೆ ಕಾಂಗ್ರೆಸ್ ಮುಖಂಡತ್ವದ ತಪ್ಪು ಲೆಕ್ಕಾಚಾರ.

ಲೋಕಸಭಾ ಚುನಾವಣೆಗಳ ಮತ್ತು ಯುಪಿಎ ಸರಕಾರದ ರಚನೆಯ ನಂತರ ತನ್ನ ಜನಪ್ರಿಯತೆ ಸಾಮೂಹಿಕ ನೆಲೆ ಹೆಚ್ಚಿದೆ, ಅದರಿಂದ ತನಗೆ ಉತ್ತಮ ಫಲಿತಾಂಶ ದೊರೆಯಬಹುದೆಂದು ಭಾವಿಸಿತು. ಬಿಹಾರದಲ್ಲಿ ಆರ್‌ಜೆಡಿಯೊಂದಿಗೆ ಹಾಗೂ ಜಾರ್ಖಂಡದಲ್ಲಿ ಜೆಎಂಎಂ ಮತ್ತು ಆರ್‌ಜೆಡಿಯೊಂದಿಗೆ ಪೂರ್ಣ ಪ್ರಮಾಣದ ಚುನಾವಣೆ ತಿಳುವಳಿಕೆಯನ್ನು ಬೆಸೆಯಲಿಲ್ಲ.

ಇಂತಹ ಒಂದು ಅಂದಾಜು ಹೇಗೆ ಸಾಧ್ಯವಿತ್ತು ಎಂಬುದೊಂದು ರಹಸ್ಯವೇ. ಮಧ್ಯಪ್ರದೇಶ ಮತ್ತು ರಾಜಸ್ತಾನ ವಿಧಾನಸಭಾ ಚುನಾವಣೆಗಳಲ್ಲೇ ಕಾಂಗ್ರೆಸ್‌ನ ನೆಲೆ ಹ್ರಾಸಗೊಂಡಿತ್ತು. ನಂತರದ ಲೋಕಸಭಾ ಚುನಾವಣೆಗಳಲ್ಲಿ ಒಟ್ಟಾರೆಯಾಗಿ ಉತ್ತರ ಭಾರತದಲ್ಲಿ ಒಳ್ಳೆ ಫಲಿತಾಂಶವನ್ನೇನು ಅದು ಪಡೆಯಲಿಲ್ಲ. ಈ ರಾಜ್ಯಗಳಲ್ಲಾಗಲೀ ಯುಪಿ, ಬಿಹಾರಗಳಲ್ಲಾಗಲೀ ಕಳೆದುಕೊಂಡ ನೆಲೆಗಳನ್ನು ಮತ್ತೆ ಪಡೆಯಲು ಅದಕ್ಕೆ ಆಗಿರಲಿಲ್ಲ. ಆದ್ದರಿಂದ ಜಾರ್ಖಂಡ್‌ನಲ್ಲಿ ಆರ್‌ಜೆಡಿಯನ್ನು ಉಪೇಕ್ಷಿಸಿದ್ದಕ್ಕಾಗಿ ಪ್ರಮುಖ ಜಾತ್ಯತೀತ ಪಕ್ಷಗಳೇ ಐಕ್ಯತೆಯಿದ್ದಿದ್ದರೆ ಖಂಡಿತಾ ಸೋಲುತ್ತದೆಂದುಕೊಂಡಿದ್ದ ಬಿಜೆಪಿ ನೇತೃತ್ವದ ಸರಕಾರ ಮತ್ತೆ ಅಧಿಕಾರಕ್ಕೆ ಬರುವಂತಾಗಿದೆ. ಬಿಹಾರದಲ್ಲೂ ಆರ್‌ಜೆಡಿಯೊಂದಿಗೆ ಪೂರ್ಣ ಪ್ರಮಾಣದ ತಿಳುವಳಿಕೆಗೆ ಬರಲು ವಿಫಲವಾದದ್ದು ಹಾಗೂ ಲೋಕ ಜನಶಕ್ತಿಯೊಂದಿಗೆ ಹೋಗುವುದು ಒಳ್ಳೆಯದೆಂದು ಭಾವಿಸಿದ್ದಕ್ಕೆ ಅದು ಭಾರೀ ಬೆಲೆ ತೆರಬೇಕಾಯಿತು.

ಕಾಂಗ್ರೆಸ್ ಹೊಣೆ

ಜಾರ್ಖಂಡ್‌ನಲ್ಲಿ ಕಾಂಗ್ರೆಸ್-ಜೆಎಂಎಂ ಮೈತ್ರಿಕೂಟದ ಮತ ಶೇಕಡಾ ಗಮನಾರ್ಹವಾಗಿ ಇಳಿದಿದೆ. ಕಾಂಗ್ರೆಸ್‌ನದ್ದು ಕಳೆದ 2000ದ ವಿಧಾನಸಭಾ ಚುನಾವಣೆಗಳ ಶೇ. 20.1ರಷ್ಟು ಇದ್ದದ್ದು ಈಗ ಶೇ. 12ಕ್ಕೆ ಇಳಿದಿದೆ. ಬಿಹಾರದಲ್ಲೂ ಕಾಂಗ್ರೆಸ್‌ನ ಶೇಕಡಾ ಮತ 3.1ರಷ್ಟು ಇಳಿದಿದೆ. ನಿಜ ಆರ್.ಜೆ.ಡಿ. ಕೂಟ ತನ್ನ ದೀರ್ಘ ಆಳ್ವಿಕೆಯಿಂದಾಗಿ ಶೇ. 8.1ರಷ್ಟು ಮತ ಕಳಕೊಂಡಿದೆ. ಆದರೆ ಯುಪಿಎ ಮುಖಂಡ ಪಕ್ಷವಾಗಿ ಬಿಹಾರದಲ್ಲಿಯೂ, ಜಾರ್ಖಂಡ್‌ನಲ್ಲಿಯೂ ಮೈತ್ರಿಕೂಟವನ್ನು ಒಟ್ಟಾಗಿಡುವ ಜವಾಬ್ದಾರಿ ಮುಖ್ಯವಾಗಿ ಕಾಂಗ್ರೆಸ್‌ನ ಮೇಲಿತ್ತು. ಜಾರ್ಖಂಡ್ ಮತ್ತು ಬಿಹಾರದಲ್ಲಿನ ಹಿನ್ನಡೆ ಕಾಂಗ್ರೆಸ್ ಮುಖಂಡತ್ವಕ್ಕೆ ಮತ್ತು ಯುಪಿಎಗೆ ಎಚ್ಚರಿಕೆಯಾಗಬೇಕು.

ಸಿಪಿಐ(ಎಂ)ನ 18ನೇ ಮಹಾಧಿವೇಶನದ ಕರಡು ನಿರ್ಣಯ ಈ ಸಂಬಂಧದಲ್ಲಿ ಮಾಡಿರುವ ಒಂದು ಟಿಪ್ಪಣಿಯನ್ನು ಗಮನಿಸುವುದು ಸೂಕ್ತ - "ಯುಪಿಎ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಜನ-ಪರ ಕಾರ್ಯಗಳನ್ನು ಜಾರಿಗೆ ತರುವ ಮೂಲಕ ಮತ್ತು ತನ್ನ ರಾಜಕೀಯ ಸುಸಂಗತತೆಯನ್ನು ಕಾಪಾಡಿಕೊಳ್ಳುವ ಮೂಲಕ ತನ್ನ ಸರಕಾರ ಒಂದು ಸ್ಥಿರ ಅಧಿಕಾರಾವಧಿಯನ್ನು ಪಡೆಯುವಂತೆ ನೋಡಿಕೊಳ್ಳಬೇಕಾದ್ದು ಅದಕ್ಕೇ ಬಿಟ್ಟಿದ್ದು".

ಯುಪಿಎನ ರಾಜಕೀಯ ಸುಸಂಗತತೆಯನ್ನು ಕಾಯ್ದುಕೊಳ್ಳುವುದು ಮೈತ್ರಿಕೂಟದ ಮುಖಂಡತ್ವದಲ್ಲಿರುವ ಕಾಂಗ್ರೆಸ್‌ನ ಪ್ರಾಥಮಿಕ ಜವಾಬ್ದಾರಿ. ಹಿಂದಿನ ಪಾಠಗಳನ್ನು, ಪ್ರಸಕ್ತ ಸುತ್ತಿನ ಚುನಾವಣೆಗಳಲ್ಲಿ ಮಾಡಿದ ಭಾರೀ ತಪ್ಪುಗಳ ಪಾಠಗಳನ್ನು ಎಷ್ಟು ಬೇಗ ಅದು ರಕ್ತಗತ ಮಾಡಿಕೊಳ್ಳುತ್ತದೋ ಅಷ್ಟರ ಮಟ್ಟಿಗೆ ಯುಪಿಎಗೆ ತನ್ನನ್ನು ರಾಜಕೀಯವಾಗಿ ಕ್ರೋಢೀಕರಿಸಿಕೊಳ್ಳುವ ಅವಕಾಶಗಳು ಹೆಚ್ಚುತ್ತವೆ.

ರಾಜ್ಯಪಾಲರ ಪಕ್ಷಪಾತಪೂರ್ಣ ಪಾತ್ರ

ಇದು ಎರಡನೇ ರಾಜಕೀಯ ಪರಿಣಾಮವಾಗಿ ಕಾಂಗ್ರೆಸ್ ಇನ್ನಷ್ಟು ಹೆಚ್ಚು ಬೆಲೆ ತೆರಬೇಕಾಗಿ ಬರಬೇಕಾಗುವುದು. ಜಾರ್ಖಂಡ್‌ನ ರಾಜ್ಯಪಾಲ ಸೈಯಿದ್ ಸಿಬ್ತೆಸ್ ರಜ್ವಿ ತಾನು ಕೇಂದ್ರದಲ್ಲಿನ



ಮುಂಡಾ ಅಧಿಕಾರ ಸ್ವೀಕಾರ

ಆಳುವ ಪಕ್ಷದ ಪಕ್ಷಪಾತಿಯೇ ಎಂಬಂತೆ ಕೆಲಸ ಮಾಡಿದರು. ರಾಜ್ಯಪಾಲರನ್ನು ಆಳುವ ಪಕ್ಷದ ಹಿತಾಸಕ್ತಿಗಳ ಒಂದು ಸಾಧನವಾಗಿ ಬಳಸುವುದು ಹಿಂದೆ ಕಾಂಗ್ರೆಸ್ ಪೋಷಿಸಿಕೊಂಡು ಬಂದ ಒಂದು ದುಷ್ಟ ಅಭ್ಯಾಸ. ದುರದೃಷ್ಟವಶಾತ್, ಇದರ ಪುನರಾವರ್ತನೆಯಾಗಿದೆ. ಶಿಬು ಸೊರೆನ್ ಬಳಿ ಬಹುಮತದ ಸಾಕ್ಷ್ಯವಿಲ್ಲದಿದ್ದಾಗ ಅವರನ್ನು ಸರಕಾರ ರಚಿಸಲು ಆಹ್ವಾನಿಸಿರುವುದು ಕಾಂಗ್ರೆಸ್ ಮುಖಂಡತ್ವದ ಪ್ರತಿಷ್ಠೆಗೆ ಕುಂದು ತಂದಿದೆ. ಈ ಮೂಲಕ ಬಿಜೆಪಿ ಮತ್ತು ಅದರ ಮಿತ್ರರಿಗೆ ಸರಕಾರದ ಮೇಲೆ ಧಾಳಿ ಮಾಡಲು ಅವಕಾಶ ಕಲ್ಪಿಸಿ ಕೊಡಲಾಯಿತು. ವಿಧಾನಸಭೆಯಲ್ಲಿ ಮಾರ್ಚ್ 11ರ ಪ್ರಹಸನದ ನಂತರ ಅನಾಹುತವನ್ನು ಸರಿಪಡಿಸಲು ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿದರು. ಈ ಇಡೀ ಮಬ್ಬು ವ್ಯವಹಾರದಲ್ಲಿ ಶಿಬು ಸೊರೆನ್‌ರನ್ನು ತೆಗೆದು ಹಾಕುವಂತೆ ಕೇಂದ್ರ ಸರಕಾರ ರಾಜ್ಯಪಾಲರಿಗೆ ಸೂಚನೆ ನೀಡಿದ್ದು ಮಾತ್ರವೇ ಒಂದು ಮೆಚ್ಚತಕ್ಕ ಕ್ರಮ.

ಕಾಂಗ್ರೆಸ್ ಮುಖಂಡರಲ್ಲಿ ತಾವು ಯಾವ ರೀತಿಯ ವ್ಯಕ್ತಿಗಳನ್ನು ರಾಜ್ಯಪಾಲರಾಗಿ ಮಾಡುತ್ತಿದ್ದೇವೆ ಎಂಬ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಯುಪಿಎ ಅಧಿಕಾರ ವಹಿಸಿಕೊಂಡ ಮೇಲೆ ನೇಮಿಸಿದ ಹೆಚ್ಚಿನ ರಾಜ್ಯಪಾಲರುಗಳು ಕಾಂಗ್ರೆಸ್ ಮುಖಂಡರು ಅಥವಾ ಮಾಜಿ ಮುಖ್ಯಮಂತ್ರಿಗಳು - ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ, ರಾಜಸ್ತಾನ, ಆಂಧ್ರಪ್ರದೇಶ ಅಥವಾ ಗೋವಾ ಎಲ್ಲೇ ಆಗಲಿ. ಪಶ್ಚಿಮ ಬಂಗಾಳದ ರಾಜ್ಯಪಾಲರ ನೇಮಕ ಮಾತ್ರ ಒಂದು ಗಮನಾರ್ಹ ಅಪವಾದ.

ರಾಜ್ಯಪಾಲರನ್ನು ಕೇಂದ್ರದ ಆಳುವ ಪಕ್ಷದ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವ ಸಾಧನಗಳಂತೆ ಮತ್ತು ಸರಕಾರಗಳನ್ನು ಅಸ್ಥಿರಗೊಳಿಸಲು ಬಳಸಿಕೊಳ್ಳುವುದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸಿಕೊಂಡು ಬಂದಿದೆ. ಈ ಹಿಂದೆ ಒಕ್ಕೂಟ ನೀತಿಯ ಬಗ್ಗೆ ಕಾಳಜಿಯನ್ನೇನೂ ಕಾಂಗ್ರೆಸ್ ತೋರಿಸಿಲ್ಲ. ಈ ಕಣ್ಣೋಟದಿಂದಾಗಿಯೋ ಮತ್ತೆ - ಮತ್ತೆ ಚುನಾಯಿತ ರಾಜ್ಯ ಸರಕಾರಗಳನ್ನು ವಜಾ ಮಾಡುವ, ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲು 356ನೇ ಕಲಮಿನ ಬಳಕೆಯಾಯಿತು. ಇಂತಹ ಬಹಿರಂಗ ದುರುಪಯೋಗದಿಂದಾಗಿಯೇ 356ನೇ ಕಲಂನ್ನು ಮಾರ್ಪಡಿಸಬೇಕೆಂಬ ಚರ್ಚೆಗಳು ನಡೆದವು. ಇದರ ಫಲವೆಂದರೆ ಅಂತರರಾಜ್ಯ ಮಂಡಳಿ 356ನೇ ಕಲಮನ್ನು ಮನಬಂದಂತೆ, ಪಕ್ಷಪಾತದಿಂದ ಬಳಸುವುದನ್ನು ತಡೆಯಲು ಹೇಗೆ ಮಾರ್ಪಡಿಸುವುದು ಎಂಬ ಬಗ್ಗೆ ಒಂದು ಒಮ್ಮತಕ್ಕೆ ಬಂತು.

ಆದರೆ ಒಂದು ಚುನಾವಣೆಯ ನಂತರ ಒಬ್ಬ ಮುಖಂಡನನ್ನು ಸರಕಾರ ರಚಿಸಲು ಆಹ್ವಾನಿಸುವಲ್ಲಿ ರಾಜ್ಯಪಾಲರ ಪಾತ್ರದ ಅಂಶ ಈ ಸುಧಾರಣೆಯಲ್ಲಿ ಇಲ್ಲ. ಇದು ಸಂವಿಧಾನದಲ್ಲಿನ ಒಂದು ಅಸ್ಪಷ್ಟ ಅಂಶ ಯಾರು ಸರಕಾರ ರಚಿಸಬೇಕು ಎಂಬುದನ್ನು ನಿರ್ಣಯಿಸುವ ವಿವೇಚನೆಯನ್ನು ರಾಜ್ಯಪಾಲರಿಗೆ ಬಿಡುವ ಅಂಶ ಇಲ್ಲಿದೆ. ಜಾರ್ಖಂಡ್‌ನ ಅನುಭವ ಒಬ್ಬ ರಾಜ್ಯಪಾಲ ಒಬ್ಬ ವ್ಯಕ್ತಿಯನ್ನು ಸರಕಾರ ರಚಿಸಲು ಹೇಗೆ ಆಹ್ವಾನಿಸಬೇಕೆಂಬ ಬಗ್ಗೆ ನಿಯಮಾವಳಿಗಳನ್ನು ರೂಪಿಸುವ ತುರ್ತನ್ನು ಎತ್ತಿ ತೋರಿದೆ. ವಿಧಾನಸಭೆಯೇ ಇಂತಹ ವಿಷಯಗಳನ್ನು ನಿರ್ಧರಿಸಬೇಕಾದ ವೇದಿಕೆ ಎಂಬ ಅಂಶವನ್ನು ಒಂದು ಸಂವಿಧಾನ ತಿದ್ದುಪಡಿಯ ಮೂಲಕ ಸೇರಿಸಬೇಕಾಗಿದೆ.


ಬಿಜೆಪಿಯ ನಿಂದನೀಯ ದಾಖಲೆ

ಜಾರ್ಖಂಡ್‌ನಲ್ಲಿ ರಾಜ್ಯಪಾಲರ ವರ್ತನೆ ಬಿಜೆಪಿಗೆ ತಾವು ಪ್ರಜಾಪ್ರಭುತ್ವದ ಮತ್ತು ಸಾಂವಿಧಾನಿಕ ಸೂಕ್ತತೆಯ ಮಹಾಪ್ರತಿಪಾದಕರು ಎಂದು ಪೋಸು ಕೊಡಲು ಅವಕಾಶ ಒದಗಿಸಿದೆ. ಈ ವಲಯದಲ್ಲಿ ಬಿಜೆಪಿಯ ದಾಖಲೆ ನಿಂದನೀಯ. ಬಿಹಾರದಲ್ಲಿ ಎರಡು ಬಾರಿ, 1998 ಮತ್ತು 1999ರಲ್ಲಿ ವಾಜಪೇಯಿ ಸರಕಾರ 356ನೇ ಕಲಮನ್ನು ಬಳಸಿ ಚುನಾಯಿತ ಸರಕಾರವನ್ನು ವಜಾ ಮಾಡಲು ಪ್ರಯತ್ನ ನಡೆಸಿತು. 1999ರಲ್ಲಿ ಜಹಾನಾಬಾದ್‌ನಲ್ಲಿ ಧಲಿತರ ಹತ್ಯಾಕಾಂಡವನ್ನು ಆಧರಿಸಿ ಇಂತಹ ನಗ್ನ ಮತ್ತು ಕಾನೂನು ಬಾಹಿರ ಮಧ್ಯ ಪ್ರವೇಶದ ಪ್ರಯತ್ನ ನಡೆಸಲಾಯಿತು. ಈ ದೃಷ್ಟಿಯಿಂದ ನೋಡಿದರೆ ಗುಜರಾತಿನ ಮೋದಿ ಸರಕಾರವನ್ನು ಒಂದಲ್ಲ, ಹಲವು ಬಾರಿ ವಜಾ ಮಾಡಬೇಕಾಗಿತ್ತು. 2000 ರಲ್ಲಿನ ವಿಧಾನಸಭಾ ಚುನಾಣೆಗಳ ನಂತರ ಆಗಿನ ಬಿಹಾರ ರಾಜ್ಯಪಾಲ ವಿನೋದ ಪಾಂಡೆಯ ನೆರವಿನಿಂದ ನಿತಿಶ್ ಕುಮಾರ್‌ರ ಅಲ್ಪಮತದ ಸರಕಾರವನ್ನು ಹೇರುವ ಪ್ರಯತ್ನ ನಡೆಯಿತು. ಗೃಹಮಂತ್ರಿ ಎಲ್.ಕೆ.ಅಡ್ವಾಣಿಯವರ ನಿರ್ದೇಶನದಂತೆ ಕೇಂದ್ರೀಯ ತಂಡಗಳನ್ನು ಪಶ್ಚಿಮ ಬಂಗಾಳ, ಬಿಹಾರ ಹಾಗೂ ತಮಿಳುನಾಡುಗಳಿಗೆ ಕಳಿಸಿದಾಗ ಬಿಜೆಪಿಯ ಸರ್ವಾಧಿಕಾರಶಾಹೀ ಮನೋಭಾವ ಸ್ಪಷ್ಟವಾಯಿತು. ಪಶ್ಚಿಮ ಬಂಗಾಳ ಸರಕಾರ ಕೇಂದ್ರೀಯ ತಂಡದೊಡನೆ ಸಹಕರಿಸಲು ನಿರಾಕರಿಸಿ ಈ ಕಾನೂನುಬಾಹಿರ, ಸಂವಿಧಾನಬಾಹಿರ ಪ್ರಯತ್ನವನ್ನು ಬಯಲಿಗೆಳೆಯಿತು.

ರಾಜ್ಯಪಾಲರ ನೇಮಕದಲ್ಲೂ ಬಿಜೆಪಿಯ ದಾಖಲೆ ಉತ್ತಮವಂತೂ ಖಂಡಿತಾ ಇಲ್ಲ - ಕಾಂಗ್ರೆಸ್‌ನಷ್ಟೇ ಕೆಟ್ಟದಾಗಿದೆ. ತನ್ನ ಆರು ವರ್ಷಗಳ ಆಳ್ವಿಕೆಯಲ್ಲಿ ಆರ್‌ಎಸ್‌ಎಸ್ ವ್ಯಕ್ತಿಗಳಿಗೆ ರಾಜ್ಯಪಾಲರ ಹುದ್ದೆಗಳನ್ನು ನೀಡಲಾಯಿತು. ಉನ್ನತ ಆರ್‌ಎಸ್‌ಎಸ್ ವ್ಯಕ್ತಿಗಳಲೊಬ್ಬರಾದ ಸುಂದರ್ ಸಿಂಗ್ ಭಂಡಾರಿಯವರನ್ನು ರಾಬ್ರಿ ದೇವಿ ಸರ್ಕಾರವನ್ನು ಅಸ್ಥಿರಗೊಳಿಸುವ ಏಕೈಕ ಉದ್ದೇಶದಿಂದ ಬಿಹಾರಿಗೆ ಕಳಿಸಲಾಯಿತು.

ಝಾರ್ಖಂಡ್‌ನಲ್ಲಿ ಬಿಜೆಪಿ ಪಕ್ಷೇತರ ಶಾಸಕರನ್ನು ಖರೀದಿಸುತ್ತಾ, ಎನ್‌ಸಿಪಿಯಂತಹ ಪಕ್ಷಗಳಿಂದ ಕಾನೂನುಬಾಹಿರವಾಗಿ ಪಕ್ಷಾಂತರ ಮಾಡಿಸುತ್ತಾ ಹೊಲಸು ದಾಖಲೆಗಳನ್ನು ನಿರ್ಮಿಸುತ್ತಿದೆ. ಬಿಜೆಪಿಗೆ ಸೇರಿರುವ ಹೊಸ ವಿಧಾನಸಭಾಧ್ಯಕ್ಷ ಪಕ್ಷಾಂತರ-ವಿರೋಧಿ ಕಾನೂನಿನ ವ್ಯಾಪ್ತಿಯಲ್ಲಿರುವ ಅನರ್ಹಗೊಳಿಸುವ ಅರ್ಜಿಗಳನ್ನು ಬುಡಕ್ಕೆ ತಳ್ಳಿ ಕೂರುತ್ತಾನೆ ಎಂಬ ಬಗ್ಗೆ ಸಂದೇಹವಿಲ್ಲ. ಬಿಜೆಪಿ ತಾನು ಝಾರ್ಖಂಡ್‌ನಲ್ಲಿ ಮರಳಿ ಅಧಿಕಾರಕ್ಕೆ ಬಂದಿರುವ ಬಗ್ಗೆ ಉಬ್ಬಿ ಹೋಗಿದೆ. ಆದರೆ ಅದು ಭಾರೀ ನಷ್ಟದೊಂದಿಗೆ ಬಂದ ವಿಜಯ ಎಂಬುದು ಸಾಬೀತಾಗಲಿದೆ. ಪಕ್ಷಾಂತರಿಗಳ, ಸಮಯಸಾಧಕರ ಒಂದು ಸರ್ಕಾರವನ್ನು ರಚಿಸುವಲ್ಲಿನ ಸಮಯಸಾಧಕತನ ಬೇಗನೆ ಬಯಲಾಗಲಿದೆ. ಕಾಂಗ್ರೆಸ್‌ನ ಪ್ರಮಾದದಿಂದಾಗಿ ಬಿಜೆಪಿ ಒಂದು ತಾತ್ಕಾಲಿಕ ಅನುಕೂಲ ಪಡೆದಿದೆಯೆಂಬುದು ಚುನಾವಣಾ ಫಲಿತಾಂಶಗಳಿಂದ ಸ್ಪಷ್ಟವಾಗಿದೆ. ಬಿಜೆಪಿಯ

ಬಜೆಟ್ 2005-06 : ಇಲ್ಲದವರ ಹೆಸರು ಹೇಳುತ್ತ ಉಳ್ಳವರಿಗೆ ಅನುಕೂಲ ಮಾಡಿಕೊಡುವ ಬಜೆಟ್



ಕುರುಡು ಕಾಂಚಾಣ

ಜಿ.ಎಸ್.ಮಣಿ

2005-06 ನೇ ಸಾಲಿನ ಬಜೆಟ್ಟಿನ ಪರಿಭಾಷೆಯಲ್ಲಿ ಒಂದು ಸ್ವಾಗತಾರ್ಹ ಬದಲಾವಣೆ ಇದೆ. ವ್ಯತ್ಯಾಸವಿಷ್ಟೆ, ಹಿಂದಿನ ಬಜೆಟ್ ಭಾಷಣಗಳಲ್ಲಿ, ಉದಾರೀಕರಣದ ಅವಶ್ಯಕತೆಯ ಬಗಗೆ ವಿವರಗಳೇ ಇರುತ್ತಿದ್ದವು, ಈ ಭಾಷಣದಲ್ಲಿ ಗ್ರಾಮೀಣ ವಲಯ, ಉದ್ಯೋಗ ಸೃಷ್ಟಿ, ಕೃಷಿ ವಲಯದ ಪುನರುಜ್ಜೀವನ, ಅಂತರ್ರಚನಾ ಸೌಕರ್ಯಗಳು ಸಾರ್ವಜನಿಕ ಹೂಡಿಕೆ ಮತ್ತು ಸಾಮಾಜಿಕ ವಲಯದಲ್ಲಿನ ಖರ್ಚುಗಳ ಬಗಗೆ ಮಾತುಗಳು ಬಂದಿವೆ. ಎಡಪಕ್ಷಗಳು ಕೇಳಿದಷ್ಟು ಜನಪರ ಬಜೆಟ್ಟೇನೂ ಇದಲ್ಲ. ಆದರೂ ಮೇಲೆ ಕಾಣಿಸಿದ ಸಕಾರಾತ್ಮಕ ಅಂಶಗಳನ್ನು ಇದು ಒಳಗೊಂಡಿದೆ.

ಈ ಬಜೆಟ್ಟನ್ನು ನೋಡಿ ಜನಪರ ಶಕ್ತಿಗಳು ಖುಷಿ ಪಡುವಂತಹದೇನೂ ಇಲ್ಲ. ಗಣಿಗಾರಿಕೆ ಮತ್ತು ನಿವೃತ್ತಿ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗೆ ತೆರೆವ ಮಾತು ಆಹಾರ ದಾನ್ಯಗಳಲ್ಲಿನ ಸ್ವಾವಲಂಬನೆ ಹಾಳುಗೆಡಹುವ ಬೆಳೆ ವೈವಿಧ್ಯೀಕರಣಕ್ಕೆ ಪ್ರೋತ್ಸಾಹ, ಈಗಿರುವ ಆಹಾರ ಧಾನ್ಯ ಸಂಗ್ರಹಣೆ ವ್ಯವಸ್ಥೆಯ ದುರ್ಬಲೀಕರಣ, ಆಮದು ಶುಲ್ಕಗಳಲ್ಲಿ ಕಡಿತ, ಕಂಪನಿ ತೆರಿಗೆಯಲ್ಲಿ ಕಡಿತ, ಇತ್ಯಾದಿಗಳು ಜನವಿರೋಧಿ ಕ್ರಮಗಳು.

ಇದಲ್ಲದೆ ಆರ್ಥಿಕ ಸಮೀಕ್ಷೆ ನಮೂದಿಸಿರುವ ಬಂಡವಾಳ ಖಾತೆಯಲ್ಲಿನ ಪರಿವರ್ತನೆ, ಕಾರ್ಮಿಕ ವಲಯದ ಸುಧಾರಣೆ ಮತ್ತು ಪ್ರಧಾನ ಮಂತ್ರಿಗಳ ಇತ್ತೀಚಿನ "ಭಾರತ ಪ್ರಕಾಶಿಸುತ್ತಿದೆ" ತರಹದ ಹೇಳಿಕೆಗಳು, ನಿರ್ಮಾಣ ವಲಯದಲ್ಲಿ ಶೇ. 100 ವಿದೇಶೀ ನೇರ ಹೂಡಿಕೆಗಳಂತಹ ಕ್ರಮಗಳೆಲ್ಲ ಈ ಸರ್ಕಾರದ ಜನ ವಿರೋಧಿ ನೀತಿಗಳ ಉದಾಹರಣೆಗಳಲ್ಲಿ, ಅಂದರೆ ಯುಪಿಎ ಸರ್ಕಾರ ತನ್ನ ದಾರಿಯನ್ನು ಬದಲಾಯಿಸಿಲ್ಲ ಎಂಬುದು ಸ್ಪಷ್ಟ. ಇದಲ್ಲದೆ ಬಜೆಟ್ಟಿನ ಲೆಕ್ಕಾಚಾರದಲ್ಲೂ ಹಲವು ದೋಷಗಳಿವೆ.

ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣದ ಭ್ರಮೆ

ಗ್ರಾಮೀಣ ಅಭಿವೃದ್ಧಿಗೆ ತೆಗೆದಿರಿಸಿದ ಮೊತ್ತವನ್ನು ಕಳೆದ ಸಾಲಿನ 8589 ಕೋಟಿ ರೂಪಾಯಿಯಿಂದ ಈ ಸಾರಿಗೆ 11494 ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ. ಆದರೆ 2002-03ನೇ ಸಾಲಿನಲ್ಲಿ 11939 ಕೋಟಿ ರೂಪಾಯಿಗಳನ್ನು ಮತ್ತು 2004-04 ರ ಸಾಲಿನಲ್ಲಿ ತೆಗೆದಿರಿಸಲಾಗಿತ್ತು ಎಂಬುದನ್ನು ಗಮನಿಸಿದರೆ ಇಲ್ಲಿನ ಸುಳ್ಳು ಕಾಳಜಿ ಗೊತ್ತಾಗಿ ಬಿಡುತ್ತದೆ. ಗ್ರಾಮೀಣ ಉದ್ಯೋಗ ಹೆಚ್ಚಳಕ್ಕೆ ಬೆಂಬಲವೂ ಇದರಡಿ ಬರುವುದರಿಂದ ಅದರ ಮೇಲೆ ಎಂತಹ ಪರಿಣಾಮ ಉಂಟಾಗುತ್ತದೆ ಎಂಬುದನ್ನು ಊಹಿಸಿಬಿಡಬಹುದು.


ಒಂದೇ ಮಾತಿನಲ್ಲಿ ಹೇಳುವುದಾದರೆ ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ ಹೆಚ್ಚಿನ ಹಣಕಾಸು ಒದಗಿಸುವ ಮಾತನಾಡಿದ ಬಜೆಟ್ಟು ಗ್ರಾಮೀಣ ಅಭಿವೃದ್ಧಿಯ ಉಳಿದ ವಲಯಗಳಲ್ಲಿನ ಹೂಡಿಕೆಗಳ ಕಡಿತ ಮಾಡಿ ಇಲ್ಲಿಗೆ ಹೆಚ್ಚಿಗೆ ನೀಡಿದೆ.

ಈ ಸಾರಿಯ ಬಜೆಟ್ಟಿನ ವಿಚಿತ್ರವೆಂದರೆ ಇದು ಎಲ್ಲರಿಗೂ ತೆರಿಗೆ ಕಡಿತ ನೀಡಿದ ಮೇಲೂ ಎಲ್ಲ ತರಹದ ಅಭಿವೃದ್ಧಿಗೆ ಹಣ ಒದಗಿಸಿದಂತೆ ಕಾಣುವುದು. ಹಣಕಾಸಿನ ಖೋತಾವನ್ನು ಒಟ್ಟುತ್ಪಾದನೆಯ ಶೇ. 4.3ಕ್ಕೆ ಇಳಿಸುವ ಮಾತನ್ನು ಅದು ಆಡಿದೆ.

ಇಲ್ಲಿ ನಮ್ಮಲ್ಲಿ ಏಳುವ ಮುಖ್ಯ ಪ್ರಶ್ನೆ "ನಿನ್ನೆ ಮೊನ್ನೆಯವರೆಗೆ ಯುಪಿಎ ಸರ್ಕಾರದ ಕನಿಷ್ಟ ಸಾಮಾನ್ಯ ಕಾರ್ಯಕ್ರಮದ" ಅನುಷ್ಠಾನದ ಮಾತನಾಡಿದಾಗಲೆಲ್ಲ ಅದಕ್ಕೆ ಹಣವೆಲ್ಲಿದೆ" ಎಂದು ಕೇಳುತ್ತಿದ್ದ ಸರ್ಕಾರಕ್ಕೆ ಈಗ ಒಮ್ಮೆಲೇ ಹಣವೆಲ್ಲಿಂದ ಬಂತು ಎಂಬುದು.

ಈ ದೃಷ್ಟಿಯಿಂದ ಬಜೆಟ್ಟನ್ನು ಕೆದಕಿ ನೋಡಿದರೆ ಬಹಳ ಕಡೆ ಕಣ್ಕಟ್ಟು ಲೆಕ್ಕ ತೋರಿಸಿರುವುದು ಕಾಣುತ್ತದೆ.

ಎಲ್ಲ ತರಹದ ತೆರಿಗೆ ಕಡಿತ ನೀಡಿರುವ ಹಣಕಾಸು ಮಂತ್ರಿಗಳು ಪರೋಕ್ಷ ತೆರಿಗೆಗಳಿಂದಾಗಿ 600 ಕೋಟಿ ರೂಪಾಯಿಗಳ ಹೆಚ್ಚು ಆದಾಯ ಸಂಗ್ರಹಣೆ ಆಗುತ್ತದೆ ಎಂಬುದು ಒಪ್ಪುವ ಮಾತಲ್ಲ.



ಸಚಿವ ಚಿದಂಬರಂ

ಕೃಷಿಯೇತರ ವಲಯಗಳಲ್ಲಿ ನಿಜ ಬೆಳವಣಿಗೆ ಶೇ.9 ರಷ್ಟಾದರೆ ಶೇ.6ರಷ್ಟು ಹಣದುಬ್ಬರದ ದರವಿದ್ದರೆ ಬೆಳವಣಿಗೆ ಶೇ.15ರಷ್ಟಾಗುತ್ತದೆ. ತೆರಿಗೆ ಆದಾಯ172500 ಕೊಟಿ ರೂಪಾಯಿಗಳು ಈ ವ್ಯತ್ಯಾಸ ಯಾಕೆಂದರೆ ಈ ಸಾರಿಯಿಂದ 2ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಪ್ರಕಾರ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸಾಲ ನೀಡುವುದಿಲ್ಲ. ಬದಲಿಗೆ ರಾಜ್ಯ ಸರ್ಕಾರಗಳು ಸುಮಾರು 29,000 ಕೋಟಿ ರೂಪಾಯಿಗಳನ್ನು ಮಾರುಕಟ್ಟೆಯಿಂದ ನೇರವಾಗಿ ಎರವಲು ಪಡೆಯಬೇಕಾಗುತ್ತದೆ. ಸೂಕ್ಷ್ಮವಾಗಿ ನೋಡಿದರೆ ಇದು ಕೇಂದ್ರದ ಹಣಕಾಸು ಖೋತಾವನ್ನು ರಾಜ್ಯಗಳಿಗೆ ವರ್ಗಾಯಿಸುವ ಕ್ರಮವಾಗಿ ಕಾಣಿಸುತ್ತದೆ.

ಇದಲ್ಲದೆ ಇದರ ಅಪಾಯ ಬೇರೆ ರೀತಿಯಲ್ಲಿಯೂ ಆಗುತ್ತದೆ. ರಾಜ್ಯಗಳು ತಾವು ಪಡೆದ ಸಾಲಗಳಿಗೆ ಹೆಚ್ಚಿನ ಬಡ್ಡಿ ತರಬೇಕಾಗ ಬಹುದು. ಬ್ಯಾಂಕುಗಳ ಎಸ್.ಎಲ್.ಆರ್. ಅನ್ನು ತೆಗೆದು ಹಾಕುವುದರಿಂದ ಈ ಸಂಪನ್ಮೂಲ ರಾಜ್ಯಗಳಿಗೆ ಲಭ್ಯವಾಗಿರುವುದಿಲ್ಲ. ಇದು ದೇಶದ ಏಕತೆಗೂ ಧಕ್ಕೆಯುಂಟು ಮಾಡಬಹುದು.

ಇನ್ನೊಂದು ಅಂತರ್ರಚನಾ ಅಭಿವೃದ್ಧಿ ನಿಧಿಯ ಹೆಸರಿನಲ್ಲಿ ನಡೆಸುವಂತಹದ್ದು. ಈ ನಿಧಿಯ ಬಂಡವಾಳ 10,000 ಕೋಟಿ ರೂಪಾಯಿಗಳು ಸರ್ಕಾರ ನೇರ ಸಾಲ ಪಡೆವ ಬದಲು ಈ ನಿಧಿಯ ಮೂಲಕ ಪಡೆಯುತ್ತದೆ. ಆದ್ದರಿಂದ ಈ ಮೊತ್ತವನ್ನು ಬಜೆಟ್ಟಿನ ಹೊರಗಡೆಯೇ ಇಡಲಾಗಿದೆ.

ಮೂರನೇಯದು ಉದ್ಯೋಗ ಯೋಜನೆಯಲ್ಲಿ ಆಹಾರ ಭಾಗವನ್ನು ತೋರಿಸದೇ ಇರುವುದು ಬಜೆಟ್ಟಿನಲ್ಲಿ ಇದು ಬಾರದೇ ಇರುವುದರಿಂದ ಭಾರತ ಆಹಾರ ನಿಗಮದಿಂದ ನೇರ ಸಾಲವಾಗಿ ಪಡೆಯಲಾಗುತ್ತದೆ ಎಂದು ಅರ್ಥೈಸಬೇಕಾಗುತ್ತದೆ. ಹಣಕಾಸು ಖೋತಾದ ಈ ಭಾಗ ಬಜೆಟ್ಟಿನಿಂದ ಹೊರ ಬರುತ್ತದಲ್ಲವೆ.

ಒಂದು ಕಡೆ ಕಪನಿಗಳ ತೆರಿಗೆಯಲ್ಲಿ ಕಡಿತ ಇನ್ನೊಂದೆಡೆ ಹಣಕಾಸು ಖೋತಾವನ್ನು ಬಜೆಟ್ಟಿನಿಂದ ಬೇರೆಡೆಗೆ ವರ್ಗಾಯಿಸುವುದು ಎರಡೂ ಸೇರಿ ಬಹಳ ಅಪಾಯಕಾರಿ ಪರಿಣಾಮಗಳನ್ನು ಬೀರಬಹುದು. ರಾಜ್ಯ ಸರ್ಕಾರಗಳು ಸಾಲಗಳಿಗಾಗಿ ಎಡಿಬಿ ಮತ್ತು ವಿಶ್ವಬ್ಯಾಂಕ್‌ಗಳ ಮೇಲೆ ಅವಲಂಬಿತವಾಗಿ ಅವು ಹೇಳುವ ನೀತಿಗಳನ್ನು ಪಾಲಿಸತೊಡಗಬೇಕಾಗುತ್ತೆ. ಭಾರತ ಆಹಾರ ನಿಗಮ ಉದ್ಯೋಗಕ್ಕಾಗಿ ಆಹಾರ ಕಾರ್ಯಕ್ರಮಕ್ಕೆ ಸಾಲ ನೀಡಿದರೆ ಅದರ ಅಸ್ತಿತ್ವಕ್ಕೆ ದಕ್ಕೆ ಬರಬಹುದು. ಹೀಗೆ ಹಣಕಾಸು ಖೋತಾವನ್ನು ಬಜೆಟಿನ ಬದಲು ಬೇರೆಡೆ ಹೆಚ್ಚಿಸುತ್ತಿದ್ದರೆ ಸರ್ಕಾರ ಇವುಗಳ ಬಗ್ಗೆ ಸತತ ನಿಗಾ ಇಟ್ಟು ನಿರ್ವಹಿಸಿದರೆ ಸರಿ. ಇಲ್ಲವಾದರ ಪರಿಸ್ಥಿತಿ ಹದಗೆಡಬಹುದು.

ಹಣಕಾಸು ಉದಾರೀಕರಣ

ಹಣಕಾಸು ವಲಯದಲ್ಲಿನ ಈ ಎರಡು ಕ್ರಮಗಳು ಬಹಳ ಅಪಾಯಕಾರಿ ಮೊದಲನೆಯದು ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ಎಸ್‌ಎಲ್‌ಆರ್ ಮತ್ತು ಸಿಆರ್‌ಆರ್ ಗಳನ್ನು ತೆಗೆದುಹಾಕುವ ಬಗೆಗಿನದ್ದು. ಸರ್ಕಾರಿ ಬ್ಯಾಂಕುಗಳಿಗೆ ಹೆಚ್ಚಿನ ಸ್ವಾಯತ್ತತೆ ಕೊಡುವ ಪ್ರಯತ್ನವೂ ಇದಾಗಿವೆ. ಇಂತಹ ಉದಾರೀಕರಣ ನಮ್ಮ ಆರ್ಥಿಕಕ್ಕೆ ಅಪಾಯಕಾರಿಯಾಗುತ್ತದೆ. ಈ ಮೂಲಕ ಹಣಕಾಸು ವಲಯದಲ್ಲಿ ಸಟ್ಟಾ ವ್ಯವಹಾರಕ್ಕೆ ಅನುಕೂಲ ಮಾಡಿಕೊಡುವಂತಹದ್ದು ಇನ್ನೊಂದು.

ಇದಲ್ಲದೆ ವಿದೇಶೀ ನೇರ ಹೂಡಿಕೆಗೆ ಗಣಿಗಾರಿಕೆ ಮತ್ತು ನಿವೃತ್ತಿ ವೇತನ ನಿಧಿಗಳನ್ನು ತೆರೆದಿರಿಸುವದು.

ಬಹುರಾಷ್ಟ್ರೀಯ ಕಂಪನಿಗಳು ಗಣಿಗಾರಿಕೆಗೆ ಬಂದರೆ ಅವು ಅದುರನ್ನು ಸಾಗಿಸಿ ಕೊನೆಗೆ ಅದುರು ಖಾಲಿಯಾದಾಗ ದೇಶವನ್ನು ಬಿಡುತ್ತವೆ. ಮ್ಯಾನ್ಮಾರನಂತಹ ದೇಶಗಳು ಈ ಸಮಸ್ಯೆ ನಿವೃತ್ತಿ ವೇತನದ ನಿಧಿಗಳ ಕತೆಯಲ್ಲಿ ಅದೇ ಬಹುರಾಷ್ಟ್ರೀಯ ಕಂಪನಿಗಳು ಬಂದರೆ ಅವು ಹೆಚ್ಚಿನ ಆದಾಯ ತಂದುಕೊಡಬಲ್ಲವೆಂದು ಹೇಳುತ್ತಾರೆ. ಇದು ನಿಜ ಎಂದು ಒಂದು ಕ್ಷಣ ಒಪ್ಪಿಕೊಂಡರೂ ಭಾರತದಲ್ಲಿ ಜನರಿಗೆ ರಾಜಕೀಯ ಶಕ್ತಿ ಇರುವಷ್ಟು ಕಾನೂನಿನ ಶಕ್ತಿ ಇಲ್ಲ ಎಂಬುದನ್ನು ಗಮನಿಸಬೇಕು. ಇದಕ್ಕೆ ಭೂಪಾಲ ಅನಿಲ ಪೀಡಿತರದ್ದು ಒಂದು ಜ್ವಲಂತ ಉದಾಹರಣೆ.

ಆದ್ದರಿಂದಲೇ ಈ ಬಜೆಟ್ಟು ಎಲ್ಲರನ್ನು ಮೆಚ್ಚಿಸುವ ಒಂದು ಪ್ರಯತ್ನವಾಗಿದೆ ಎಂದು ಹೇಳಬಹುದು. ಬಹುರಾಷ್ಟ್ರೀಯ ಕಂಪನಿಗಳು, ದೇಶೀ ಬಂಡವಾಳಿಗರು, ಸಂಬಳದಾರರು, ಬಡವರು ಮತ್ತು ಗ್ರಾಮೀಣ ಜನ. ಆದರೆ ಇಂತ ಎಲ್ಲರನ್ನು ಮೆಚ್ಚಿಸುವ ಪ್ರಯತ್ನ ಕೊನೆಯಲ್ಲಿ ಉಳ್ಳವರಿಗೆ ಮಾತ್ರ ಅನುಕೂಲ ಮಾಡಿಕೊಡುತ್ತದೆ ಎಂಬುದೂ ಅಷ್ಟೇ ನಿಜ ಅಲ್ಲವೇ.

(ಪ್ರಭಾತ ಪಟ್ನಾಯಕರ ಲೇಖನದ ಸಂಗ್ರಹವಾದ ಜಿ.ಎಸ್.ಮಣಿಯವರಿಂದ)

ಜಾರ್ಖಂಡ್ ..... ಕೆಲವು ಪಾಠಗಳು

ಪುಟ 9 ರಿಂದ

ಚುನಾವಣಾ ಫಲಿತಾಂಶ ತೃಪ್ತಿ ಪಟ್ಟುಕೊಳ್ಳುವಂತದ್ದೇನೂ ಅಲ್ಲ. 2000 ರ ಚುನಾವಣೆಗಳಿಗೆ ಹೋಲಿಸಿದರೆ ಬಿಜೆಪಿ-ಜೆಡಿ(ಯು) ಮೈತ್ರಿಕೂಟ ಶೇ 30 ಮತ ಕಳಕೊಂಡಿದೆ. ಬಿಹಾರದಲ್ಲಿ ಅದು ಶೇ. 4.4 ರಷ್ಟು ಇಳಿದಿದೆ.

ವ್ಯಾಪಕ ಪ್ರಶ್ನೆಗಳು

ಅರ್ಜುನ್ ಮುಂಡಾರವರ ಅರ್ಜಿಯ ಮೇಲೆ ಸುಪ್ರೀಂಕೋರ್ಟ್ ನಿರ್ದೇಶನ ವ್ಯಾಪಕ ಸಾಂವಿಧಾನಿಕ ಪ್ರಶ್ನೆಗಳನ್ನು ಎತ್ತಿದೆ. ಇದು ಝಾರ್ಖಂಡ್ ಘಟನೆಯೊಂದಿಗೆ ಮುಕ್ತಾಯಗೊಳ್ಳುವುದಿಲ್ಲ. ಶಾಸಕಾಂಗ ಒಂದು ನಿರ್ದಿಷ್ಟ ರೀತಿಯಲ್ಲಿ ತನ್ನ ಕಲಾಪಗಳನ್ನು ನಡೆಸಬೇಕು ಎಂದು ನ್ಯಾಯಾಲಯ ನಿರ್ದೇಶಿಸಿರುವುದು, ತನ್ನ ನಿರ್ದೇಶನದಲ್ಲೇ ನಡೆಯದಿದ್ದರೆ ಮತ್ತುಷ್ಟು ಕ್ರಮದ ಬೆದರಿಕೆಯನ್ನು ಸೂಚಿಸಿರುವುದು ಸಾಂವಿಧಾನಿಕ ವ್ಯವಸ್ಥೆಯನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಅಧಿಕಾರಗಳನ್ನು ಪ್ರತ್ಯೇಕಿಸಿರುವುದನ್ನು ತಲೆಕೆಳಗು ಮಾಡುವುದಿಲ್ಲವೇ ಎಂಬ ಪ್ರಶ್ನೆಯನ್ನು ಎತ್ತುತ್ತದೆ. ಇತ್ತೀಚಿನ ವರ್ಷಗಳಲ್ಲಿ ನ್ಯಾಯಾಂಗದ ತೀರ್ಪುಗಳು ಕಾರ್ಯಾಂಗದ ಅಧಿಕಾರಗಳನ್ನು ಅತಿಕ್ರಮಿಸಿರುವುದನ್ನು ನೋಡಿದ್ದೇವೆ. ಈ ಪ್ರಸಕ್ತ ತೀರ್ಪು ಶಾಸಕಾಂಗಕ್ಕೆ, ನ್ಯಾಯಾಂಗ ನಿರ್ದೇಶನ ನೀಡಿ ತನ್ನ ಮಿತಿಯನ್ನು ದಾಟಿದೆ.

ಈ ಪ್ರಶ್ನೆಯನ್ನು ಚರ್ಚಿಸುವುದು ಹಾಗೂ ಸಾಂವಿಧಾನಿಕ ಯೋಜನೆಯನ್ನು ಸ್ಪಷ್ಟಪಡಿಸುವುದು, ರಕ್ಷಿಸುವುದು ಮಹತ್ವದ್ದಾಗುತ್ತದೆ. ಲೋಕಸಭಾಧ್ಯಕ್ಷರು ಎತ್ತಿರುವುದು ಈ ಪ್ರಶ್ನೆಯನ್ನೇ. ಅವರ ನಿಲುವಿನ ಮೇಲೆ ಬಿಜೆಪಿಯ ಧಾಳಿ ಶಾಸಕಾಂಗದ ನ್ಯಾಯಬದ್ಧ ಹಕ್ಕುಗಳ ಬಗ್ಗೆ ಅದರ ತಿರಸ್ಕಾರ ಭಾವವನ್ನು ಬಯಲು ಮಾಡಿದೆ. ಸಂವಿಧಾನದ ಪಾವಿತ್ರ್ಯದ ಬಗ್ಗೆ ಎಲ್.ಕೆ.ಅಡ್ವಾಣಿಯವರ ಉಪದೇಶಗಳನ್ನು ಕೇಳಿದಾಗ ತಮಾಷೆಯೆನಿಸುತ್ತದೆ. ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಪ್ರತಿಪಾದಿಸಿದವರು ಇದೇ ಅಡ್ವಾಣಿ ತಾನೇ? ಅಡ್ವಾಣಿಯ ಮಾತು ನಡೆಯುವುದಾದರೆ ನ್ಯಾಯಾಂಗ ಮತ್ತು ಶಾಸಕಾಂಗ ಅಧಿಕಾರಗಳಿಗೆ ಸಂಬಂದಪಟ್ಟಂತೆ ಸಮಸ್ಯೆಯೇ ಇರದು, ಏಕೆಂದರೆ ಅವನ್ನೆಲ್ಲಾ ಅವರು ಸರ್ವ-ಅಧಿಕಾರ ಸಂಪನ್ನ ಅಧ್ಯಕ್ಷನಿಗೇ ವಹಿಸಿರುತ್ತಾರೆ. ಆದರೆ ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಮತ್ತು ಇದರ ಹಿಂದೆ ಇರುವ ಸಾಂವಿಧಾನಿಕ ವ್ಯವಸ್ಥೆಯ ಬಗ್ಗೆ ಕಾಳಜಿ ಇರುವವರು ಶಾಸಕಾಂಗದ ನ್ಯಾಯಬದ್ಧ ಅಧಿಕಾರ ವಲಯವನ್ನು ರಕ್ಷಿಸಿಕೊಳ್ಳುವ ಹಾಗೂ ಪ್ರಭುತ್ವದ ಮೂರು ಅಂಗಗಳ ಅಧಿಕಾರಗಳನ್ನು ಪ್ರತ್ಯೇಕಿಸಿರುವುದನ್ನು ಕಾಯ್ದುಕೊಳ್ಳುವ ಪ್ರಶ್ನೆಯನ್ನು ಹಗುರವಾಗಿ ಕಾಣಲು ಸಾಧ್ಯವಿಲ್ಲ.

ಪೇಟೆಂಟ್ ದಾಳಿಗೆ ಒಂದು ತಡೆ.......

ಪುಟ 5 ರಿಂದ

ಡಿಸೆಂಬರ್ 26ರಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು. ಸುಗ್ರೀವಾಜ್ಞೆಯ ಬದಲಿಗೆ ಪೇಟೆಂಟ್(ಮೂರನೇ) ತಿದ್ದುಪಡಿ ಮಸೂದೆಯನ್ನು ಸರ್ಕಾರ ತಂದಿತು.

ನಿರ್ಣಾಯಕ ವಿಷಯಗಳಲ್ಲಿ ಸೂಚಿಸಲಾಗಿದ್ದ ತಿದ್ದುಪಡಿಗಳನ್ನು ಒಳಗೊಳ್ಳದೆ ಮಸೂದೆಯನ್ನು ಮಂಡಿಸಲಾಗಿದ್ದ ಕಾರಣ ಎಡ ಪಕ್ಷಗಳು ಅದನ್ನು ವಿರೋಧಿಸಿದ್ದವು. ಸರ್ಕಾರದೊಂದಿಗಿನ ಮಾತುಕತೆ ಹಾಗೂ ದೇಶಾದ್ಯಂತ ನಡೆಸಲಾದ ವ್ಯಾಪಕ ಪ್ರಚಾರಾಂದೋಲನದ ಮೂಲಕ ಎಡಪಕ್ಷಗಳು ನಿರ್ಮಿಸಿದ ನಿರಂತರ ಒತ್ತಡದಿಂದಾಗಿ ಮಸೂದೆಯ ಅಂಶಗಳ ಬಗ್ಗೆ ಸರ್ಕಾರ ಮರುಚಿಂತಿಸುವಂತಾಯಿತು. ನಿರಂತರ ಮಾತುಕತೆಗಳ ನಂತರ ಮಾರ್ಚ್ 22 ರಂದು ಸಂಸತ್ತಿನಲ್ಲಿ ಮಂಡಿಸಲಾದ ಮಸೂದೆಗೆ ಸಂಸತ್ತಿನಲ್ಲೇ ಅನೇಕ ತಿದ್ದುಪಡಿಗಳನ್ನು ಸರ್ಕಾರವು ಮಂಡಿಸಿತು. ಎಡ ಪಕ್ಷಗಳು ಪ್ರಸ್ತಾಪಿಸಿದ್ದ ಕೆಲವು ನಿರ್ಣಾಯಕ ಅಂಶಗಳು ಸರ್ಕಾರ ಮಂಡಿಸಿದ ತಿದ್ದುಪಡಿಗಳಲ್ಲಿ ಒಳಗೊಂಡಿತ್ತು.

ಎಡಪಕ್ಷಗಳು ವ್ಯಕ್ತಪಡಿಸಿದ್ದ ಒತ್ತಾಸೆಗಳನ್ನು ಸರ್ಕಾರ ಮಂಡಿಸಿದ ತಿದ್ದುಪಡಿಗಳ ಮೂಲಕ ಈ ಕೆಳಗಿನ ಅಂಶಗಳಲ್ಲಿ ಒಳಗೊಳ್ಳಲಾಗಿದೆ -

1. ಪೇಟೆಂಟ್ ಹಕ್ಕು ನೀಡುವಿಕೆ ಮೇಲೆ ನಿಯಂತ್ರಣಗಳು

ಎಲ್ಲಾ ವಲಯಗಳಲ್ಲೂ ಉತ್ಪನ್ನ ಪೇಟೆಂಟ್ ನೀಡಿದ ನಂತರ ಕ್ಷುಲ್ಲಕ ಹಾಗೂ ತಿರುಳಿಲ್ಲದ ಆಧಾರದ ಮೇಲೆ ನೀಡಲಾಗುವ ಪೇಟೆಂಟ್‌ಗಳಲ್ಲೇ ಮುಳುಗಿ ಹೋಗುವ ಗಂಭೀರ ಆತಂಕಗಳಿದ್ದವು. ನಿರ್ದಿಷ್ಟಗೊಳಿಸಲಾಗಿರುವ 20 ವರ್ಷಗಳ ನಂತರವೂ ಪೇಟೆಂಟ್ ಏಕಸ್ವಾಮ್ಯ ಪಡೆಯಲು ಮೂಲ ಕಣಗಳಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿ ಅದರಾಧಾರದಲ್ಲಿ ಪೇಟೆಂಟ್ ಹಕ್ಕುಗಳನ್ನು ಪಡೆಯುವ ಮೂಲಕ ಹಕ್ಕುಗಳನ್ನು ಶಾಶ್ವತಗೊಳಿಸಿಕೊಳ್ಳುವ ಅಪಾಯಕ್ಕಿದು ಎಡೆ ಮಾಡಬಹುದೆಂಬ ಆತಂಕಗಳಿದ್ದವು. ಸುಗ್ರೀವಾಜ್ಞೆಗೆ ಸರ್ಕಾರವು ಮಂಡಿಸಿರುವ ತಿದ್ದುಪಡಿಗಳ ಮೂಲಕ ತಿರುಳಿಲ್ಲದ ಕಾರಣಗಳ ಮೇಲೆ ಪೇಟೆಂಟ್ ಹಕ್ಕು ನೀಡುವ ವ್ಯಾಪ್ತಿಯನ್ನು ನಿಯಂತ್ರಿಸಲಾಗಿದೆ. **'ಶೋಧನೆಯ ಹೆಜ್ಜೆ'** ಕುರಿತು ಸ್ಪಷ್ಟಪಡಿಸಿರುವ ತಿದ್ದುಪಡಿಯು **'ಶೋಧನೆ'** ಎಂದರೆ **"ಪ್ರಚಲಿತ ಜ್ಞಾನಕ್ಕೆ ಹೋಲಿಸಿದಲ್ಲಿ ಅದಕ್ಕಿಂತ ಹೆಚ್ಚು ತಾಂತ್ರಿಕ ಮುನ್ನಡೆಯನ್ನು ಒಳಗೊಂಡ ಅಥವಾ ಆರ್ಥಿಕ ಮಹತ್ವವುಳ್ಳ ಅಥವಾ ಎರಡನ್ನೂ ಒಳಗೊಂಡ....."** ಎಂದು ಸ್ಪಷ್ಟಪಡಿಸಿದೆ. **'ನೂತನ ಶೋಧನೆ'**ಗೆ ಹೊಸ ವ್ಯಾಖ್ಯಾನವನ್ನು ತಿದ್ದುಪಡಿ ಒಳಗೊಂಡಿದೆ. ಅದನ್ನು ಸಂಪೂರ್ಣ ವಿವರದೊಂದಿಗೆ **"ಪೇಟೆಂಟ್ ಹಕ್ಕಿಗೆ ಅರ್ಜಿ ಸಲ್ಲಿಸುವ ಮುನ್ನ ಪ್ರಪಂಚದಲ್ಲಿ ಎಲ್ಲೆ ಆಗಲಿ ಅಥವಾ ಯಾವುದೇ ದೇಶದಲ್ಲಾಗಲೀ ಬಳಕೆಯಲ್ಲಿ ಇರದ ಅಥವಾ ಯಾವುದೇ ದಸ್ತಾವೇಜಿನಲ್ಲಿ ಪ್ರಕಟಗೊಳ್ಳುವುದೆಂದು ನಿರೀಕ್ಷಿಸಲಾಗದ ಯಾವುದೇ ಶೋಧನೆ ಅಥವಾ ತಂತ್ರಜ್ಞಾನ, ಅಂದರೆ ಸಾರ್ವಜನಿಕ ಗಮನಕ್ಕೆ ಒಳಪಡದ ವಸ್ತುವಿಷಯ ಅಥವಾ ಸಾಮಾಜಿಕ ಕಲೆಯ ಭಾಗವಾಗಿಲ್ಲದ್ದು"** ಎಂದು ವ್ಯಾಖ್ಯಾನಿಸಲಾಗಿದೆ. **'ಔಷಧೀಯ ವಸ್ತು'**ವನ್ನು **'ಒಂದು ಅಥವಾ ಹೆಚ್ಚು ಶೋಧನೆಯ ಹೆಜ್ಜೆಗಳನ್ನು ಒಳಗೊಂಡ ನೂತನ ಅಸ್ತಿತ್ವವುಳ್ಳ ವಸ್ತು'** ಎಂದು ತಿದ್ದುಪಡಿಯು ಪರಿಭಾಷಿಸಿದೆ.

ಪೇಟೆಂಟ್ ಹಕ್ಕನ್ನು ತಿರುಳಿಲ್ಲದ ಪ್ರತಿಪಾದನೆಗೆ ನೀಡುವುದನ್ನು ನಿರಾಕರಿಸುವ ಕ್ರಮಗಳನ್ನು ಬಲಗೊಳಿಸುವ ನಿಟ್ಟಿನಲ್ಲಿ ತಿದ್ದುಪಡಿಗಳು ಸ್ಪಷ್ಟಪಡಿಸುವುದೇನೆಂದರೆ **"ತಿಳಿದಿರುವ ಪರಿಣಾಮಕತ್ವ ಶಕ್ತಿ ವೃದ್ಧಿಸುವಲ್ಲಿ ಪರಿಣಮಿಸದ ಯಾವುದೇ ತಿಳಿದಿರುವ ವಸ್ತುವಿನ ಕೇವಲ ಹೊಸ ರೂಪದ ಶೋಧನೆಗೆ ಪೇಟೆಂಟ್ ಹಕ್ಕು ನೀಡಲಾಗದು"** ಎಂಬುದಾಗಿದೆ. ಮುಂದುವರಿದು ವಿವರಿಸುತ್ತಾ **"ಲವಣಗಳು, ಸಂಯುಕ್ತ ರಾಸಾಯನಿಕ ವಸ್ತುಗಳು, ಆಕಾಶ ದ್ರವ್ಯಗಳು, ಪಾಲಿಮಾರ್ಫ್ಸ್, ಮೆಟಾಬೊಲೈಟ್ಸ್, ಪ್ಯೂರ್ ಫಾರ್ಮ್, ಪಾರ್ಟಿಕಲ್ ಸೈಜ್, ಐಸೋಮರ್ಸ್, ಐಸೋಮರ್ಸ್‌ನ ಮಿಶ್ರಣಗಳು, ತಿಳಿದಿರುವ ವಸ್ತುಗಳ ಮಿಶ್ರಣಗಳು, ಕಾಂಪ್ಲೆಕ್ಸ್‌ಗಳು, ಮತ್ತಿತರೆ ಉತ್ಪನ್ನಗಳನ್ನು ಅದೇ ವಸ್ತುವೆಂದು ಪರಿಗಣಿಸುವುದು. ಅಂತಹವು ಆ ವಸ್ತುವಿನ ಪರಿಣಾಮಕತ್ವ ಶಕ್ತಿಯನ್ನು ಹಾಗೂ ಗುಣಲಕ್ಷಣಗಳನ್ನು ನಿರ್ಣಾಯಕವಾಗಿ ಮಾರ್ಪಡಿಸದ ಹೊರತು"** ಜೊತೆಯಲ್ಲೇ ತಿಳಿದಿರುವ ವಸ್ತುಗಳ ಹೊಸ ಬಳಕೆಯನ್ನು ಪೇಟೆಂಟ್‌ಗೊಳಿಸುವುದನ್ನು ನಿರಾಕರಿಸುವ ಅಂಶಗಳನ್ನು ಒಳಪಡಿಸುವ ನಿಟ್ಟಿನಲ್ಲಿ **"ಹೊಸ ಬಳಕೆ"** ಯೊಂದಿಗಿದ್ದ **'ಕೇವಲ'** ಎಂಬ ಪದವನ್ನು ತೆಗೆದುಹಾಕಲಾಗಿದೆ.

2. ಸಾಫ್ಟ್‌ವೇರ್ ಪೇಟೆಂಟ್ ಇಲ್ಲ

ತಾಂತ್ರಿಕ ಅಳವಡಿಕೆಯೊಂದಿಗಿನ ಪ್ರೋಗ್ರಾಂಗಳು ಮತ್ತು ಅದರೊಂದಿಗೆ ಹಾರ್ಡ್‌ವೇರ್‌ಗಳನ್ನು ಪೇಟೆಂಟ್‌ಗೊಳಿಸಲು ಅವಕಾಶ ಕಲ್ಪಿಸುವ ಮೂಲಕ ಸಾಫ್ಟ್‌ವೇರ್ ಪೇಟೆಂಟ್‌ಗಳಿಗೆ ಸುಗ್ರೀವಾಜ್ಞೆಯು ಅವಕಾಶ ಕಲ್ಪಿಸಿತ್ತು. ಇದನ್ನು ತಿದ್ದುಪಡಿಗಳ ಮೂಲಕ ಹಿಂದೆ ಪಡೆಯಲಾಯಿತು ಮತ್ತು ಸಾಫ್ಟ್‌ವೇರ್ ಪೇಟೆಂಟ್‌ಗಿದ್ದ ಆಯ್ಕೆಯನ್ನು ನಿರಾಕರಿಸಲಾಗಿದೆ.

3. ಪೇಟೆಂಟ್ ನೀಡಿಕೆ ಪೂರ್ವ ವಿರೋಧದ ಪುನರ್‌ಸ್ಥಾಪನೆ

ಪೇಟೆಂಟ್ ಹಕ್ಕು ನೀಡುವ ಮುನ್ನ ಅದನ್ನು ವಿರೋಧಿಸುವ ಅಸ್ತಿತ್ವವುಳ್ಳ ವಸ್ತುವಿನ ಸಾಮರ್ಥ್ಯವನ್ನು ಸುಗ್ರೀವಾಜ್ಞೆ ಸೀಮಿತಗೊಳಿಸಿದೆ ಎಂಬ ವ್ಯಾಪಕ ಆತಂಕಗಳಿದ್ದವು. ಸುಗ್ರೀವಾಜ್ಞೆಯು ವಿರೋಧಿಸಲು ಇದ್ದ ಕಾರಣಗಳನ್ನು 9 ರಿಂದ 2 ಕ್ಕೆ ಇಳಿಸಿತ್ತು ಮತ್ತು ವಿರೋಧಿಸುವವರ ಮುಖಃತಹವಾದ ಮಂಡನೆಗೆ ಅವಕಾಶ ಕಲ್ಪಿಸಿದ್ದ ಕಲಂನ್ನು ತೆಗೆದುಹಾಕಿತ್ತು. ಈಗ ಹೊಸ ತಿದ್ದುಪಡಿಯು ಹಿಂದಿನ ಮೂಲ ಕಾಯ್ದೆಯಲ್ಲಿದ್ದ ಈ ನಿಟ್ಟಿನ ಎಲ್ಲಾ ಅಂಶಗಳನ್ನು ಪುನರ್‌ಸ್ಥಾಪಿಸಿದೆ ಮತ್ತು ಪೇಟೆಂಟ್ ನೀಡಿಕೆಯನ್ನು ವಿರೋಧಿಸುವವರು ಮುಖಃತಹ ಅಭಿಪ್ರಾಯ ಮಂಡನೆ ಬಯಸಿದಲ್ಲಿ ನಿಯಂತ್ರಕರು ಅವರ ವಾದವನ್ನು ಕೇಳಬೇಕು....' ವಿರೋಧ ದಾಖಲಿಸಲು ಇದ್ದ ಅವಕಾಶವನ್ನು 3 ರಿಂದ 6 ತಿಂಗಳಿಗೆ ವಿಸ್ತರಿಸಲಾಗಿದೆ.

4. ಉತ್ಪಾದನಾ ಸಾಮರ್ಥ್ಯವಿರದ ದೇಶಗಳಿಗೆ ರಫ್ತು

ಉತ್ಪಾದನಾ ಸಾಮರ್ಥ್ಯವಿರದ ಅಭಿವೃದ್ಧಿಶೀಲ ದೇಶಗಳಿಗೆ ಯಾವುದೇ ದೇಶಗಳಲ್ಲಿನ ಕಡ್ಡಾಯ ಅನುಮತಿ ಮೂಲಕ ಉತ್ಪಾದಿಸುವ ಪೇಟೆಂಟ್ ಪಡೆದ ಔಷಧಿಗಳನ್ನು ರಫ್ತು ಮಾಡಲು ಸುಗ್ರೀವಾಜ್ಞೆಯು ಅವಕಾಶ ಕಲ್ಪಿಸಿತ್ತು. 2001ರ ದೋಹಾ ಘೋಷಣೆ ಹಾಗೂ ತದನಂತರದ TRIPS ಮಂಡಳಿಯ ಘೋಷಣೆಗೆ ಅನುಗುಣವಾಗಿ ಇದನ್ನು ಸೇರಿಸಲಾಗಿತ್ತು. ಆಮದು ಮಾಡಿಕೊಳ್ಳುವ ದೇಶಗಳು ಕಡ್ಡಾಯವಾಗಿ ಅನುಮತಿ ಪಡೆಯಬೇಕೆಂಬ ಶರತ್ತನ್ನು ಈ ಕಲಂಗೆ ಲಗತ್ತಿಸಲಾಗಿತ್ತು. ಈ ಕಲಂ ಜಾಗತಿಕ ಟೀಕೆಗೆ ಗುರಿಯಾಗಿತ್ತು. ನ್ಯೂಯಾರ್ಕ್ ಟೈಮ್ಸ್‌ನ ಎರಡು ಸಂಪಾದಕೀಯಗಳು ಇದನ್ನು ಟೀಕಿಸುತ್ತಾ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಭಾರತದಿಂದ ಆಮದು ಮಾಡಿಕೊಳ್ಳಲು ಇದು ತೊಡಕಾಗಲಿದೆ ಎಂದಿದ್ದವು. ತಿದ್ದುಪಡಿಗಳು ಸ್ಪಷ್ಟಪಡಿಸಿರುವ ಅಂಶಗಳೆಂದರೆ ಈ ದೇಶಗಳು ಈಗ ಭಾರತದಿಂದ ಆಮದು ಮಾಡಿಕೊಳ್ಳಬಹುದು. ಅದಕ್ಕೆ ಅವರು ಅಧಿಸೂಚನೆ ಹೊರಡಿಸಬೇಕಷ್ಟೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇದು ಭಾರತದಿಂದ ಆಮದು ಮಾಡಿಕೊಳ್ಳಲು ಅನುವುಗೊಳಿಸಲಾಗಿದೆ.

5. ಮೈಲ್ ಬಾಕ್ಸ್‌ನಲ್ಲಿ ಅರ್ಜಿಗಳಿರುವಾಗಲೇ ಔಷಧಿ ಉತ್ಪಾದನೆಯನ್ನು ಮುಂದುವರೆಸಬಹುದು - ಬೆಲೆ ಏರಿಕೆಯ ವಿಷವರ್ತುಲವಿರದು

ಸುಗ್ರೀವಾಜ್ಞೆ ಹೊರಡಿಸಿದ ನಂತರ ಬಹಳಷ್ಟು ಜನರ ಆತಂಕಕ್ಕೆ ಕಾರಣವಾಗಿದ್ದ ಅಂಶ ಎಂದರೆ ಪೇಟೆಂಟ್ ಹಕ್ಕಿಗಾಗಿ ಮೈಲ್ ಬಾಕ್ಸ್‌ನಲ್ಲಿ ಅರ್ಜಿಗಳಿದ್ದ ಔಷಧಿಗಳು, ಯಾವುದನ್ನು ಭಾರತದ ಕಂಪನಿಗಳೂ ಸಹ ತಯಾರಿಸುತ್ತಿದ್ದವೋ ಅಂತಹ ಔಷಧಿಗಳಿಗೆ ಒಮ್ಮೆ ಪೇಟೆಂಟ್ ಹಕ್ಕು ಸಿಕ್ಕಿದೊಡನೆ ಅವುಗಳು ಮಾರುಕಟ್ಟೆಯಿಂದ ಮಾಯವಾಗಲಿವೆ ಎಂಬುದು. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಪೇಟೆಂಟ್ ಏಕಸ್ವಾಮ್ಯವನ್ನು ಬಳಸಿ ಈ ಔಷಧಿಗಳ ಬೆಲೆಗಳನ್ನು ಏರಿಸಬಹುದೆಂಬ ಆತಂಕವು ಇತ್ತು. ಕ್ಯಾನ್ಸರ್‌ಗೆ ಔಷಧಿಯಾಗಿದ್ದ ಗ್ಲಿವ್ಯಾಕ್ ಯಾವುದಕ್ಕೆ 2003 ರಲ್ಲಿ ಎನ್‌ಡಿಎ ಸರ್ಕಾರವು ಸ್ವಿಡ್ಜರ್‌ಲ್ಯಾಂಡ್‌ನ ಬಹುರಾಷ್ಟ್ರೀಯ ಕಂಪನಿ ನೋವಾರ್ಟಿಸ್‌ಗೆ ಏಕಮಾತ್ರ ಮಾರುಕಟ್ಟೆ ಹಕ್ಕನ್ನು (EMR) ನೀಡಿತ್ತೋ ಅದರಿಂದಾಗಿ ಅದರ ಬೆಲೆಗಳು ಹತ್ತು ಪಟ್ಟು ಹೆಚ್ಚಲಿವೆ. ಹತ್ತಾರುಸಾವಿರ ರೋಗಿಗಳಿಗೆ ತೊಂದರೆಯಾಗಲಿದೆ ಎಂಬುದಿತ್ತು. ಭಾರತದ ಕಂಪನಿಗಳು ಈಗಾಗಲೇ ತಯಾರಿಸುತ್ತಿರುವ ಔಷದಿಗಳು ಪೇಟೆಂಟ್‌ನ ಅಡಿಯಲ್ಲಿ ಬಂದರೂ, 'ರಾಯಲ್ಟಿ'ಯನ್ನು ನೀಡಿ ಅವುಗಳ ತಯಾರಿಕೆಯನ್ನು ಮುಂದುವರಿಸುವ ಅವಕಾಶವನ್ನು ಹೊಸ ತಿದ್ದುಪಡಿಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಅದನ್ನು ಈ ಕೆಳಗಿನಂತೆ ಸೇರಿಸಲಾಗಿದೆ **"........ 1.1.2005ಕ್ಕಿಂತ ಮೊದಲು ಯಾವುದೇ ಉದ್ದಿಮೆಗಳು ಉತ್ಪಾದಿಸಿ ಮಾರಾಟ ಮಾಡುತ್ತಿದ್ದ ವಸ್ತುವಿಗೆ ಪೇಟೆಂಟ್ ದೊರೆತಲ್ಲಿ, ಆ ಉದ್ದಿಮೆಗಳು ಪೇಟೆಂಟ್ ಪಡೆದವರಿಗೆ ರಾಯಲ್ಟಿ ನೀಡಿ ತಮ್ಮ ವಸ್ತುವಿನ ಉತ್ಪಾದನೆಯನ್ನು ಮುಂದುವರಿಸಬಹುದು ಮತ್ತು ಅಂತಹ ಉದ್ದಿಮೆಗಳ ವಿರುದ್ಧ ಯಾವುದೇ ಉಲ್ಲಂಘನಾ ಕ್ರಮಗಳನ್ನು ಕೈಗೊಳ್ಳಲಾಗುವುದಿಲ್ಲ".**

6. ಕಡ್ಡಾಯ ಲೈಸೆನ್ಸ್ ಅರ್ಜಿಯನ್ನು ಪರಿಶೀಲಿಸಲು ಅವಧಿ ನಿಗದಿ:

ಪೇಟೆಂಟ್‌ಗಳ ಏಕಸ್ವಾಮ್ಯಧಿಪತ್ಯವನ್ನು ತಡೆಗಟ್ಟಲು ಕಡ್ಡಾಯ ಲೆಸೆನ್ಸ್‌ನ್ನು ನೀಡುವ ಪ್ರಕ್ರಿಯೆಗೆ ದೀರ್ಘಾವಧಿ ಹಿಡಿಯುವುದರಿಂದ ಇಡೀ ಉದ್ದೇಶವೇ ಕಡೆಗಣಿಸಲ್ಪಡುತ್ತದೆ ಎಂಬ ಕಳವಳ ಎಲ್ಲೆಡೆ ವ್ಯಕ್ತವಾಗಿತ್ತು. ಆದ್ದರಿಂದ **ಪೇಟೆಂಟ್ ಪಡೆದವರು, ಲೈಸೆನ್ಸ್‌ನ್ನು ತಿರಸ್ಕರಿಸಿದಾಗ ಪೇಟೆಂಟ್ ಕಂಟ್ರೋಲರ್‌ರವರು ಸೂಕ್ತ ಅವಧಿಯೊಳಗಡೆ ಅಂದರೆ 'ಸಾಮಾನ್ಯವಾಗಿ 6 ತಿಂಗಳಿಗೆ ಮೀರದಂತೆ' ಕಡ್ಡಾಯ ಲೈಸೆನ್ಸ್ ನೀಡುವುದರ ಬಗ್ಗೆ ಪರಿಶೀಲಿಸುತ್ತಾರೆ** ಎಂದು ತಿದ್ದುಪಡಿ ಮಾಡುವುದರ ಮೂಲಕ ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

7. ಪೇಟೆಂಟಿಗೆ ಒಳಪಟ್ಟ ಔಷಧಿಗಳನ್ನು ಭಾರತದ ಕಂಪನಿಗಳು ರಫ್ತು ಮಾಡುವುದು :

ಬೆಳವಣಿಗೆ ಹೊಂದುತ್ತಿರುವ ಬಡ ರಾಷ್ಟ್ರಗಳಿಗೆ ಭಾರತದಲ್ಲಿ ತಯಾರಾದ ಔಷಧಿಗಳು ಕಡಿಮೆ ದರದಲ್ಲಿ ದೊರೆಯುತ್ತಿರುವುದರಿಂದ ದೇಶದ ಪೇಟೆಂಟ್ ಕಾಯಿದೆ ಮತ್ತು ಅದರ ತಿದ್ದುಪಡಿಯು ಅಂತರರಾಷ್ಟ್ರೀಯ ಗಮನ ಸೆಳೆದಿತ್ತು. ಉದಾಹರಣೆಗೆ, ಹೆಚ್‌ಐವಿ-ಏಡ್ಸ್ ರೋಗಿಗಳಿಗೆ ಬೇಕಾಗುವ ಜಗತ್ತಿನ ಔಷಧಿಗಳಲ್ಲಿ ಶೇ 50 ರಷ್ಟು ಭಾರತದಿಂದ ಬರುತ್ತದೆ. ವಿಶ್ವ ಸಂಸ್ಥೆಯ 'ಏಡ್ಸ್' ವಿಭಾಗ ಮತ್ತು ವಿಶ್ವ ಆರೋಗ್ಯ ಸಂಘಟನೆಯಂತಹ ಹಲವಾರು ಅಂತರ್ರಾಷ್ಟ್ರೀಯ ಏಜೆನ್ಸಿಗಳು ಕಳೆದ ಕೆಲವು ತಿಂಗಳುಗಳಲ್ಲಿ ಈ ಕುರಿತು (ಭಾರತದ ಅಗ್ಗದ ಬೆಲೆಯ ಔಷಧಿಗಳು ಸಿಗುವುದಿಲ್ಲ ಎಂದು) ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿವೆ. ಈ ಹಿನ್ನೆಲೆಯಲ್ಲಿ ಕಡ್ಡಾಯ ಲೈಸೆನ್ಸ್ ಪದ್ಧತಿಯಲ್ಲಿ ಭಾರತದ ಕಂಪನಿಗಳು ಇಲ್ಲಿಯೇ ಉತ್ಪಾದಿಸುವ ಔಷಧಿಗಳ ಪೇಟೆಂಟ್ ಕುರಿತು ತಿದ್ದುಪಡಿಗಳಲ್ಲಿ ಹೀಗೆ ಹೇಳಲಾಗಿದೆ **"ಪ್ರಧಾನವಾಗಿ ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಲೈಸೆನ್ಸ್‌ನ್ನು ನೀಡಲಾಗಿದೆ. ಆದರೆ ಸೆಕ್ಷನ್ 84(7)(A) (111) (ರಫ್ತು ಮಾರುಕಟ್ಟೆ ಇರುವ ಸಂದರ್ಭದಲ್ಲಿ) ರ ಪ್ರಕಾರ ಪೇಟೆಂಟ್ ಆಗಿರುವ ಉತ್ಪಾದನೆಯನ್ನು ಕೂಡಾ ಲೈಸೆನ್ಸ್‌ದಾರರು ರಫ್ತು ಮಾಡಬಹುದಾಗಿದೆ".**

ಎಡಪಕ್ಷಗಳು ಒತ್ತಾಯಿಸಿದ ಎರಡು ತಿದ್ದುಪಡಿಗಳನ್ನು ಸರ್ಕಾರ ಒಪ್ಪಲಿಲ್ಲ. ಸೂಕ್ಷ್ಮ ಜೀವಿಗಳ ಕುರಿತು ಪೇಟೆಂಟ್‌ನ ವ್ಯಾಪ್ತಿಯಿಂದ ಹೊರಗಿಡಬೇಕು ಮತ್ತು ಹೊಸ ವಸ್ತುಗಳ ಬಗ್ಗೆ ವ್ಯಾಖ್ಯಾನ ಇರಬೇಕು ಎಂದು ನಾವು ಬಯಸಿದ್ದೆವು. ಹಾಗೂ ಇದಕ್ಕೆ ಸಾಕಷ್ಟು ಒತ್ತಾಯ ಮಾಡಿದಾಗ, ಸರ್ಕಾರವು ತಜ್ಞರ ಸಮಿತಿಗೆ ಒಪ್ಪಿಸುವುದಾಗಿಯೂ ಮತ್ತು ಶಿಫಾರಸ್ಸುಗಳನ್ನು ಪರಿಶೀಲಿಸುವುದಾಗಿಯೂ ಲೋಕಸಭೆಯಲ್ಲಿ ಭರವಸೆ ನೀಡಿದೆ.

ಪೇಟೆಂಟ್ ಕಾಯಿದೆಗೆ ಹೊಸ ತಿದ್ದುಪಡಿಗಳನ್ನು ಸೇರಿಸಲು ಸಾಧ್ಯವಾದುದು, ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಲು ಪ್ರಚಾರ ನಡೆಸಿದ ಎಲ್ಲರಿಗೂ ಪ್ರಮುಖವಾದ ಬೆಳವಣಿಗೆ ಎಂದು ಎಡಪಕ್ಷಗಳು ಭಾವಿಸುತ್ತವೆ. ಅದೇ ಸಂದರ್ಭದಲ್ಲಿ ಇದೊಂದು ಹೋರಾಟದ ಸಣ್ಣ ವಿಜಯ ಮಾತ್ರ. ಅಂತಿಮವಾಗಿ 'ಟ್ರಿಪ್ಸ್' ಒಪ್ಪಂದವನ್ನೇ ಕಿತ್ತುಹಾಕಬೇಕಾಗಿದ್ದು, ಅದನ್ನು ವಿಶ್ವ ವ್ಯಾಪಾರ ಸಂಘಟನೆ(WTO) ವ್ಯಾಪ್ತಿಯಿಂದ ಹೊರತರಬೇಕು. ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವ ರಾಷ್ಟ್ರೀಯ ಕಾನೂನುಗಳನ್ನು ಜಾರಿಗೆ ತರಲು ಟ್ರಿಪ್ಸ್ ಒಪ್ಪಂದವು ತಡೆ ಉಂಟು ಮಾಡುತ್ತದೆ. ಆದ್ದರಿಂದ ಈ ಒಪ್ಪಂದವನ್ನು ಕಿತ್ತುಹಾಕದೆ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವುದು ಸಾಧ್ಯವಿಲ್ಲ ಎಂದು ಎಡಪಕ್ಷಗಳು ಭಾವಿಸುತ್ತವೆ.

ಬೌದ್ಧಿಕ ಆಸ್ತಿ ಹಕ್ಕುಗಳ (IPR) ಕುರಿತು ಇಂದಿನ ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಇನ್ನೂ ಇದೆ ಎಂಬುದನ್ನು ಎಡಪಕ್ಷಗಳು ಸ್ಪಷ್ಟಪಡಿಸುತ್ತವೆ. ಈ ಕುರಿತು ಭಾರತದ ಜನತೆಗೆ ಅನುಕೂಲವಾಗುವಂತೆ ಪರಿವರ್ತಿಸಲು, ಜನರನ್ನು ಅಣಿ ನೆರೆಸುವುದರ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಅದೇ ಸಂದರ್ಭದಲ್ಲಿ ಪೇಟೆಂಟ್ ಕಾಯಿದೆಗೆ ತಿದ್ದುಪಡಿ ಮಾಡಲು ಸಾಧ್ಯವಾಗಿರುವುದರಿಂದ ಇದರ ಲಾಭವನ್ನು ಜಾರಿಯಾಗುವಂತೆ ಮಾಡಲು ಎಡಪಕ್ಷಗಳು ತೀವ್ರ ನಿಗಾ ವಹಿಸಬೇಕಾಗಿದೆ.

ಕೊನೆಯದಾಗಿ ಬಿಜೆಪಿ ಅನುಸರಿಸಿದ ದ್ವಂದ್ವನೀತಿಯ ವಂಚನೆಯ ಬಗ್ಗೆ ಹೇಳಲೇಬೇಕಾಗಿದೆ. ಸುಗ್ರೀವಾಜ್ಞೆ ಹೊರಬಿದ್ದಾಗ ಕುರುಡು ಮೌನವನ್ನು ವಹಿಸಿದ ಬಿಜೆಪಿ, ಕೊನೆಯ ಒಂದು ವಾರದಲ್ಲಿ ಮಾತ್ರವೇ ವಿರೋಧ ವ್ಯಕ್ತಪಡಿಸಲು ಆರಂಭಿಸಿತು. ಕಳೆದ ಕೆಲವಾರು ತಿಂಗಳುಗಳಲ್ಲಿ ಸುಗ್ರೀವಾಜ್ಞೆಯ ವಿರುದ್ಧ ದೇಶದಾದ್ಯಂತ ಹೋರಾಟ ನಡೆಸಲು ನೀಡಿದ್ದ ಕರೆಯನ್ನು ಬಿಜೆಪಿ ತಿರಸ್ಕರಿಸಿತು. 1999 ಮತ್ತು 2002 ರಲ್ಲಿ ಪೇಟೆಂಟ್ ಕಾಯಿದೆಗೆ ತಿದ್ದುಪಡಿ ತಂದದ್ದು ಹಾಗೂ ಇಂದಿನ ಮಸೂದೆಯ ಕರಡನ್ನು ತಯಾರಿಸಿದ್ದು ಇದೇ ಬಿಜೆಪಿ ಎಂಬುದನ್ನು ನಾವು ಮರೆಯುವಂತಿಲ್ಲ. ಈಗ ಸಂಸದೀಯ ಸಮಿತಿಗೆ (JPC) ಮಸೂದೆಯನ್ನು ಒಪ್ಪಿಸಬೇಕು ಎಂದು ಹೇಳುವ ಮೂಲಕ ಜನರನ್ನು ತಪ್ಪು ದಾರಿಗೆಳೆಯಲು ಬಿಜೆಪಿ ಬಯಸುತ್ತಿದೆ. 2002 ರಲ್ಲಿ ಸಂಸದೀಯ ಸಮಿತಿಯ ಸಭೆಯಲ್ಲಿ ಎಡಪಕ್ಷಗಳ ತೀವ್ರ ವಿರೋಧದ ನಡುವೆಯೂ ಪೇಟೆಂಟ್ ಕಾಯಿದೆಗೆ ತಿದ್ದುಪಡಿ ತರಲಾಯಿತು. ಅದರಲ್ಲಿ ಆಗಿದ್ದ ಗಂಭೀರ ತಪ್ಪುಗಳಲ್ಲಿ ಕೆಲವನ್ನು ಈಗ ತಿದ್ದುಪಡಿ ಮಾಡಲು ಸಾಧ್ಯವಾಗಿದೆ. ಆದ್ದರಿಂದ ಬಿಜೆಪಿಯ ವಿರೋಧ ಎನ್ನುವುದು ಕೇವಲ ವಂಚನೆ. ○

ಬೆಂಗಳೂರಿನಲ್ಲಿ ಚವೇಜ್ - 'ತೈಲ ಸಮಾನತೆಯ ಸಾಧನ'

ವೆನೆಜುವೆಲಾ ಅಧ್ಯಕ್ಷ ಹ್ಯೂಗೋ ಚವೇಝ್ ಬೆಂಗಳೂರು ಭೇಟಿ ಸಹ 'ಚಾರಿತ್ರಿಕ'ವಾಗಿತ್ತು. ಇನ್ಫೋಸಿಸ್ ಮತ್ತಿತರ ಐಟಿ ಕಂಪನಿ, ಎಚ್‌ಎಎಲ್ ವಿಮಾನ ಕಾರ್ಖಾನೆಗೆ ಭೇಟಿ ನೀಡಿದರು. ಕರ್ನಾಟಕ ಕೈಗಾರಿಕೆ-ವಾಣಿಜ್ಯ ಚೇಂಬರ್ ಏರ್ಪಡಿಸಿದ್ದ ಸಭೆಯಲ್ಲಿ, ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿದರು. ಭಾರತದಲ್ಲಿದ್ದಾಗ ಭಾರತೀಯ ಪತ್ರಿಕೆಗೆ ಕೊಟ್ಟ ಏಕಮಾತ್ರ ಸಂದರ್ಶನ 'ದಿ ಹಿಂದೂ' ನಲ್ಲಿ ಪ್ರಕಟವಾಯಿತು. ಈ ಹಲವು ಸಂದರ್ಭಗಳು ಚವೇಝ್‌ರ ಉಲ್ಲೇಖನೀಯ ಉತ್ಸಾಹದಾಯಕ ಮಾತುಗಳು

ಶಕ್ತಿಯ ಗುಟ್ಟು - ತೈಲವಲ್ಲ!

ಪತ್ರಿಕಾ ಸಮ್ಮೇಳನದಲ್ಲಿ ಒಬ್ಬ ಪತ್ರಕರ್ತ ಕೇಳಿದನಂತೆ 'ನಿಮ್ಮಶಕ್ತಿಯ ಗುಟ್ಟು ಏನು?' ಚವೇಝ್ ಥಟ್ಟನೆ ಹೇಳಿದರಂತೆ 'ತೈಲ ಖಂಡಿತ ಅಲ್ಲ. ನನ್ನ ಕೆಲಸದಲ್ಲಿ ಇರುವ ದೃಢ ನಂಬಿಕೆ'. ತೈಲ ಎಂಬ ಉತ್ತರ ಬರಬಹುದು ಅಥವಾ ಚವೇಝ್ ತಬ್ಬಿಬ್ಬಾಗಬಹುದು ಎಂದು ನಿರೀಕ್ಷಿಸಿದ್ದ ಪತ್ರಕರ್ತ ಪೆಚ್ಚಾಗಿದ್ದನಂತೆ.

ತೈಲ ಸಮಾನತೆಯ ಸಾಧನ

ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಿಗೆ ಭೇಟಿ ಚವೇಝ್ ತಂಡದ ನಾಲ್ಕು ದಿನಗಳ ಭಾರತ ಭೇಟಿಯ ಮುಖ್ಯ ಅಂಶವಾಗಿತ್ತು. ಅದರ ಬಗ್ಗೆ ಮಾತನಾಡುತ್ತಾ ಹೇಳಿದರು

"ನಾವು ಭಾರತದ ಆತ್ಮ ಮುಟ್ಟಿದೆವು. ಭಾರತವೂ ನಮ್ಮನ್ನು ಅತ್ಯಂತ ಆಳದಲ್ಲಿ ಕಲಕಿತು... ಎಲ್ಲಾ ಮಕ್ಕಳು ಖುಶಿಯಾಗಿರಬೇಕು ಎಂದು ನಾನು ಬಯಸುತ್ತೇನೆ. ಅವರು ಎಂದೂ ಹಸಿದಿರಬಾರದು. ಅವರ ಹೊಟ್ಟೆ ತುಂಬಿರಬೇಕು. ಸಣ್ಣದಾದರೂ ಚೊಕ್ಕವಾದ ಮನೆಯಲ್ಲಿ ಅವರಿರಬೇಕು. ಎಲ್ಲಾ ಮಹಿಳೆಯರು ತಮ್ಮ ಮಕ್ಕಳನ್ನು ಆತ್ಮಗೌರವದ ಸನ್ನಿವೇಶದಲ್ಲಿ ಬೆಳೆಸುವುದು ಸಾಧ್ಯವಾಗಬೇಕು. ತಮ್ಮ ಹೊಲಗಳಲ್ಲಿ ಕೆಲಸ ಮಾಡುತ್ತಾ, ಅದರ ಫಲ ಉಣ್ಣುತ್ತಾ ಸುಖವಾಗಿರಬೇಕು..... ಬಡತನ, ಹಸಿವು ಮತ್ತು ರೋಗು ರುಜಿನಗಳು ನಿಜವಾಗಿಯೂ ಸಾಮೂಹಿಕ ನಾಶದ ಮಾರಕಾಸ್ತ್ರಗಳು. ... ನಾವು ನಮ್ಮ ದೇಶದ ತೈಲ ಸಂಪತ್ತನ್ನು ಜಗತ್ತಿನಲ್ಲಿ ಬೆಳವಣಿಗೆ ಮತ್ತು ಸಮಾನತೆ ಸಾಧಿಸುವ ಸಾಧನವಾಗಿ ಬಳಸಲು ಸಂಕಲ್ಪ ಮಾಡಿದ್ದೇವೆ....."

ದಕ್ಷಿಣ ಅಮೆರಿಕಾ ಎದ್ದು ನಿಂತಿದೆ

'ದಿ ಹಿಂದೂ' ಪತ್ರಿಕೆಯ ಪಾರ್ವತಿ ಮೆನನ್‌ಗೆ ಕೊಟ್ಟ ಸಂದರ್ಶನದ ಆಯ್ದ ಭಾಗಗಳು


ಹೆಚ್‌ಎಎಲ್ ಭೇಟಿ ಸಂದರ್ಭದಲ್ಲಿ

ಪಾರ್ವತಿ : ನಿಮ್ಮ ಭೇಟಿಗೆ ಎರಡು ಉದ್ದೇಶಗಳಿದ್ದವು ಅಂತ ಕಾಣುತ್ತದೆ. ಆರ್ಥಿಕ ಸಂಬಂಧಗಳನ್ನು ಸ್ಥಾಪಿಸುವುದು, ಇಂದಿನ ಏಕ ಧ್ರುವೀಯ ಜಗತ್ತಿನಲ್ಲಿ ರಾಜಕೀಯ ಮೈತ್ರಿ ಸಾಧಿಸುವುದು, ಎಷ್ಟರಮಟ್ಟಿಗೆ ಈ ಉದ್ದೇಶಗಳು ಈಡೇರಿದವು.

ಚವೇಝ್: ಇಂಡಿಯಾ ಮತ್ತು ವೆನೆಜುವೆಲಾ ನಡುವೆ ಸಂಬಂಧ ಸ್ಥಾಪಿಸುವ ಪ್ರಕ್ರಿಯೆ ಆರಂಭಿಸಿದ್ದೇವೆ. ಏಕ-ಧ್ರುವೀಯ ಜಗತ್ತು ಬದಲಾಯಿಸುವ ದೃಷ್ಟಿಯಿಂದ ಇದು ತುಂಬಾ ಸಕಾರಾತ್ಮಕ.ಇದೆ ನಿಟ್ಟಿನಲ್ಲಿ ರಶ್ಯಾ, ಚೀನಾ ಜತೆ ಮೈತ್ರಿ ಸಾಧಿಸಿದ್ದೇವೆ. ದಕ್ಷಿಣ ಅಮೆರಿಕಾದ ದೇಶಗಳ ಒಕ್ಕೂಟ ಕಟ್ಟಿದ್ದೇವೆ. ಬ್ರೆಜಿಲ್ ಮತ್ತು ಅರ್ಜೆಂಟಿನಾಗಳ ಜತೆ ವ್ಯೂಹಾತ್ಮಕ ಸಂಬಂಧ ಸ್ಥಾಪಿಸಲಾಗಿದೆ. ಈಗ ಭಾರತದ ಜತೆ ಅಂತಹುದೇ ಸಂಬಂಧ ಸ್ಥಾಪಿಸಲಾಗಿದೆ. ನಾಲ್ಕು ದಿನಗಳಲ್ಲಿ ನಮ್ಮ ಉದ್ದೇಶ ಈಡೇರಿದೆ. ಅದನ್ನು ನನಸಾಗಿಸಲು ನಾವು ದುಡಿಯಬೇಕಾಗಿದೆ.

ಪಾರ್ವತಿ: ಲ್ಯಾಟಿನ್ ಅಮೆರಿಕಾದ ಪ್ರಗತಿಪರ ದೇಶಗಳ ಕೂಟ ರಚಿಸುವ ನಿಮ್ಮ ಗಂಭೀರ ಪ್ರಯತ್ನಗಳನ್ನು ಇಡೀ ಜಗತ್ತು ಆಸಕ್ತಿಯಿಂದ ನೋಡುತ್ತಿದೆ. ನಿಮ್ಮ ತೈಲ ಸಂಪತ್ತಿನ ಮಾರುಕಟ್ಟೆಯನ್ನು ಬೇರೆ ದೇಶಗಳಿಗೆ ಬದಲಾಯಿಸುತ್ತಾ, ಅಮೆರಿಕದ ಮೇಲೆ ಅವಲಂಬನೆ ಕಡಿಮೆ ಮಾಡುವುದು ಅದರ ಉದ್ದೇಶ ಎನ್ನಲಾಗಿದೆ. ಈ ಪ್ರಯತ್ನ ಮಹತ್ವ, ಮಿತಿಗಳ ಬಗ್ಗೆ ಹೇಳುತ್ತೀರಾ?

ಚವೇಝ್: ಇದು ಬರಿಯ ಕೂಟ ರಚನೆಗಿಂತ ದೊಡ್ಡ ಪ್ರಯತ್ನ. ಬೊಲಿವರ್ ಮತ್ತು ಹಲವು ಇತರ ಕ್ರಾಂತಿಕಾರಿಗಳ ಕನಸಾಗಿದ್ದ ಲ್ಯಾಟಿನ್ ಅಮೆರಿಕದ ದೇಶಗಳ ಒಕ್ಕೂಟವನ್ನು ನನಸು ಮಾಡಲು ನಾವು ಹೊರಟಿದ್ದೇವೆ. ಇಡೀ ದಕ್ಷಿಣ ಅಮೆರಿಕದ ದೇಶಗಳ ಒಕ್ಕೂಟಕ್ಕೆ ಪ್ರಯತ್ನಿಸುತ್ತಿದ್ದೇವೆ. ಕಳೆದ ಕೆಲವು ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಭಾರಿ ಪ್ರಗತಿ ಆಗಿದೆ. ಗಂಭೀರ ತೊಡಕು, ಸಂಕಷ್ಟಗಳನ್ನು ಎದುರಿಸಬೇಕಾಗಿದೆ. ಅತ್ಯಂತ ದೊಡ್ಡ ತೊಡಕು ಅಮೆರಿಕ ಸಂಯುಕ್ತ ಸಂಸ್ಥಾನದ ಧೋರಣೆ. ಹಿಂದೆ ಯಾವತ್ತೂ ಲ್ಯಾಟಿನ್ ಅಮೆರಿಕದ ದೇಶಗಳ ಐಕ್ಯತೆಯನ್ನು ಮುರಿಯುವುದರಲ್ಲಿ ಆ ದೇಶ ಸಫಲವಾಗಿದೆ. ಇಂದು ಆ ದೇಶ ಹೆಚ್ಚು ಆಕ್ರಾಮಕವಾಗಿದೆ. ಆರ್ಥಿಕ ಮತ್ತು ರಾಜಕೀಯ ಕ್ರಮ ಕೈಗೊಂಡಿದೆ. ಲ್ಯಾಟಿನ್ ಅಮೆರಿಕದ ದೇಶಗಳ ಐಕ್ಯತೆ ಮುರಿಯುವ ಗುಟ್ಟಾದ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದುವರೆಗೆ ನಾವು ಈ ಪ್ರಯತ್ನಗಳನ್ನು ವಿಫಲ ಮಾಡಿದ್ದೇವೆ. ಇನ್ನೂ ಮುಂದೆಯೂ ಅದನ್ನು ವಿಫಲ ಮಾಡುವುದು ನಮಗೆ ಸಾಧ್ಯವಾಗುತ್ತದೆ ಎಂದು ನಂಬಿದ್ದೇವೆ. ಏಕೆಂದರೆ ಐಕ್ಯತೆಯ ಕನಸು ಬರಿಯ ನನ್ನೊಬ್ಬನ ಅಥವಾ ಕೆಲವು ದೇಶಗಳ ನಾಯಕರು ಮತ್ತು ಅಧ್ಯಕ್ಷರುಗಳದ್ದು ಆಗಿಲ್ಲ. ಇಡೀ ದಕ್ಷಿಣ ಅಮೆರಿಕದ ಜನ ಎದ್ದು ನಿಂತಿದ್ದಾರೆ ಈ ಕನಸು ನನಸಾಗಿಸಲು.

ಪಾರ್ವತಿ : ನಿಮ್ಮ ವಿರೋಧಿಗಳು ಮಾಧ್ಯಮಗಳನ್ನು ನಿಯಂತ್ರಿಸುವ, ಪತ್ರಿಕಾ ಸ್ವಾತಂತ್ರ್ಯ ಮೊಟಕು ಮಾಡುವ ಕಾನೂನು ತಂದಿದ್ದೀರಿ ಎಂದು ಆಪಾದಿಸುತ್ತಿದೆ. ಈ ಆಪಾದನೆಗಳಿಗೆ ನೀವು ಏನನ್ನುತ್ತೀರಿ?

ಇದು ಮಾದಕ ದ್ರವ್ಯಗಳ ವ್ಯಾಪಾರಿ ಮಾದಕ ದ್ರವ್ಯ-ವಿರೋಧಿ ಕಾನೂನು ವಿರೋಧಿಸುವಂತೆ - ಅದು ತನ್ನ ವ್ಯಾಪಾರಕ್ಕೆ ತೊಂದರೆಯಾಗುತ್ತದೆ ಅಂತ ಈಗ ತಂದಿರುವ ಕಾನೂನು ಕಳೆದ 50 ವರ್ಷಗಳಿಂದ ವೆನೆಜುವೆಲಾದಲ್ಲಿ ಬರಬೇಕಾಗಿದ್ದ ಕಾನೂನು. ಅದನ್ನು ನಾವು ತಂದಿದ್ದೇವೆ. ಇಷ್ಟು ವರ್ಷಗಳ ಕಾಲ ಈ ಖಾಸಗಿ ಮಾಧ್ಯಮಗಳ ಕಪಿಮುಷ್ಟಿಯಲ್ಲಿದ್ದ ನಮ್ಮ ಜನಮಾನಸವನ್ನು ನಾವು ಬಿಡುಗಡೆ ಮಾಡ ಹೊರಟಿದ್ದೇವೆ ಅಷ್ಟೆ.

ಹದಿನೆಂಟನೆಯ ಮಹಾಧಿವೇಶನದತ್ತ......

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಮೋಘ ಜನಸ್ಪಂದನೆ

18ನೇ ಮಹಾಧಿವೇಶನ ಸಿಪಿಐ(ಎಂ)

ಸಿಪಿಐ(ಎಂ)ನ ಹದಿನೆಂಟನೇ ಮಹಾಧಿವೇಶನ ನವದೆಹಲಿಯಲ್ಲಿ ಏಪ್ರಿಲ್ 6 ರಿಂದ 11 ರವರೆಗೆ ನಡೆಯಲಿದೆ. ಇದಕ್ಕೆ ಪೂರ್ವಭಾವಿಯಾಗಿ ರಾಷ್ಟ್ರದ ರಾಜಧಾನಿಯಲ್ಲಿ ಮಾರ್ಚ್ 9 ರಿಂದ 18 ರವರೆಗೆ ಹತ್ತು ದಿನಗಳ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಸಂಘಟಿಸಲಾಯಿತು.

'ಸಫ್ದರ್ ಹಾಶ್ಮಿ ಜನ ಸಾಂಸ್ಕೃತಿಕ ಮುಂದತಿ' ಎಂದು ಹೆಸರಿದ್ದ ಈ ಕಾರ್ಯಕ್ರಮವನ್ನು ಮಾರ್ಚ್ 9 ರಂದು ಎಕೆಜಿ ಭವನದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಒಂದು ಉತ್ಸಾಹಭರಿತ ವಾತಾವರಣದಲ್ಲಿ ಉದ್ಘಾಟಿಸಿದರು. ಸಾಮಾಜಿಕ ಮತ್ತು ರಾಜಕೀಯ ಪರಿವರ್ತನೆಯ ಆಂದೋಲನದಲ್ಲಿ ಸಂಸ್ಕೃತಿಯ ಮಹತ್ವನ್ನು ಅವರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಸಮಾರಂಭದಲ್ಲಿ ಭಾಗವಹಿಸಿದ್ದ ಹಿರಿಯ ರಂಗ ನಿರ್ದೇಶಕ ಹಬೀಬ್ ತನ್ವೀರ್ ಜನಗಳ ನಡುವೆ ಚೈತನ್ಯಶೀಲವಾಗಿರುವ ಕಲಾ ಪ್ರಕಾರಗಳನ್ನು ಆಧರಿಸಿದ ರಾಜಕೀಯ ಕಲಾಪ್ರಕಾರಗಳೇ ಅತ್ಯಂತ ಪರಿಣಾಮಕಾರಿಯಾಗಿರುತ್ತವೆ ಎಂದರು. ನಂತರ ದೇಶದ ಎಲ್ಲಾ ಕಡೆಗಳಿಂದ ಬಂದಿದ್ದ ಕಲಾವಿದರು ಪ್ರದರ್ಶನ ನೀಡಿದರು. ಅರ್ಧಗಂಟೆಯ ಕಾರ್ಯಕ್ರಮ ಎಂದು ಯೋಜಿಸಿದ್ದ ಸಭಿಕರ ಉತ್ಸಾಹದಿಂದಾಗಿ ಒಂದು ಗಂಟೆಗೂ ಹೆಚ್ಚು ಕಾಲ ನಡೆಯಿತು.

16 ತಂಡಗಳಲ್ಲಿ 200 ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ದಿಲ್ಲಿಯ ಸುತ್ತಮುತ್ತ 16 ಸ್ಥಳಗಳಲ್ಲಿ ಒಟ್ಟು 44 ಪ್ರದರ್ಶನಗಳು ನಡೆದಿದ್ದು ಜನಗಳಿಂದ ಅಪಾರ ಸ್ಪಂದನೆ ಗಳಿಸಿತು. ಹೆಚ್ಚಿನ ಪ್ರದರ್ಶನಗಳು ದುಡಿಯುವ ಜನಗಳ ವಸತಿ ಪ್ರದೇಶಗಳಲ್ಲಿ ನಡೆದವು. ನಿಜವಾದ ಅರ್ಥದಲ್ಲಿ ಇದು ಜನತೆಯ ಸಾಂಸ್ಕೃತಿಕ ಕಾರ್ಯಕ್ರಮವಾಗಿತ್ತು. ಜನತೆಯಲ್ಲಿರುವ ಸಾಂಸ್ಕೃತಿಕ ಅಭಿವ್ಯಕ್ತಿಯ ಹಸಿವು ಎಷ್ಟು ಪ್ರಮಾಣದ್ದು ಎಂಬುದನ್ನು ಇದು ತೋರಿಸಿತು. ಸಿನೆಮಾ ಉದ್ದಿಮೆಯ ಸಿನೇಮಾ, ದಿನೇ-ದಿನೇ ಹೆಚ್ಚುತ್ತಿರುವ ಚಾನಲ್‌ಗಳಿಂದ ಹಿಂಗದ ಹಸಿವೆಯಿದು. ದಿಲ್ಲಿಯ ಜನತೆಗೆ ನಮ್ಮ ದೇಸದ ಸಾಂಸ್ಕೃತಿಕ ವೈವಿಧ್ಯತೆಯ ಒಂದು ನೋಟವೂ ಸಿಕ್ಕಿತು. ಪರೇಡ್‌ಗಳಲ್ಲಿ ಕಾಣದ ನೋಟವಿದು. ಪ್ರಭುತದ ಲಗಾಮಿನ ಗಣತಂತ್ರ ದಿನದ ಪೆರೇಡ್‌ಗಳಲ್ಲಿ ಕಾಣದ ನೋಡವದು. ಈ ವೈವಿಧ್ಯತೆ ಭೌಗೋಳಿಕವಷ್ಟೇ ಅಲ್ಲ. ಒಂದೆಡೆ ಬಂಗಾಳದ ಪುರುಲಿಯಾದ ಛಾವೂ ನೃತ್ಯಕಾರರು ಪುರಾಣ ಕಥೆಗಳನ್ನು ಪ್ರಸ್ತುತ ಪಡಿಸಿದರೆ ಮತ್ತೊಂದೆಡೆ ಕೊಲ್ಕತ್ತದ ಜೋಗೇಶ್ ದತ್ತಾ ಮೈಮ್ ಆಕಾಡೆಮಿಯ ಮೂಕ ಪಾತ್ರಾಭಿನಯ, ಮತ್ತೊಂದೆಡೆ ಬಂಗಾಳ ವಿಜ್ಞಾನ ಜಾಲದ ಮೂಢನಂಬಿಕೆ - ವಿರೋಧಿ ಪವಾಡಗಳನ್ನು ಬಯಲು ಮಾಡುವ ಪ್ರದರ್ಶನಗಳು ಜನಗಳ ಮನಸೂರೆಗೊಂಡವು.

ಹಿಮಾಚಲ ಪ್ರದೇಶದ ಕಿನ್ನೌರ್‌ನ ನೃತ್ಯಗಾತಿ ಯವರ ಸಂಯೋಜಿತ ನೃತ್ಯಗಳು ಸಹೃದಯರ ಮನಗೆದ್ದರೆ, ಪಂಜಾಬಿನ ಇಪ್ಟಾದ ಹಾಗೂ ಬಿಹಾರದ ಗೋಪಾಲಗಂಜ್‌ನ ಬಿದೇಸಿಯಾ ತಂಡದ ನಾಟಕ ಸ್ವರೂಪದ ಹಾಡುಗಳು ದಮನದಿಂದ ವಿಮೋಚನೆಗೆ ಸಾಮೂಹಿಕ ಹೋರಾಟವೊಂದೇ ದಾರಿ, ಬೇಲಿಯ ಮೇಲೆ ಕೂತಿರದೆ ಈ ಕ್ರಾಂತಿ ಸೇನೆಯಲ್ಲಿ ಸೇರಿಕೊಳ್ಳಿ ಎಂದು ಆಹ್ವಾನ ನೀಡಿದವು. ಛಾವು ನೃತ್ಯಗಾರರ 'ಚಾಶೀರ್ ಲಢಾಯಿ' (ರೈತ ಹೋರಾಟ) ಬಂಗಾಳದಲ್ಲಿ ಆಪರೇಷನ್ ಬರ್ಗಾದ ಭೂಸುಧಾರಣಾ ಆಂದೋಲನವನ್ನು ಬಿಂಬಿಸಿದ್ದು, ಒಂದು ಪಾರಂಪರಿಕ ಪ್ರಾಕಾರವನ್ನು ಸಮಕಾಲೀನ ವಿಷಯಕ್ಕೆ ಅಳವಡಿಸುವ ಒಂದು ವಿಶಿಷ್ಟ ಪ್ರಯತ್ನ ವಾಗಿತ್ತು. ರಂಗ ಕರ್ಮಿ, ಹರ್ಯಾಣ ಜ್ಞಾನ ವಿಜ್ಞಾನ ಮಂಚ್, ಜನನಾಟ್ಯ ಮಂಚ್, ಅನಂತ, ಆಕ್ಟ್ ಒನ್ ಮುಂತಾದವರ ನಾಟಕಗಳಿಗೆ ತೀಕ್ಷ್ಣ ರಾಜಕೀಯ ವಿಡಂಬನೆಯಿದ್ದರೂ ಜನರನ್ನು ರಂಜಿಸುವ ಗುಣಗಳನ್ನು ಮರೆಯಲಿಲ್ಲ. ಹಬೀಬ್ ತನ್ವೀರ್‌ರವರ ನಯಾ ಥಿಯೇಟರ್ ತಂಡ, ಬಂಗಾಳದ ಹೂಗ್ಲಿಯ ಇಪ್ಟಾದ ಸಮೂಹಗಾಯನ ತಂಡದ ಪ್ರದರ್ಶನಗಳೂ ಇದ್ದವು. ಪ್ರಜಾ ನಾಟ್ಯ ಮಂಡಳಿಯ ಡಪ್ಪು ನೃತ್ಯಗಾರರ ಕಸರತ್ತುಗಳ ನಡುವೆಯೂ ತಾಳ-ಮೇಳ ಸಾಮೂಹಿಕ ಕಲೆಯಲ್ಲಿನ ಅವರ ವಿಶ್ವಾಸದಿಂದ ಮಾತ್ರವೇ ಸಾಧ್ಯ.

ಈ ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಎಲ್ಲಾ ಕಲಾವಿದರ ಮತ್ತು ಸಂಘಟಕರ ಬದ್ಧತೆ ಒಂದು ಮುಖ್ಯ ಅಂಶವಾಗಿತ್ತು. ಕಾರ್ಯಕ್ರಮ ನಡೆದ ಪ್ರತಿಯೊಂದು ಪ್ರದೇಶದಲ್ಲೂ ಸ್ಥಳೀಯ ಸಮಿತಿಗಳು ಈ ಕಾರ್ಯಕ್ರಮದ ಯಶಸ್ಸಿನ ಹಿಂದೆ ಇದ್ದ ಮೌನ ಶಕ್ತಿಗಳು ಈ ಸಾಂಸ್ಕೃತಿಕ ಘಟನೆಯಲ್ಲಿ ಬುಡಮಟ್ಟದ ಕಾರ್ಯಕರ್ತರ ಮಹತ್ವವನ್ನು ಇದು ತೋರಿಸಿತು. ಇಂತಹ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ಸಂಖ್ಯೆಯಲ್ಲಿ ನಡೆಸಿದರೆ ಮಾತ್ರವೇ ಬಲಪಂಥೀಯ ಸಂಸ್ಥೆಗಳು ಧರ್ಮದ ಹೆಸರಿನಲ್ಲಿ ನಡೆಸುವ ಕಾರ್ಯಕ್ರಮಗಳ ಆಕರ್ಷಣೆಯನ್ನು ಇಲ್ಲವಾಗಿಸಲು ಸಾಧ್ಯ ಎಂಬ ಅನುಭವವನ್ನು ಇದು ನೀಡಿತು. ಅಲ್ಲದೆ ಜನಗಳು ಕ್ಲಿಷ್ಟ ನಾಟಕಗಳನ್ನು ನೋಡಲು ದೀರ್ಘ ಸಮಯ ವ್ಯಯಿಸಲು ಸಿದ್ಧರಿಲ್ಲ ಎಂಬ ಭಾವನೆಯನ್ನು ಈ ಕಾರ್ಯಕ್ರಮದ ಯಶಸ್ಸು ಪ್ರಶ್ನಿಸಿದೆ ಎನ್ನುತ್ತಾರೆ ಒಬ್ಬ ವಿಶ್ಲೇಷಣಕಾರರು. ಕಲೆಯನ್ನು ರಸವತ್ತಾಗಿ ಮೇಲರಿಮೆಯ ಅಹಂಭಾವವಿಲ್ಲದೆ ಪ್ರಸ್ತುತಪಡಿಸಿದರೆ ದಮನಕ್ಕೊಳಗಾದ ಜನ ಎಂತಹ ಕ್ಲಿಷ್ಟ ವಿಷಯವನ್ನು ಅರ್ಥಮಾಡಿಕೊಳ್ಳಬಲ್ಲರು ಎಂದು ಅವರು ಹೇಳುತ್ತಾರೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH